ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 15 ಗುರುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 268 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ಫ್ಲೈ ಓವರ್ ನಿರ್ಮಾಣ ಸಂಬಂಧ ಹೆದ್ದಾರಿ ಪ್ರಾಧಿಕಾರದ ಮುಖ್ಯ ಕಾರ್ಯದರ್ಶಿ ಜೊತೆ ಸಂಸದ ಯದುವೀರ್ ಚರ್ಚೆ



ಮೈಸೂರಿನ ಮಣಿಪಾಲ್ ಆಸ್ಪತ್ರೆ ಜಂಕ್ಷನ್ ಬಳಿ ಫ್ಲೈ ಓವರ್ ನಿರ್ಮಾಣ ಸಂಬಂಧ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮುಖ್ಯ ಕಾರ್ಯದರ್ಶಿ ಉಮಾಶಂಕರ್ ಅವರೊಂದಿಗೆ ಸಂಸದ ಯದುವೀರ್ ಒಡೆಯರ್ ಚರ್ಚಿಸುತ್ತಿರುವುದು.

ಮೈಸೂರು,ಜ.14(ಎಂಕೆ)– ಮೈಸೂರು –ಬೆಂಗಳೂರು ಎಕ್ಸ್‌ಪ್ರೆಸ್ ವೇ ಸಂಧಿಸುವ ಮಣಿಪಾಲ್ ಆಸ್ಪತ್ರೆ ಜಂಕ್ಷನ್ (ಕೆಂಪೇಗೌಡ ವೃತ್ತ) ಬಳಿ ಫ್ಲೈ ಓವರ್ ನಿರ್ಮಾಣಕ್ಕೆ ತ್ವರಿತವಾಗಿ ಕ್ರಮ ಕೈಗೊಳ್ಳುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮುಖ್ಯ ಕಾರ್ಯದರ್ಶಿ ಉಮಾಶಂಕರ್ ಅವರಿಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಮಾಡಿದ್ದಾರೆ.

ನವದೆಹಲಿಯಲ್ಲಿ ಉಮಾಶಂಕರ್ ಅವರನ್ನು ಭೇಟಿ ಮಾಡಿದ ಸಂಸದರು, ಸಂಚಾರ ದಟ್ಟಣೆ ಹಾಗೂ ಫ್ಲೈ ಓವರ್ ನಿರ್ಮಾಣದಿಂದಾಗುವ ಅನುಕೂಲಗಳ ಬಗ್ಗೆ ಮಾಹಿತಿ ನೀಡಿ, ಫ್ಲೈ ಓವರ್ ನಿರ್ಮಾಣಕ್ಕೆ ತ್ವರಿತವಾಗಿ ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ. ಮನವಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮುಖ್ಯ ಕಾರ್ಯದರ್ಶಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಸಾಧ್ಯವಾದಷ್ಟು ಬೇಗ ಫ್ಲೇ ಓವರ್ ನಿರ್ಮಾಣವಾಗಲಿದೆ ಎಂದು ಪ್ರಕಟಣೆ ಮೂಲಕ ಮಾಧ್ಯಮಗಳಿಗೆ ಯದುವೀರ್ ಮಾಹಿತಿ ನೀಡಿದ್ದಾರೆ.

ಮೈಸೂರಿನ ಮಣಿಪಾಲ್ ಆಸ್ಪತ್ರೆಜಂಕ್ಷನ್ ಬಳಿ ಫ್ಲೈ ಓವರ್ ನಿರ್ಮಾಣ ಮಹತ್ವದ ಯೋಜನೆಯಾಗಿದ್ದು, ಅಪಘಾತಗಳು ಹಾಗೂ ವಾಹನಗಳ ದಟ್ಟಣೆ ಕಡಿಮೆಯಾಗುವುದಲ್ಲದೆ ಪ್ರಯಾಣದ ಸಮಯವು ಕಡಿಮೆಯಾಗಲಿದೆ ಎಂದಿದ್ದಾರೆ.

ಇದೇ ವೇಳೆ ಮೈಸೂರು–ಕುಶಾಲನಗರ ಹೆದ್ದಾರಿಯಲ್ಲಿ ಸರ್ವಿಸ್ ರಸ್ತೆ ಅಭಿವೃದ್ಧಿಪಡಿಸುವ ಕುರಿತು ಸಮಾಲೋಚನೆ ನಡೆಸಲಾಗಿದೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಅಭಿವೃದ್ಧಿಯ ಹಲವು ಯೋಜನೆಗಳಿಗೆ ಕೇಂದ್ರ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸುತ್ತಿದೆ ಎಂದು ತಿಳಿಸಿದ್ದಾರೆ.



ಮೈಸೂರು ತಾಲೂಕು ಡಿ.ಸಾಲುಂಡಿಯಲ್ಲಿ ಡಾ.ಹೆಚ್.ಬೀರಪ್ಪ ಅವರು ವಿಧಾನ ಪರಿಷತ್ ಸದಸ್ಯರಾದ ಡಾ.ಯತೀಂದ್ರ ಅವರ ಹೆಸರಿನಲ್ಲಿ ಸ್ಥಾಪಿಸಿರುವ ಜನತಾ ವಾಚನಾಲಯ ಉದ್ಘಾಟನೆ ವೇಳೆ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರನ್ನು ಸನ್ಮಾನಿಸಿದರು. ಈ ವೇಳೆ ಹೆಚ್.ಬೀರಪ್ಪ, ಹುಚ್ಚೇಗೌಡ, ಬಸಪ್ಪ, ಚಂದ್ರು, ಕನಕ, ಶಿವರಾಜ್, ಸುದೀಪ್, ಬಸವರಾಜು, ವರುಣ್ ಉಪಸ್ಥಿತರಿದ್ದರು.

ಮೈಸೂರಲ್ಲಿ ಸಂಕ್ರಾಂತಿ ಸಡಗರ, ಖರೀದಿ ಭರಾಟೆ ಜೋರು

- ಎಲ್ಲಾ ಮಾರುಕಟ್ಟೆಗಳಲ್ಲಿ ಜನವೋ ಜನ, ಮುಗಿಬಿದ್ದು ಖರೀದಿ
- ಹೊಸ ಬಟ್ಟೆ, ಎಳ್ಳು–ಬೆಲ್ಲ–ಕಬ್ಬು, ಹಣ್ಣು, ತರಕಾರಿ, ಅವರೆಕಾಯಿಗೆ ಖರೀದಿ



ದೇವರಾಜ ಮಾರುಕಟ್ಟೆಯ ಹೊರ ಭಾಗದಲ್ಲಿ ಹಬ್ಬಕ್ಕೆ ಬೇಕಾದ ಪದಾರ್ಥಗಳ ಖರೀದಿ ಭರಾಟೆ ಜೋರಾಗಿ ನಡೆಯುತ್ತಿರುವುದು.



ಹೆಣ್ಣು ಮಕ್ಕಳು ಎಳ್ಳು–ಬೆಲ್ಲ ಖರೀದಿಯಲ್ಲಿ ತೊಡಗಿರುವುದು.

ಮೈಸೂರು, ಜ.14(ಜಿಎ)– ವರ್ಷದ ಮೊದಲ ಹಬ್ಬ ಮಕರ ಸಂಕ್ರಾಂತಿ ಸಂಭ್ರಮ. ಎಲ್ಲೆಡೆ ಹಬ್ಬಕ್ಕೆ ಬೇಕಾದ ಪದಾರ್ಥಗಳ ಖರೀದಿ ಭರಾಟೆ ಜೋರು.

'ಎಳ್ಳು–ಬೆಲ್ಲ ತಿಂದು ಒಳ್ಳೆಯ ಮಾತಾಡು' ಮಾತಿಗೆ ಸಾಕ್ಷಿಯಾದ ಈ ಸಂಕ್ರಾಂತಿ ಹಬ್ಬವನ್ನು ಸುಗ್ಗಿಯ ಹಬ್ಬವೆಂತಲೂ ಕರೆಯುತ್ತಾರೆ. ಜನರು ಹಬ್ಬಕ್ಕೆ ಬೇಕಾದ ಹೂವು, ಹಣ್ಣು, ಪೊಂಗಲ್ ತಯಾರಿಕೆಗೆ ಅಗತ್ಯ ಪದಾರ್ಥಗಳು ಮತ್ತು ಎಳ್ಳು ಬೆಲ್ಲವನ್ನು ಸಂಭ್ರಮ ಸಡಗರದಿಂದ ಖರೀದಿಸುತ್ತಿರುವುದು ಕಂಡು ಬಂದಿತು. ಇದರಿಂದ ಚಿಕ್ಕ ಮಾರುಕಟ್ಟೆ, ದೊಡ್ಡ ಮಾರುಕಟ್ಟೆ ಸೇರಿದಂತೆ ಮೈಸೂರಿನಾದ್ಯಂತ ಮಾರು ಕಟ್ಟೆ, ಅಂಗಡಿಗಳಲ್ಲಿ ಕಾಲಿಡಲು ಜಾಗವಿಲ್ಲದಷ್ಟು ರಶ್ ಇತ್ತು.

> ಸಂಕ್ರಾಂತಿ ಹಬ್ಬವನ್ನು ಒಂದೊಂದು ಕಡೆ ಒಂದೊಂದು ರೀತಿ ಆಚರಿಸುತ್ತಾರೆ. ಮೈಸೂರು ಭಾಗದಲ್ಲಿ ಜನರು ಹಬ್ಬದ ದಿನದಂದು ಮುಂಜಾನೆ ಬೇಗ ಎದ್ದು ಸ್ನಾನ ಮಾಡಿ, ಸೂರ್ಯ ದೇವನಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ. ಮನೆ ಮುಂಭಾಗ ಚಿತ್ತಾಕರ್ಷಕ ರಂಗೋಲಿ ಬಿಡಿಸಿ ಅದಕ್ಕೆ ಬಣ್ಣ ತುಂಬುತ್ತಾರೆ. ಮನೆಗಳನ್ನು ಅಲಂಕರಿಸಿ, ಹೆಣ್ಣು ಮಕ್ಕಳು ಹೊಸ ಬಟ್ಟೆ ತೊಟ್ಟು ಎಳ್ಳು–ಬೆಲ್ಲ ಹಂಚುತ್ತಾರೆ. ಜಾನುವಾರುಗಳಿಗೆ ಅರಿಶಿಣ ಬಳಿದು ಪೂಜೆ ಸಲ್ಲಿಸುತ್ತಾರೆ. ಅಲ್ಲದೆ, ಎತ್ತುಗಳನ್ನು ಕಿಚ್ಚು ಹಾಯಿಸಲಾಗುತ್ತದೆ. ಜಾನುವಾರುಗಳನ್ನು ಅಲಂಕರಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ನಂತರ ಕಿಚ್ಚು ಹಾಯಿಸುವುದು ಮೈಸೂರು ಭಾಗದ ಸಂಕ್ರಾಂತಿಯ ವೈಶಿಷ್ಟ್ಯದಲ್ಲೊಂದಾಗಿದೆ. ಕಿಚ್ಚು ಹಾಯಿಸಿದ ಬಳಿಕ ಮನೆಗೆ ಮರಳುವ ರಾಸುಗಳಿಗೆ ಆರತಿ ಬೆಳಗಿ ಪೂಜೆ ಮಾಡಿ ಪ್ರಸಾದ ನೀಡಲಾಗುತ್ತದೆ.

ಮೈಸೂರಿನ ದೇವರಾಜ ಮಾರುಕಟ್ಟೆ, ಚಿಕ್ಕ ಗಡಿಯಾರ ವೃತ್ತ, ಶಿವರಾಂ ಪೇಟೆ, ವಾಣಿವಿಲಾಸ, ಮಂಡಿ ಮಾರ್ಕೆಟ್, ಅಗ್ರಹಾರ ವೃತ್ತ, ನಂಜುಮಳಿಗೆ ವೃತ್ತ, ಜೆಕೆ ಮೈದಾನ ಸೇರಿದಂತೆ ನಗರದ ವಿವಿಧ ಭಾಗಗಳಲ್ಲಿರುವ ಪ್ರಮುಖ ಮಾರುಕಟ್ಟೆ, ವೃತ್ತಗಳು ಹಾಗೂ ರಸ್ತೆಬದಿಯಲ್ಲಿ ಹಬ್ಬಕ್ಕೆ ಬೇಕಿರುವ ಅಗತ್ಯ ವಸ್ತುಗಳ ವ್ಯಾಪಾರ ಜೋರಾಗಿ ನಡೆಯಿತು. ಬುಧವಾರ ಬೆಳಗ್ಗೆಯಿಂದಲೇ ಮಾರುಕಟ್ಟೆಗೆ ದಾಂಗುಡಿಯಿಟ್ಟ ಗ್ರಾಹಕರು ಹೂ, ಹಣ್ಣು, ಕಬ್ಬು, ಎಳ್ಳು–ಬೆಲ್ಲ–ಕೊಬ್ಬರಿ, ಹೊಸ ಬಟ್ಟೆ ಸೇರಿದಂತೆ ಇತರೆ ವಸ್ತುಗಳನ್ನು ಖರೀ ದಿಸಲು ಮುಗಿಬಿದ್ದರು. ಸಂಕ್ರಾಂ ತಿಯ ಪ್ರಮುಖ ಆಕರ್ಷಣೆ ಎಳ್ಳು ಬೆಲ್ಲ ಬೀರಲು ಬೇಕಾದ ಎಳ್ಳು–ಬೆಲ್ಲ–ಕೊಬ್ಬರಿ ಮಿಕ್ಸ್ ಮತ್ತು ಕಬ್ಬಿನ ಜಲ್ಲೆಯ ವ್ಯಾಪಾರ ಹೆಚ್ಚಿನ ಪ್ರಮಾಣದಲ್ಲಿ ನಡೆಯಿತು.

ವರ್ಷದ ಮೊದಲ ಹಬ್ಬಕ್ಕೆ ಹೊಸ ಬಟ್ಟೆ ಖರೀದಿಸುವ ಸಲುವಾಗಿ ಜವಳಿ ಅಂಗಡಿಗಳಿಗೆ ಜನರು ಆಗಮಿಸಿದ್ದು, ಕಂಡು ಬಂದಿತ್ತು. ಜನರು ತಮಗಿಷ್ಟದ ಬಟ್ಟೆ ಖರೀದಿಸಿದರು. ಇದರಿಂದ ದೇವರಾಜ ಅರಸು ರಸ್ತೆ, ಶಿವರಾಂ ಪೇಟೆ, ಸಯ್ಯಾಜಿ ರಾವ್ ರಸ್ತೆ, ಮಕ್ಕಾಜಿ ಚೌಕ, ಒಲಂಪಿಯಾ ಚಿತ್ರಮಂದಿರ ಸುತ್ತಮುತ್ತ ಸೇರಿದಂತೆ ಪ್ರಮುಖ ಸ್ಥಳಗಳ ಬಟ್ಟೆ ಅಂಗಡಿಗಳಲ್ಲಿ ಜನ ಜಂಗುಳಿ ಕಂಡುಬಂತು.

ತಮಿಳುನಾಡು, ಮೈಸೂರು ಸೇರಿದಂತೆ ಸುತ್ತಮುತ್ತಲಿನ ಪ್ರದೇಶದ ರೈತರು ತಮ್ಮ ಜಮೀನಿನಲ್ಲಿ ಬೆಳೆದ ಕಬ್ಬಿನ ಜಲ್ಲೆಗಳನ್ನು ತಂದು ನಗರದ ಪ್ರಮುಖ ರಸ್ತೆ ಮತ್ತು ವೃತ್ತಗಳಲ್ಲಿ ಮಾರಾಟ ಮಾಡುತ್ತಿದ್ದಾರೆ. ಇತ್ತ ದೇವರಾಜ ಮಾರುಕಟ್ಟೆಯಲ್ಲಿ ಕಬ್ಬಿನ ಜಲ್ಲೆಯ ಉದ್ದ ಮತ್ತು ದಪ್ಪದ ಅನುಗುಣವಾಗಿ ಜಲ್ಲೆಯ ದಿಂಡಿಗೆ 10, 20, 30 ರೂ.ಗೆ ಮಾರಾಟವಾಯಿತು. ಇನ್ನೂ ಅಗ್ರಹಾರ ಸೇರಿದಂತೆ ಇತರೆಡೆ ಪೂರ್ಣ ಜಲ್ಲೆಗೆ 50ರಿಂದ 60 ರೂಗೆ ಮಾರಾಟವಾದ ದೃಶ್ಯಗಳು ಕಂಡು ಬಂದವು.

ಇನ್ನೂ ಎಳ್ಳು–ಬೆಲ್ಲ ಮಿಕ್ಸ್ ಇರುವ 1 ಕೆಜಿಯ ಪ್ಯಾಕೆಟ್ 160–180 ರೂ.ಗೆ ಮಾರಾಟವಾಯಿತು. ಕೆಲವರು ಎಳ್ಳು ಬೆಲ್ಲ ಮಿಕ್ಸ್ ಪ್ಯಾಕೆಟ್ ಕೊಂಡರೆ, ಬಹುತೇಕರು ಮಿಕ್ಸ್‌ಗೆ ಬೇಕಾದ ಎಳ್ಳು, ಬೆಲ್ಲ, ಕೊಬ್ಬರಿ, ಕಡಲೆ ಬೀಜ, ಸಕ್ಕರೆ ಅಚ್ಚು, ಕಲ್ಲು ಸಕ್ಕರೆ ಅಚ್ಚು ಸೇರಿದಂತೆ ಇನ್ನಿತರ ಪದಾರ್ಥಗಳನ್ನು ಸೆಪರೇಟಾಗಿ ಖರೀದಿಸಿ ಮನೆಗೆ ಕೊಂಡೊಯ್ದು ಮಿಕ್ಸ್ ಮಾಡಿ ಹಂಚುತ್ತಾರೆ. ಒಂದು ಕೆಜಿ ಎಳ್ಳಿಗೆ 280 ರೂ., ಕತ್ತರಿಸಿದ ಬೆಲ್ಲ ಕೆಜಿಗೆ 140 ರೂ., ಕಡಲೆಬೀಜ (ಬೇಳೆ) ಕೆಜಿಗೆ 200, ಹುಂಡೆ ಕಡಲೇ ಬೀಜ ಕೆಜಿಗೆ 180 ರೂ. ಕತ್ತರಿಸಿದ ಕೊಬ್ಬರಿ ಕೆಜಿಗೆ 500–600 ರೂ.ಗೆ ಮಾರಾಟವಾಯಿತು. ಬಣ್ಣ ಬಣ್ಣದ ಹಾಗೂ ವಿವಿಧ ಆಕೃತಿಯ ಕಲ್ಲು ಸಕ್ಕರೆ ಅಚ್ಚುಗಳ ಬೆಲೆ 160–180 ರೂ ಇತ್ತು.


ಹೂವಿನ ಬೆಲೆ ಅಷ್ಟು ಏರಿಕೆಯಾಗಿಲ್ಲ. ಸೇವಂತಿಗೆ 40–50 ರೂ. ಮಲ್ಲಿಗೆ ಮೀಟರ್‌ಗೆ 100–150 ರೂ. ಕನಕಾಂಬರ 150, ಕಾಕಡ 80–100 ರೂ. ಮರಳೆ 80 ರೂ, ಗುಲಾಬಿ 160 ರೂ, ಹಾಗೂ ಬಾಳೆಹಣ್ಣು ಕೆಜಿಗೆ 80–100 ರೂ.ಗೆ ಮಾರಾಟವಾಯಿತು. ತರಕಾರಿ ಮತ್ತು ಹಣ್ಣುಗಳ ಬೆಲೆಯೂ ಹೆಚ್ಚು ಏರಿಕೆಯಾಗಿಲ್ಲ. ಕೆಲವರು ಎಳ್ಳು ಬೆಲ್ಲದ ಜತೆಗೆ ಕಿತ್ತಲೆ, ಸೊಪ್ಪಿನ ಕಡಲೆಯನ್ನೂ ನೀಡುವುದರಿಂದ ಸೊಪ್ಪಿನ ಕಡಲೆಯ ಮಾರಾಟವೂ ಜೋರಾಗಿತ್ತು. ಕಿತ್ತಲೆ ಕೆಜಿಗೆ 80, ಸೌತೆಕಾಯಿ ಕೆಜಿಗೆ 30 ರೂ. ಇತ್ತು.

ಇತ್ತೀಚಿನ ದಿನಗಳಲ್ಲಿ ಎಳ್ಳುಬೆಲ್ಲವನ್ನು ಪ್ಲಾಸ್ಟಿಕ್ ಡಬ್ಬಗಳಲ್ಲಿ ನೀಡುವುದರಿಂದ ಪ್ಲಾಸ್ಟಿಕ್ ಡಬ್ಬಗಳಿಗೂ ಬೇಡಿಕೆ ಹೆಚ್ಚಿತ್ತು. ದೇವರಾಜ ಮಾರುಕಟ್ಟೆ, ಶಿವರಾಂ ಪೇಟೆ, ಅಗ್ರಹಾರ ಸೇರಿದಂತೆ ನಗರದ ವಿವಿಧೆಡೆ ಭರ್ಜರಿಯಾಗಿ ವ್ಯಾಪಾರ ನಡೆಯಿತು. ಗುಣಮಟ್ಟಕ್ಕೆ ತಕ್ಕಂತೆ ಡಜನ್‌ಗೆ 100ರಿಂದ 500ರೂವರೆಗೂ ದರ ಇತ್ತು. ತರಕಾರಿ ಬೆಲೆಯಲ್ಲಿ ಯಾವುದೇ ಬದಲಾವಣೆಯಾಗಿರಲಿಲ್ಲ. ಎಲ್ಲವೂ ಕೈಗೆಟುಗುವ ಬೆಲೆಯಲ್ಲಿ ಮಾರಾಟ ಮಾಡಲಾಗುತ್ತಿತು.

ನಗರದ ಪ್ರತಿಯೊಂದು ವೃತ್ತದಲ್ಲಿಯೂ ಅವರೇಕಾಯಿಯನ್ನು ರಾಶಿ ರಾಶಿ ಹಾಕಿಕೊಂಡು ಮಾರಾಟ ಮಾಡಲಾಗುತ್ತದೆ. ಹಸಿ ಅವರೇಕಾಯಿ ಕೆಜಿ 50 ರೂ., ಹಿತ್ತಿಕಿಸಿದ ಅವರೇ ಬೇಳೆ ಕೆಜಿ 400 ರೂ., ಕೆಲವೆಡೆ ಸೇರು–ಪಾವುಗಳಲ್ಲಿಯೂ ಮಾರಾಟ ಮಾಡುತ್ತಿದ್ದದು ಕಂಡುಬಂದಿತ್ತು.

ಎಸ್‌ಇಪಿ, ಟಿಎಸ್‌ಪಿ ಅನುದಾನವಿಲ್ಲದೆ ಉದ್ಯಮ ಸ್ಥಾಪನೆಗೆ ಅರ್ಜಿ ಹಾಕಿದ ಬೆರಳೆಣಿಕೆಯಷ್ಟು ಮಂದಿಗೆ ಸಾಲ

ಪರಿಶಿಷ್ಟ ಕೈಗಾರಿಕೋದ್ಯಮಿಗಳ ಉತ್ಪನ್ನ ಸಹಕಾರ ಸಂಘದ ರಾಜ್ಯಾಧ್ಯಕ್ಷ ಆರ್.ಮಂಜುನಾಥ್ ವಿಷಾದ



ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡದ ಕೈಗಾರಿಕೋದ್ಯಮಿಗಳ ಉತ್ಪನ್ನ ಹಾಗೂ ಮಾರಾಟ ಸಹಕಾರ ಸಂಘದಿಂದ ಹೊಸ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು.

ಮೈಸೂರು ಜ.14(ಎಂಕೆ)– ಕಳೆದ ಎರಡು ವರ್ಷಗಳಿಂದ ಎಸ್‌ಇಪಿ/ಟಿಎಸ್‌ಪಿ ಯೋಜನೆಗೆ ರಾಜ್ಯ ಸರ್ಕಾರದಿಂದ ಅಗತ್ಯವಿರುವ ಅನುದಾನ ಬಿಡುಗಡೆಯಾಗದೆ ಉದ್ಯಮ ಸ್ಥಾಪನೆಗೆ ಅರ್ಜಿ ಹಾಕಿದವರಲ್ಲಿ ಬೆರಳಣಿಕೆಯಷ್ಟು ಜನರಿಗೆ ಮಾತ್ರವೇ ಸಾಲ ದೊರೆತಿದೆ ಎಂದು ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡದ ಕೈಗಾರಿಕೋದ್ಯಮಿಗಳ ಉತ್ಪನ್ನ ಹಾಗೂ ಮಾರಾಟ ಸಹಕಾರ ಸಂಘದ ರಾಜ್ಯಾಧ್ಯಕ್ಷ ಆರ್.ಮಂಜುನಾಥ್ ಬೇಸರ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಸುದ್ದಿಗೋಷ್ಠಿಯನ್ನು ದ್ದೇಶಿಸಿ ಮಾತನಾಡಿದ ಅವರು, ಎಸ್‌ಇಟಿ/ಟಿಎಸ್‌ಪಿ ಯೋಜನೆಗೆ ಅನುದಾನದ ಕೊರತೆ, ಕೊರೊನಾ ಲಾಕ್‌ಡೌನ್, ಜಿಎಸ್‌ಟಿ ದುಪ್ಪಟ್ಟು ತೆರಿಗೆಯಿಂದ ಕೈಗಾರಿಕೆಗಳು ಮುಚ್ಚಿ ಹೋಗುತ್ತಿವೆ. ಕೈಗಾರಿಕೆಗಳ ಪುನಶ್ಚೇತನಕ್ಕಾದರೂ ಸರ್ಕಾರ ಪ್ರೋತ್ಸಾಹ ನೀಡಬೇಕು. ಹಾಗೆಯೇ ಪಿಎಂಇಜಿಪಿ ಯೋಜನೆ ಬಗ್ಗೆ ವ್ಯಾಪಕವಾಗಿ ತಿಳಿಸುವ ಕಾರ್ಯಕ್ರಮಗಳ ಆಯೋಜನೆಯಾಗಬೇಕು ಎಂದು ಒತ್ತಾಯಿಸಿದರು.

2019–20ರಲ್ಲಿ ಸ್ಥಾಪನೆಯಾದ ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡದ ಕೈಗಾರಿಕೋದ್ಯಮಿಗಳ ಉತ್ಪನ್ನ ಹಾಗೂ ಮಾರಾಟ ಸಹಕಾರ ಸಂಘವು ನಿರುದ್ಯೋಗ ನಿವಾರಣೆ ಹಾಗೂ ಉದ್ಯಮಿಗಳಿಂದ ತೆರಿಗೆ ಕಟ್ಟಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದು, 10 ಸಾವಿರ ಠೇವಣಿದಾರರನ್ನು ಮಾಡುವ ಗುರಿಯನ್ನು ಹೊಂದಿದೆ ಎಂದು ತಿಳಿಸಿದರು.

ಉದ್ದಿಮೆದಾರರ ಉತ್ಪನ್ನಗಳಿಗೆ ಮಾರುಕಟ್ಟೆ ಸೃಷ್ಟಿ, ಉದ್ದಿಮೆ ನಡೆಸುವ ವೇಳೆ ಎದುರಾಗುವ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಸಂಘ ಕೆಲಸ ಮಾಡುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಸಿಗುವ ಸವಲತ್ತು ದೊರಕಿಸಿಕೊಡುವುದು ಮತ್ತು ಅವುಗಳ ಬಗ್ಗೆ ಅರಿವು ಮೂಡಿಸಲು ಶ್ರಮಿಸುತ್ತಿದೆ. ಸಂಘಕ್ಕೆ ಜಿಎಸ್‌ಟಿ ನೋಂದಣಿ ಮಾಡಿಸಿಕೊಂಡಿರುವವರು ಷೇರು ಹಣ ಪಾವತಿಸಿ ಸದಸ್ಯರಾಗಬಹುದಾಗಿದೆ. ಉತ್ತಮ ಉದ್ದಿಮೆದಾರರಾಗಲು ಸಂಘ ನೆರವಾಗಲಿದೆ ಎಂದರು.

ಬಳಿಕ ಸಂಘದ ವತಿಯಿಂದ ಹೊರತಂದಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಲಾಯಿತು. ಸಂಘದ ಉಪಾಧ್ಯಕ್ಷರಾದ ಬಿ.ಕಲಾವತಿ, ನಿರ್ದೇಶಕರಾದ ವಿಜಯಶಂಕರ್, ಡಿ.ಈಶ್ವರ, ಶಿವಣ್ಣ ನಂಜಾಪುರ, ಬಿ.ಧರಣೇಂದ್ರ, ಲಚಮಪ್ಪ ನಾಯ್ಕ, ತೇನ್‌ಮೋಳಿ, ಶೋಭಾರಾಣಿ ಮತ್ತಿತರರಿದ್ದರು.



ಪಿಂಜಾರಪೋಲ್‌ನಲ್ಲಿ ಸಂಕ್ರಾಂತಿ ಸಂಭ್ರಮ... ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಪಿಂಜಾರಪೋಲ್‌ನಲ್ಲಿ ಅಪೂರ್ವ ಸ್ನೇಹ ಬಳಗದಿಂದ ಸಂಕ್ರಾಂತಿ ಹಬ್ಬದ ಅಂಗವಾಗಿ ಗೋಪಾಲಕರಿಗೆ ಎಳ್ಳು ಬೆಲ್ಲ ಹಂಚಿ, ಗೋವುಗಳಿಗೆ ಬೆಲ್ಲ ನೀಡಿ, ಸಂಕ್ರಾಂತಿ ಆಚರಿಸಲಾಯಿತು. ಈ ವೇಳೆ ಅಪೂರ್ವ ಸುರೇಶ್, ಆನಂದ್ ಜಟ್ಟಿ ಪ್ರಸಾದ, ದೂರ ರಾಜಣ್ಣ, ವಿನೋದ್, ಗೌರಿಶಂಕರನಗರ ಶಿವು, ಆದರ್ಶ, ಶ್ರೀಕಾಂತ್ ಕಶ್ಯಪ್, ರಾಮಚಂದ್ರ, ಶಿವಲಿಂಗಸ್ವಾಮಿ, ಜಯಸಿಂಹ ಇನ್ನಿತರರಿದ್ದರು.

ಚುನಾವಣೆ ಬಂದಾಗಲೆಲ್ಲಾ ಮದ್ಯ ಸೇವಿಸುವವರ ಸಂಖ್ಯೆ ಹೆಚ್ಚಾಗುತ್ತೆ...!

ಹುಣಸೂರು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ವಿಷಾದ



ಬಸವಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರದ 56ನೇ 'ಕುಡಿತ ಬಿಡಿಸುವ ಉಚಿತ ಶಿಬಿರ'ದ ಸಮಾರೋಪ ಕಾರ್ಯಕ್ರಮವನ್ನು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಉದ್ಘಾಟಿಸಿದರು. ಬಸವಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರದ ಸಂಸ್ಥಾಪಕ ಎಸ್.ಬಸವರಾಜು ಮತ್ತಿತರರಿದ್ದರು.

ಮೈಸೂರು, ಜ.14(ಎಂಕೆ)– ದೇಶದಲ್ಲಿ ನಡೆಯುವ ಪ್ರತಿ ಚುನಾವಣೆಯಿಂದಲೂ ಮದ್ಯದ ಘಾಟು ಹೆಚ್ಚಾಗುತ್ತಿದ್ದು, ಮದ್ಯ ವ್ಯಸನ ಕೂಪಕ್ಕೆ ಯುವ ಸಮೂಹ ಬಲಿಯಾಗುತ್ತಿದೆ ಎಂದು ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ವಿಷಾದ ವ್ಯಕ್ತಪಡಿಸಿದರು.

ಮೈಸೂರಿನ ಹೆಬ್ಬಾಳಿನಲ್ಲಿರುವ ಬಸವ ಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರದಲ್ಲಿ 6ನೇ ವಾರ್ಷಿಕೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ 10 ದಿನಗಳ 56ನೇ 'ಕುಡಿತ ಬಿಡಿಸುವ ಉಚಿತ ಶಿಬಿರದ' ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದಲ್ಲಿ ಚುನಾವಣೆಗಳು ಬಂದಾಗಲೆಲ್ಲಾ ಮದ್ಯ ಸೇವಿಸುವವರ ಸಂಖ್ಯೆ ಹೆಚ್ಚಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಹುಣಸೂರು ವಿಧಾನಸಭಾ ಕ್ಷೇತ್ರದಲ್ಲಿ ಮೂರು ಬಾರಿ ಶಾಸಕನಾಗಿ ಆಯ್ಕೆಯಾಗಿದ್ದು, ಒಂದೇ ಒಂದು ಬಾರ್ ತೆರೆಯಲು ಅವಕಾಶ ನೀಡಲಿಲ್ಲ. ನನ್ನ ನಂತರ ಹೊಸದಾಗಿ 15 ಬಾರ್‌ಗಳಾಗಿವೆ. ಇದರಿಂದ ಯಾರಿಗೂ ಒಳ್ಳೆಯದಾಗುವುದಿಲ್ಲ. ಕ್ಷೇತ್ರದ ನಮ್ಮ ಅಣ್ಣ–ತಮ್ಮಂದಿರೇ ಕುಡಿತದ ಚಟಕ್ಕೆ ಬಲಿಯಾಗಿ ಜೀವನ ಹಾಳು ಮಾಡಿಕೊಂಡಿದ್ದಾರೆ ಎಂದು ಹೆಚ್.ಪಿ. ಮಂಜುನಾಥ್ ಬೇಸರ ವ್ಯಕ್ತಪಡಿಸಿದರು.

ವ್ಯಸನ ಮುಕ್ತ ಸಮಾಜ ನಿರ್ಮಾಣ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ನಮಗೆ ಮೊದಲು ಯಾವ ರೀತಿ ಬದುಕಬೇಕು ಎಂಬುದರ ಸ್ಪಷ್ಟ ಅರಿವಿರಬೇಕು. ದಾರಿ ತಪ್ಪಿಸುವವರಿಂದ ದೂರ ಇರಬೇಕು. ಶಿಬಿರದಲ್ಲಿ ಭಾಗವಹಿಸಿ, ಮದ್ಯ ವ್ಯಸನದಿಂದ ಹೊರ ಬಂದಿರುವವರು ತಮ್ಮ ಜೀವನದಲ್ಲಿ ಎಂದಿಗೂ ಮದ್ಯ ಸೇವನೆ ಮಾಡದಂತೆ ಉತ್ತಮ ಬದುಕು ಕಟ್ಟಿಕೊಳ್ಳುವಂತೆ ಕಿವಿಮಾತು ಹೇಳಿದರು.

ಬಸವಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರದ ಸಂಸ್ಥಾಪಕ ಎಸ್.ಬಸವರಾಜು ಮಾತನಾಡಿ, ಕೇಂದ್ರವು ಕಳೆದ 6 ವರ್ಷಗಳಲ್ಲಿ 56 ಕುಡಿತ ಬಿಡಿಸುವ ಉಚಿತ ಶಿಬಿರವನ್ನು ಆಯೋಜಿಸಿದ್ದು, 15 ಸಾವಿರಕ್ಕೂ ಹೆಚ್ಚು ಜನರು ಪರಿವರ್ತನೆಯಾಗಿ ತಮ್ಮ ಕುಟುಂಬದೊಂದಿಗೆ ಉತ್ತಮ ಜೀವನ ನಡೆಸುವುದಲ್ಲದೆ ಒಳ್ಳೆಯ ಪ್ರಜೆಗಳಾಗಿ ಬದುಕು ನಡೆಸುತ್ತಿದ್ದಾರೆ. ಹಾಗೆಯೇ ಮದ್ಯ ವ್ಯಸನಕ್ಕೆ ತುತ್ತಾಗಿರುವವರ ಮಕ್ಕಳಿಗೆ ಆಶ್ರಯ ನೀಡಿ, ಶಿಕ್ಷಣ ದೊರಕಿಸುವುದು ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ ಎಂದರು. ಅಖಿಲ ಭಾರತ ವೀರಶೈವ ಮಹಾಸಭಾದ ಹುಣಸೂರು ಘಟಕದ ಅಧ್ಯಕ್ಷ ಸೋಮಶೇಖರ್ ಇದ್ದರು.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಜನವರಿ 15 ಗುರುವಾರ 2026
46
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸಂಪುಟ: 46 | ಸಂಚಿಕೆ: 268 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ನಕ್ಕರೆ ಅದೇ ಸ್ವರ್ಗ

ಗೆಳತಿ : ನನ್ನ ಲವರ್ ಅಂದ್ರೆ ನಂಗೆ ತುಂಬಾ ಇಷ್ಟ ಕಣೇ! ಅವನ ಹತ್ತಿರ 10 ಬ್ಯಾಂಕ್ ಕ್ರೆಡಿಟ್ ಕಾರ್ಡುಗಳಿವೆ ಗೊತ್ತಾ!

ಮತ್ತೊಬ್ಬ ಗೆಳತಿ : ಅಷ್ಟೇನಾ! ನನ್ನ ಲವರ್ ಹತ್ರ ಒಂದು ಪ್ರೈವೇಟ್ ಬ್ಯಾಂಕಿನ ಬೀಗದ ಕೀ ಇದೆ ಗೊತ್ತಾ!

ಗೆಳತಿ : ಹೌದೇನೆ! ಅವರು ಬ್ಯಾಂಕ್ ಮ್ಯಾನೇಜರ್ ಅಥವಾ ಓನರ್!

ಮತ್ತೊಬ್ಬ ಗೆಳತಿ : ಅಲ್ಲ ಅವರು ಬ್ಯಾಂಕಲ್ಲಿ ವಾಚ್‌ಮನ್

ಮೈಸೂರು ಮಿತ್ರ

ಗುರುವಾರ, ಜನವರಿ 15, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)


ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಮನಸ್ಸಿನಲ್ಲಿ ಇರುವ ನೋವುಗಳು ವಾಸಿಯಾಗುವುದಕ್ಕೆ ಬೇಕಾಗಿರುವುದು ಎರಡೇ ಎರಡು ಔಷಧ... ಒಂದು ಕಾಲ, ಇನ್ನೊಂದು ಮೌನ.

ವೇದ ಸುಳ್ಳಾದರೂ { ಆಟಕ್ಕುಂಟು
ಗಾದೆ ಸುಳ್ಳಾಗದು { ಲೆಕ್ಕಕ್ಕಿಲ್ಲ

ವರ್ಷದ ಸಮೃದ್ಧಿಯ ಹಬ್ಬ ಸಂಕ್ರಾಂತಿ



ಎಳ್ಳುಬೆಲ್ಲ ಸವಿದು ಒಳ್ಳೆಯ ಮಾತಾಡಿ...

ಕುಟುಂಬದವರೆಲ್ಲ ಸೇರಿ ಒಟ್ಟಿಗೆ ಕುಳಿತು 'ಎಳ್ಳು ಬೆಲ್ಲ ಸವಿದು, ಒಳ್ಳೆಯ ಮಾತಾಡಿ' ಎಂಬ ನುಡಿಯು ಸಂಕ್ರಾಂತಿ ಹಬ್ಬದ ತತ್ವವನ್ನು ಅತ್ಯಂತ ಸರಳವಾಗಿ ವಿವರಿಸುತ್ತದೆ.ಜೀವನದಲ್ಲಿ ಸಿಹಿಕಹಿ ಅನುಭವಗಳು ಸಹಜ ಅದನ್ನು ಎಲ್ಲರೂ ಬಾಳಲ್ಲಿ ಸಮಾನಾಗಿ ಸ್ವೀಕರಿಸಿ, ಪರಸ್ಪರ ಒಳ್ಳೆಯ ಮಾತುಗಳ ಮೂಲಕ ಸಂಬಂಧಗಳನ್ನು ಗಟ್ಟಿಗೊಳಿಸಬೇಕು, ನಗುತ್ತಿರಬೇಕು ಎಂಬ ಸಂದೇಶ ಇದರಲ್ಲಿ ಅಡಗಿದೆ. ಈ ಹಬ್ಬದ ಸಂಕೇತವಾಗಿ ಮಕ್ಕಳು ಗಾಳಿಪಟ ಹಾರಿಸುವುದು, ಹೆಣ್ಣುಮಕ್ಕಳು ಬಗೆಬಗೆಯ ರಂಗೋಲಿ ಬಿಡಿಸುವುದು, ಹಿರಿಯರು ಪೂಜೆ ಪುನಸ್ಕಾರಗಳಲ್ಲಿ ತೊಡಗುವುದು, ಎತ್ತಿನಗಾಡಿ ಮೆರವಣಿಗೆ, ಕೋಲಾಟ ಮುಂತಾದವುಗಳು ಹಬ್ಬದ ಸಂಭ್ರಮವನ್ನು ಹೆಚ್ಚಿಸುತ್ತದೆ. ಕೆಲವು ಪ್ರದೇಶಗಳಲ್ಲಿ ಸುಗ್ಗಿಯ ಕುಣಿತ, ಸುಗ್ಗಿಯ ಜನಪದ ಹಾಡು, ದೇವಸ್ಥಾನಗಳಲ್ಲಿ ದನಗಳ ಜಾತ್ರೆಗಳು, ಸಾಂಪ್ರದಾಯಿಕ ನೃತ್ಯಗಳು ಹಾಗೂ ಜನಪದ ಕಲೆಗಳ ಪ್ರದರ್ಶನಗಳು ಸಹ ನಡೆಯುತ್ತವೆ. ಇವು ನಮ್ಮ ಸಂಸ್ಕೃತಿ ಸಂಪ್ರದಾಯಗಳನ್ನು ಇಂದಿನ ಪೀಳಿಗೆಯವರಿಗೆ ತಿಳಿಸುತ್ತದೆ.



ಚಲುವೇಗೌಡ ಡಿ ಎಸ್
ಲೇಖಕ, ದೊಡ್ಡಹಳ್ಳಿ ಗ್ರಾಮ
ಹಾಸನ ಜಿಲ್ಲೆ
9606198517

ಭಾರತೀಯ ಹಬ್ಬಗಳ ಸಾಲಿನಲ್ಲಿ ಸಂಕ್ರಾಂತಿಯು ಒಂದು ಮಹತ್ವದ ಸ್ಥಾನವನ್ನು ಪಡೆದಿರುವ ಸಂಭ್ರಮ, ಸಡಗರದ ಹಬ್ಬ. ರವಿಯು ಧನು ರಾಶಿಯಿಂದ ಮಕರ ರಾಶಿಗೆ ಪ್ರವೇಶಿಸುವ ಸುದಿನವನ್ನು, ಮಕರ ಸಂಕ್ರಾಂತಿ ದಿನ ಅಥವಾ ಮಕರ ಸಂಕ್ರಮಣ ದಿನವೆಂದು ಆಚರಿಸುತ್ತೇವೆ. ಈ ದಿನದಿಂದ ಉತ್ತರಾಯಣ ಆರಂಭವಾಗುತ್ತದೆ. ಅಂದರೆ ಸೂರ್ಯನು ದಕ್ಷಿಣದಿಂದ ಉತ್ತರಕ್ಕೆ ಚಲಿಸುವ ಆರು ತಿಂಗಳ ಅವಧಿಯು ಆರಂಭವಾಗುವ ಸಂಕೇತವನ್ನು ಈ ಹಬ್ಬವು ಸೂಚಿಸುತ್ತದೆ. ವರ್ಷದ ಮೊದಲ ಹಬ್ಬ ಮಕರ ಸಂಕ್ರಾಂತಿ. ಸಂಕ್ರಾಂತಿಯಂದೆ ಮಕರ ಜ್ಯೋತಿ ದರ್ಶನದ ಭಾಗ್ಯ ಸಿಗುತ್ತದೆ.

ಪ್ರಕೃತಿಯ ಋತುಚಕ್ರದಲ್ಲಿ ಬದಲಾವಣೆ

ಈ ಸಮಯದಲ್ಲಿ ಹಗಲುಗಳ ಕಾಲವು ಉದ್ದ ಹಾಗೂ ರಾತ್ರಿಗಳ ಸಮಯ ಕಡಿಮೆಯಾಗಿ ರುತ್ತದೆ ಅಂದರೆ ಸೂರ್ಯೋದಯ ಬೇಗ, ಸೂರ್ಯಾಸ್ತವು ಅಂದರೆ ಸೂರ್ಯನು ಮುಳುಗುವ ಸಮಯ ತಡವಾಗಿರುತ್ತದೆ. ಅಂದರೆ ರಾತ್ರಿ ಗಿಂತ ಹಗಲಿನ ಅವಧಿಯು ಹೆಚ್ಚಾಗಿರುತ್ತದೆ. ಸಾಮಾನ್ಯವಾಗಿ ಸಂಕ್ರಾಂತಿಯು ವರ್ಷದ ಮೊದಲ ಮಾಸದ 14 ಅಥವಾ 15 ರಂದು ಬರುತ್ತದೆ. ಜೊತೆಗೆ ಪ್ರಕೃತಿಯ ಋತುಚಕ್ರದಲ್ಲಿ ಇದೊಂದು ಹೊಸ ಬೆಳಕು, ಹೊಸ ಶಕ್ತಿ, ವಾತಾವರಣ ಬದಲಾವಣೆ, ಹೊಸ ಫಸಲು ಹಾಗೂ ಹೊಸ ಆಶಯಗಳನ್ನು ಸೂಚಿಸುತ್ತದೆ.

ಕೃಷಿ ಹಾಗೂ ರೈತರ ಹಬ್ಬ

ಸಂಕ್ರಾಂತಿ ಹಬ್ಬವು ರೈತರು ಹಾಗೂ ಕೃಷಿಯೊಂದಿಗೆ ಹಿಂದಿನಿಂದಲೂ ಬೆಸೆದುಕೊಂಡಿದೆ. ವಿಶೇಷವಾಗಿ ಅನ್ನದಾತರಿಗೆ ಸುಗ್ಗಿಯ ಕಾಲದ ಹಬ್ಬ.ಅಂದರೆ ರೈತರು ತಾವು ಬೆಳೆದ ಬೆಳೆಯನ್ನು ಕಟಾವು ಅಥವಾ ಕೊಯ್ಲು ಮಾಡುವ ಕಾಲದ ಸುಗ್ಗಿಯ ಹಬ್ಬ. ಭತ್ತ, ರಾಗಿ, ಜೋಳ, ಸಕ್ಕರೆ ಕಬ್ಬು, ಎಳ್ಳು ಇತ್ಯಾದಿ ಬೆಳೆಗಳ ಕೊಯ್ಲು ಈ ಕಾಲಕ್ಕೆ ಪೂರ್ಣಗೊಳ್ಳುತ್ತವೆ. ಒಕ್ಕಣೆ ಮಾಡಿದ ಹೊಸ ಬೆಳೆಯನ್ನು ರಾಶಿ ಮಾಡಿ ಮನೆಗೆ ತಂದು ಸಂತೋಷದಿಂದ ರೈತರು ದೇವರಿಗೆ ಸಮರ್ಪಿಸುವ ಮೂಲಕ ಪೂಜೆ ಸಲ್ಲಿಸಿ ಕುಟುಂಬದವರೆಲ್ಲ ಸಂಭ್ರಮಿಸುವ ದಿನವೇ ಸಂಕ್ರಾಂತಿ.ಹೀಗಾಗಿ ಸಂಕ್ರಾಂತಿಯನ್ನು ರೈತರ ಹೊಲ, ಮನೆಯ ಹಬ್ಬ ಹಾಗೂ ಬೆಳೆಗಳ ಹಬ್ಬ ಎಂದು ಹೆಸರಾಗಿದೆ. ಅನ್ನದಾತರ ಪರಿಶ್ರಮಕ್ಕೆ ಗೌರವ ಸಲ್ಲಿಸುವುದು ಮತ್ತು ಭೂತಾಯಿಗೆ ಕೃತಜ್ಞತೆ ಹೇಳುವುದು ಈ ಹಬ್ಬದ ವಿಶೇಷತೆ.

ಎತ್ತುಗಳ ಪೂಜಿಸುವ ಸಂಪ್ರದಾಯ

ಎತ್ತುಗಳು ರೈತರ ಅವಿಭಾಜ್ಯ ಅಂಗ ಹಾಗೂ ಅವುಗಳು ಎರಡು ಕಣ್ಣುಗಳು ಇದ್ದಂತೆ. ಹಳ್ಳಿಗಳಲ್ಲಿ ಈ ಸಮಯದಲ್ಲಿ ವರ್ಷವಿಡೀ ಮಣ್ಣನ್ನು ಉಳುಮೆ ಮಾಡಿ ರೈತನಿಗೆ ಬೆಳೆಯಲು ಸಹಕರಿಸಿದ ಎತ್ತುಗಳು ಹಾಗೂ ದನಗಳನ್ನು ತೊಳೆದು, ಅಲಂಕಾರ ಮಾಡಿ ಪೂಜೆ ಮಾಡುವ ಪದ್ಧತಿ ಇದೆ. ಹೊಲದ ಕೆಲಸದಲ್ಲಿ ದುಡಿದ ಮೂಕ ಪ್ರಾಣಿಗೆ ಗೌರವಿಸುವ ಭಾವನೆ ಈ ಹಬ್ಬದಲ್ಲಿ ಎದ್ದುಕಾಣುತ್ತದೆ.ಇದರಿಂದ ಮಾನವನಿಗೂ ನಿಸರ್ಗಕ್ಕೂ ಪರಸ್ಪರ ಸಂಬಂಧವಿದೆ ಎಂಬ ಸಂದೇಶ ನೀಡುತ್ತದೆ. ಭಾರತೀಯ ಪರಂಪರೆಯಲ್ಲಿ ಸೂರ್ಯನಿಗೆ ದೇವತ್ವದ ಸ್ಥಾನವಿದೆ. ಸೂರ್ಯನು ಜೀವದ ಮೂಲ, ಶಕ್ತಿಯ ಕೇಂದ್ರವಾಗಿದೆ. ಸಂಕ್ರಾಂತಿ ದಿನದಂದು ಸೂರ್ಯ ಆರಾಧನೆ ಮಾಡುವ ಪದ್ಧತಿ ಪುರಾತನವಾದುದು. ಈ ದಿನ ಪವಿತ್ರ ನದಿಗಳಲ್ಲಿ ಸ್ನಾನ, ದಾನ–ಧರ್ಮ, ಪೂಜೆಗಳು ನಡೆಯುತ್ತದೆ. ಸೂರ್ಯನಿಗೆ ನಮಸ್ಕಾರ ಮಾಡುವ ಮೂಲಕ ಆರೋಗ್ಯ, ಆಯುಸ್ಸು, ಸಮೃದ್ಧಿಯನ್ನು ಬೇಡುವುದು ಸಂಪ್ರದಾಯವಾಗಿದೆ.

ಭಾವೈಕ್ಯತೆಯ ಸಾರುವ ಹಬ್ಬ

ಮುಖ್ಯವಾಗಿ ಸಂಕ್ರಾಂತಿ ಹಬ್ಬದ ಆಚರಣೆಯು ಕರ್ನಾಟಕ(ಎಳ್ಳು ಬೆಲ್ಲ ಹಂಚುವುದು), ಆಂಧ್ರಪ್ರದೇಶ ಹಾಗೂ ತಮಿಳುನಾಡಿನಲ್ಲಿ(ಪೊಂಗಲ್) ಇನ್ನಿತರ ರಾಜ್ಯಗಳಲ್ಲಿ ಬೇರೆ ಬೇರೆ ಹೆಸರುಗಳಿಂದ, ವಿಭಿನ್ನ ಸಂಪ್ರದಾಯಗಳೊಂದಿಗೆ ಸಂಭ್ರಮಿಸುತ್ತಾರೆ. ಭಾರತೀಯ ಸಂಸ್ಕೃತಿಯಲ್ಲಿ ಹಬ್ಬಗಳು ಕೇವಲ ಆಚರಣೆಗಳಲ್ಲ, ಅವು ಜೀವನದ ತತ್ವ, ಪ್ರಕೃತಿಯ ಜೊತೆಗಿನ ಮಾನವನ ಸಂಬಂಧ, ಮನುಷ್ಯರ ನಡುವಿನ ಭಾವನೆಗಳು ಹಾಗೂ ಸಮಾಜದ ಒಗ್ಗಟ್ಟಿನ ಪ್ರತಿಬಿಂಬಗಳಾಗಿವೆ. ಕರ್ನಾಟಕದಲ್ಲಿ ಸಂಕ್ರಾಂತಿ ಹಬ್ಬವನ್ನು ಬಹಳ ವೈಭವದಿಂದ ಆಚರಿಸುತ್ತೇವೆ. ಮನೆಗಳನ್ನು ಸ್ವಚ್ಛಗೊಳಿಸಿ, ಬಾಗಿಲ ಮುಂದೆ ರಂಗೋಲಿ ಬಿಡಿಸುವುದು, ಹೆಣ್ಣುಮಕ್ಕಳು ಹೊಸ ಸೀರೆ ಧರಿಸುವುದು, ಗಂಡಸರು ಪಂಚೆ ಉಡುವುದು ಸಾಮಾನ್ಯ. ಸಂಕ್ರಾಂತಿಯ ವಿಶೇಷ ಆಕರ್ಷಣೆಯಾದ 'ಎಳ್ಳು ಬೆಲ್ಲ'ವನ್ನು ಮನೆಮನೆಗೆ ಹಂಚುವ ವಿನಿಮಯ ಸಂಪ್ರದಾಯ ಪರಸ್ಪರ ಭಾವೈಕ್ಯತೆಯ ಸಾರುತ್ತದೆ. ಎಳ್ಳು,ಬೆಲ್ಲ,ಕಡಲೆ, ಸಕ್ಕರೆ, ಕಬ್ಬು, ಕರಿಬೇವು, ಹಣ್ಣು, ಮುತ್ತೈದೆಯರಿಗೆ ಅರಿಶಿನ ಕುಂಕುಮ, ಹೂ ಸೇರಿಸಿ ನೆರೆಹೊರೆಯವರಿಗೆ ಮತ್ತು ಬಂಧು ಮಿತ್ರರಿಗೆ ನೀಡುತ್ತಾರೆ.

ಸ್ನೇಹ, ಸಹನೆ, ಮಾನವೀಯ ಮೌಲ್ಯಗಳು

ಸಂಕ್ರಾಂತಿ ಕೇವಲ ಕೃಷಿ ಅಥವಾ ಧಾರ್ಮಿಕ ಸಂಪ್ರದಾಯಗಳ ಸಂಬಂಧಿಸಿದ ಹಬ್ಬವಲ್ಲ. ಇದು ಸಾಮಾಜಿಕ ಐಕ್ಯತೆ, ಸ್ನೇಹ, ಸಹಬಾಳ್ವೆ ಮತ್ತು ಮಾನವೀಯ ಮೌಲ್ಯಗಳನ್ನು ತೋರಿಸುವ ಹಬ್ಬವೂ ಹೌದು.ಈ ಪವಿತ್ರವಾದ ದಿನದಂದು ಉಳ್ಳವರು ದಿನಸಿಧಾನ್ಯಗಳನ್ನು ಬಡವರಿಗೆ ದಾನ ಮಾಡುತ್ತಾರೆ. ತಮ್ಮ ಕೈಲಾದಷ್ಟು ಬಡವರಿಗೆ ಅನ್ನ, ಹೊಸಬಟ್ಟೆ, ಒಂದಿಷ್ಟು ಹಣ ನೀಡುವ ಮೂಲಕ ಮಾನವೀಯತೆ ಕಾಣುತ್ತದೆ. ಬಂಧು ಮಿತ್ರರು, ಕುಟುಂಬ ಹಾಗೂ ನೆರೆಹೊರೆಯವರು ಒಟ್ಟಾಗಿ ಹಬ್ಬ ಆಚರಿಸುವುದರಿಂದ ಸಮಾಜದಲ್ಲಿ ಸ್ನೇಹ, ಸಹಬಾಳ್ವೆ ಮತ್ತು ಸಹಾನುಭೂತಿ ಬೆಳೆಯುತ್ತದೆ. ಇತ್ತೀಚಿಗೆ ವೇಗವಾಗಿ ಬೆಳೆಯುತ್ತಿರುವ ಯಾಂತ್ರಿಕ ಜೀವನದಲ್ಲಿ ಮಾನವ ಸಂಬಂಧಗಳು ದುರ್ಬಲವಾಗುತ್ತಿರುವ ಸಂದರ್ಭದಲ್ಲಿ ಸಂಕ್ರಾಂತಿ ಹಬ್ಬವು ಹಂಚಿಕೆ, ಸಹನೆ, ಪ್ರೀತಿ ಹಾಗೂ ಪರಸ್ಪರ ಸಹಕಾರ ಮತ್ತು ಗೌರವದ ಮಹತ್ವವನ್ನು ನೆನಪಿಸುತ್ತದೆ. ತಂತ್ರಜ್ಞಾನದಿಂದ ದೂರ ಸರಿದು ಕುಟುಂಬದ ಜೊತೆ ಕಾಲ ಕಳೆಯುವ ಅವಕಾಶವನ್ನು ಈ ಹಬ್ಬ ನೀಡುತ್ತದೆ.

ವೈಜ್ಞಾನಿಕ ದೃಷ್ಟಿಕೋನ

ಸಂಕ್ರಾಂತಿ ಹಬ್ಬದ ಆಚರಣೆಯು ತನ್ನದೇ ಆದ ವೈಜ್ಞಾನಿಕ ಮಹತ್ವವನ್ನು ಹೊಂದಿದೆ. ಉತ್ತರಾಯಣದ ಆರಂಭದಿಂದ ಸೂರ್ಯನ ಕಿರಣಗಳು ಭೂಮಿಯ ಮೇಲೆ ಹೆಚ್ಚು ಕಾಲ ಬೀಳುತ್ತದೆ. ಚಳಿಗಾಲದ ಸಮಯವಾಗಿರುವುದರಿಂದ ದೇಹದಲ್ಲಿ ಉಷ್ಣಾಂಶ ಹೆಚ್ಚಾಗಿ ಉತ್ತಮ ಆರೋಗ್ಯಕ್ಕೆ ಅನುಕೂಲಕರವಾಗಿದೆ. ಎಳ್ಳು, ಬೆಲ್ಲ, ಕಡಲೆಯಂತಹ ಆಹಾರ ಪದಾರ್ಥಗಳನ್ನು ತಿನ್ನುವುದರಿಂದ ದೇಹಕ್ಕೆ ಶಕ್ತಿ ನೀಡುವ ಜೊತೆಗೆ ಚಳಿಗಾಲದ ಪರಿಣಾಮವನ್ನು ಕಡಿಮೆ ಮಾಡುತ್ತದೆ. ನಮ್ಮ ಪೂರ್ವಜರು ಪರಿಸರದ ನಿಯಮಗಳು ಹಾಗೂ ಬದಲಾವಣೆಗಳನ್ನು ಅರಿತು, ಆರೋಗ್ಯಕ್ಕೆ ಅನುಕೂಲವಾದ ಆಹಾರ ಮತ್ತು ಆಚರಣೆಗಳನ್ನು ಹಬ್ಬಗಳ ರೂಪದಲ್ಲಿ ನಮಗೆ ನೀಡಿದ್ದಾರೆ ಎಂಬುದನ್ನು ಸೂಚಿಸುತ್ತದೆ.

ಸಂಕ್ರಾಂತಿಯ ಸಂದೇಶ

ಸಂಕ್ರಾಂತಿ ಹಬ್ಬವು ನಮಗೆ ಹಲವಾರು ಸಂದೇಶಗಳನ್ನು ನೀಡುತ್ತದೆ. ಪ್ರಕೃತಿಗೆ ಸಲ್ಲಿಸುವ ಪೂಜೆ, ಪ್ರಾಣಿಗಳಿಗೆ ನೀಡುವ ಗೌರವ, ಹೊಸ ಫಸಲಿಗೆ ನೀಡುವ ಕೃತಜ್ಞತೆ,ಶ್ರಮಕ್ಕೆ ಪ್ರತಿಫಲ, ಹಂಚಿಕೆಗೆ ಸಂತೋಷ, ಸಹನೆಗೆ ಪ್ರೀತಿ, ಸಂಬಂಧಗಳಿಗೆ ಬಲ ಇವೆಲ್ಲವೂ ಸಂಕ್ರಾಂತಿಯ ಅಂತರಾಳವಾಗಿವೆ. ಇದು ಕತ್ತಲೆಯಿಂದ ಬೆಳಕಿನತ್ತ ಸಾಗುವ ಬದುಕಿನ ಸಂಕೇತವಾಗಿವೆ. ಹಳೆಯದನ್ನು ಬಿಟ್ಟು, ಹೊಸತನವನ್ನು ಸ್ವೀಕರಿಸಿ, ಸಕರಾತ್ಮಕ ಚಿಂತನೆಯೊಂದಿಗೆ ಮುಂದುವರಿಸಿಕೊಂಡು ಸಾಗಲು ಪ್ರೇರೇಪಿಸುವ ಹಬ್ಬವೇ ಈ ಸಂಕ್ರಾಂತಿ. ಈ ಹಬ್ಬವು ಬೆಳಕಿನ ದಿಕ್ಕಿಗೆ ನಮ್ಮ ಬದುಕನ್ನು ಮುನ್ನಡೆಸುವ ಸಂಸ್ಕೃತಿ ಹಾಗೂ ಸಂಪ್ರದಾಯದ ಹಬ್ಬ. ಒಟ್ಟಿನಲ್ಲಿ ಸಂಕ್ರಾಂತಿ ನಮ್ಮ ಸಂಸ್ಕೃತಿಯ ಬೇರುಗಳನ್ನು ಗಟ್ಟಿಗೊಳಿಸಿ ಶ್ರೀಮಂತಗೊಳಿಸುವ, ಕೃಷಿ ಬದುಕಿನ ಮಹತ್ವವನ್ನು ಸಾರುವ ಹಾಗೂ ಮಾನವೀಯ ಮೌಲ್ಯಗಳನ್ನು ಉಳಿಸುವ ಹಬ್ಬವಾಗಿದೆ. ವೇಗವಾಗಿ ಬದಲಾಗುತ್ತಿರುವ ಈ ಜಮಾನದಲ್ಲೂ ಸಂಕ್ರಾಂತಿಯ ತತ್ವವನ್ನು ಅರಿತು ಉಳಿಸಿಕೊಂಡು ಆಚರಿಸಿದರೆ, ಅದು ಕೇವಲ ಒಂದು ದಿವಸದ ಹಬ್ಬದ ಸಡಗರವಾಗಿರದೆ, ನಮ್ಮ ದಿನನಿತ್ಯದ ಬದುಕಿಗೆ ದಾರಿ ತೋರಿಸುವ ದೀಪವಾಗಿದೆ.

ನಿಮ್ಮ ಪತ್ರಗಳು

ಸುತ್ತೂರು ಜಾತ್ರೆಗೆ ವಿಶ್ವ ಮನ್ನಣೆಯ ಮೆರುಗು ನೀಡಿದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ!

ಮಾನ್ಯರೆ,



ಸುತ್ತೂರಿನಲ್ಲಿ ಜ.15 ರಿಂದ 20ರವರೆಗೆ ಜಾತ್ರೆಯ ಸಂಭ್ರಮ., ಸಡಗರ. ಸುತ್ತೂರು ಜಾತ್ರೆ, ಶೈಕ್ಷಣಿಕ, ಧಾರ್ಮಿಕ, ಕೃಷಿ ಆಧಾರಿತ ಸಾಮಾಜಿಕ, ವೈಜ್ಞಾನಿಕ ಮಹತ್ವವನ್ನು ಸಾರುತ್ತದೆ. ಸುತ್ತೂರು ಜಾತ್ರೆಗೆ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ಹಾಗೂ ವಿವಿಧ ದೇಶಗಳ ಭಕ್ತರು ಆಗಮಿಸುತ್ತಾರೆ. 25 ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸುವ ಈ ಜಾತ್ರೆಯ ಮಹತ್ವವನ್ನು ವರ್ಣಿಸುವುದು ಅಸಾಧ್ಯ. ರಥೋತ್ಸವ, ಕೃಷಿ ಮೇಳ, ವೈಜ್ಞಾನಿಕ ವಸ್ತುಪ್ರದರ್ಶನ, ಕುಸ್ತಿ ಪಂದ್ಯಾವಳಿ, ವಿವಿಧ ರೀತಿಯ ಸ್ಪರ್ಧೆಗಳು, ಸಾಮೂಹಿಕ ವಿವಾಹ, ಭಜನಾ ಸ್ಪರ್ಧೆಗಳು, ಕೃಷಿ ಉತ್ಪನ್ನಗಳು, ಕೃಷಿ ಉಪಕರಣಗಳ ಮಾರಾಟ, ಕೃಷಿ ವಿಚಾರ ಗೋಷ್ಠಿ, ಸಂವಾದ, ಬೃಹತ್ ವಸ್ತುಪ್ರದರ್ಶನ ಜಾತ್ರೆಯ ವೈಶಿಷ್ಟ್ಯವಾಗಿದೆ.

ಸುತ್ತೂರು ಮಹಾಸಂಸ್ಥಾನವು ಮೈಸೂರು ನಗರದಲ್ಲಿ ಜೆಎಸ್‌ಎಸ್ ವಿಶ್ವವಿದ್ಯಾನಿಲಯ, ಜೆಎಸ್‌ಎಸ್ ಆಸ್ಪತ್ರೆ, ಸುತ್ತೂರಿನಲ್ಲಿ 10,000ಕ್ಕೂ ಹೆಚ್ಚು ಮಕ್ಕಳಿಗೆ ವಿದ್ಯಾಭ್ಯಾಸ ನೀಡುವ ಉಚಿತ ವಸತಿ ಸಹಿತ ವಿದ್ಯಾಸಂಸ್ಥೆ. ಇವುಗಳು ಸಂಸ್ಥೆಯ ಹಿರಿಮೆಯಾಗಿದೆ. ಸುತ್ತೂರು ಮಠದ ಈ ಜಾತ್ರೆಗೆ ದೇಶ ಮತ್ತು ರಾಜ್ಯದಿಂದ ವಿವಿಧ ಮಠಾಧಿಪತಿಗಳು, ಗಣ್ಯರು, ಭಕ್ತರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ. ಎಲ್ಲರಿಗೂ ಉಚಿತ ಬೆಳಗಿನ ಉಪಹಾರ ಮತ್ತು ಮಹಾ ಪ್ರಸಾದದ ವ್ಯವಸ್ಥೆ ಇರುತ್ತದೆ. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ತಮ್ಮೆಲ್ಲಾ ಕಾರ್ಯಗಳ ಮುಖಾಂತರ ಎಲ್ಲರಿಗೂ ಆದರ್ಶಪ್ರಾಯವಾಗಿದ್ದಾರೆ, ಜೀವಂತ ದಂತಕಥೆಯಾಗಿದ್ದಾರೆ.

– ಅಮೋಘ ವರ್ಷ ನಾಗರಾಜ,
ಅರವಿಂದನಗರ, ಮೈಸೂರು.

ಸ್ವಾಮಿ ವಿವೇಕಾನಂದರ ಜಯಂತಿ ಸರ್ಕಾರದಿಂದ ಆಚರಿಸುವಂತಾಗಲಿ

ಮಾನ್ಯರೆ,

ರಾಷ್ಟ್ರಕ್ಕೆ ಅವಿಸ್ಮರಣೀಯ ಕೊಡುಗೆ ನೀಡಿದ ಮಹನೀಯರುಗಳ ಜಯಂತಿಯಂದು ರಾಜ್ಯ ಸರ್ಕಾರ ಸರ್ಕಾರಿ ರಜೆ ಘೋಷಿಸಿ, ಅಂದು ಸರ್ಕಾರದ ವತಿಯಿಂದಲೇ ಮಹನೀಯರುಗಳ ಜಯಂತಿಯನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಗಾಂಧಿ ಜಯಂತಿ, ಬಿ.ಆರ್.ಅಂಬೇಡ್ಕರ್ ಜಯಂತಿ, ವಾಲ್ಮೀಕಿ ಜಯಂತಿ, ಬಸವ ಜಯಂತಿ, ಮಹಾವೀರ ಜಯಂತಿ, ಇತ್ತೀಚೆಗೆ ಟಿಪ್ಪು ಜಯಂತಿಯನ್ನು ಸರ್ಕಾರಿ ಕಾರ್ಯಕ್ರಮವಾಗಿ ಆಚರಿಸುತ್ತಿದೆ. ಅಲ್ಲದೆ ಈ ತಿಂಗಳು ಶಿವಯೋಗಿ ಸಿದ್ಧರಾಮ, ಮಹಾಯೋಗಿ ವೇಮನ, ಅಂಬಿಗರ ಚೌಡಯ್ಯ ಹಾಗೂ ಸವಿತಾ ಮಹರ್ಷಿ ಜಯಂತ್ಯೋತ್ಸವಗಳನ್ನು ಸರ್ಕಾರದ ವತಿಯಿಂದಲೇ ಆಚರಿಸಲಾಗುತ್ತಿದೆ.

ಆದರೆ ಸ್ವಾಮಿ ವಿವೇಕಾನಂದರ ಜಯಂತಿಯನ್ನು ಸರ್ಕಾರದ ವತಿಯಿಂದ ಆಚರಿಸದೇ ಇರಲು ಕಾರಣವೇನು? ಏಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ. ನಿಮ್ಮ ಏಳ್ಗೆಗೆ ನೀವೇ ಶಿಲ್ಪಿ ಎಂದು ಹೇಳಿ ಯುವ ಜನಾಂಗಕ್ಕೆ ಸ್ಫೂರ್ತಿ ನೀಡಿದ ಅಮೆರಿಕಾದಲ್ಲಿ ನನ್ನ ಸೋದರ, ಸೋದರಿಯರೇ ಎಂದು ಭಾಷಣ ಪ್ರಾರಂಭಿಸಿದ ಮಾತುಗಳು ಇಂದಿಗೂ ರೋಮಾಂಚನ ಉಂಟು ಮಾಡುತ್ತವೆ. ರಾಷ್ಟ್ರ ಮಟ್ಟದ ಮಹನೀಯರ ಜಯಂತಿಯನ್ನು ಆಚರಿಸುವ ಪಾಲಿಗೆ, ಸ್ವಾಮಿ ವಿವೇಕಾನಂದರ ಜಯಂತಿಯು ಸೇರಬೇಕು. ಸ್ವಾಮಿ ವಿವೇಕಾನಂದರ ಜಯಂತಿಯನ್ನು ಸರ್ಕಾರದ ವತಿಯಿಂದಲೇ ಮುಂದಿನ ವರ್ಷದಿಂದ ಆಚರಿಸುವಂತಾಗಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಪ್ರಸಾದದ ಹೆಸರಿನಲ್ಲಿ ಚಾಮುಂಡೇಶ್ವರಿ ಗೋಪುರ ಮರೆಯಾಗಬಾರದು

ಮಾನ್ಯರೆ,

ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಹಾಗೂ ಪ್ರಜ್ಞಾವಂತ ನಾಗರಿಕರು ಚಾಮುಂಡಿ ಬೆಟ್ಟದ ಪ್ರಸಾದ ಯೋಜನೆಯಡಿಯಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿರುವುದು ಸ್ವಾಗತಾರ್ಹ. ಮೈಸೂರು ನಗರದ ಯಾವ ಭಾಗದಿಂದಲೂ ಬೆಟ್ಟವನ್ನು ನೋಡಿದರೂ ಮೊದಲು ಕಾಣುವುದೇ ಮೈಸೂರಿಗೆ ಮುಕುಟ ಮಣಿಯಂತೆ ಶೋಭಾಯಾಮಾನವಾಗಿ ಕಾಣುವ ಗೋಪುರ, ಅಭಿವೃದ್ಧಿ ಹೆಸರಿನಲ್ಲಿ ಇದು ಮರೆಯಾಗಬಹುದೇ ಎಂಬ ಆತಂಕ ಮೈಸೂರಿನ ಜನರಲ್ಲಿ ಮನೆಮಾತಾಗಿದೆ. ತಿರುಪತಿ ಬೆಟ್ಟ ಹಾಗೂ ಮಲೆ ಮಹದೇಶ್ವರ ಬೆಟ್ಟದ ಮೇಲೆ ಇರುವಷ್ಟು ವಿಶಾಲವಾದ ಪ್ರದೇಶ ಚಾಮುಂಡಿ ಬೆಟ್ಟದ ಮೇಲೆ ಇಲ್ಲದ ಕಾರಣ, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಹಟಕ್ಕೆ ಬಿದ್ದಂತೆ ಕಾಮಗಾರಿಯತ್ತ ಗಮನಹರಿಸದೇ, ಮೈಸೂರಿನ ಪ್ರಜ್ಞಾವಂತರು, ಸಂಘ – ಸಂಸ್ಥೆಗಳು, ಆಸ್ತಿಕರು, ಪರಿಸರ ತಜ್ಞರ ಸಲಹೆ ಪಡೆಯುವುದರ ಜೊತೆಗೆ ಸಮನ್ವಯತೆ ಸಾಧಿಸುವ ಮೂಲಕ ಪಾರಂಪರಿಕ ಶೈಲಿಗೆ ಕುಂದು ಬಾರದ ರೀತಿಯಲ್ಲಿ ಗಮನ ಹರಿಸುವುದು ಸೂಕ್ತ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ವನರಂಗದ ಬಯಲು ಮಂದಿರದ ಮೇಲ್ಭಾಗ ಮುಚ್ಚಲಿ!

ಮಾನ್ಯರೆ,

ಮೈಸೂರಿನ ಕರ್ನಾಟಕ ಕಲಾಮಂದಿರದಲ್ಲಿ ಪ್ರತಿ ವರ್ಷದಂತೆ ಈ ಬಾರಿಯೂ ಬಹುರೂಪಿ ನಾಟಕೋತ್ಸವ ಅತ್ಯಂತ ಯಶಸ್ವಿಯಾಗಿ ನಡೆಯುತ್ತಿರುವುದು ಹೆಮ್ಮೆಯ, ಸಂತೋಷದ ಸಂಗತಿ. ಸಿನಿಮಾ ವೀಕ್ಷಿಸಲು ಸಾರ್ವಜನಿಕರಿಗೆ ಉಚಿತ ಹಾಗೂ ನಾಟಕಕ್ಕೆ ಪ್ರತಿ ಟಿಕೆಟ್‌ಗೆ ರೂ.100ರಂತೆ ದರ ನಿಗದಿ ಮಾಡಿದ್ದಾರೆ. ಆದರೆ ಎಲ್ಲಾ ನಾಟಕಗಳೂ ಬಯಲು ಪ್ರದೇಶವಾದ ವನರಂಗದಲ್ಲಿ ಸಂಜೆ 7 ರಿಂದ ನಡೆಯುತ್ತವೆ. ಈಗ ಚಳಿಗಾಲವಾದ್ದರಿಂದ ಟಿಕೆಟ್ ತೆಗೆದುಕೊಂಡವರು ಕನಿಷ್ಠ ಮೂರು ಗಂಟೆಗಳ ಕಾಲ ನಾಟಕವನ್ನು ವೀಕ್ಷಣೆ ಮಾಡಬೇಕಾಗುತ್ತದೆ. ಸಂಜೆ ಸಮಯದಲ್ಲಿ ಮಂಜು ಬೀಳುತ್ತದೆ. ವಯಸ್ಸಾದವರು ಈ ಚುಮು ಚುಮು ಚಳಿಯಲ್ಲಿ ನಾಟಕ ವೀಕ್ಷಿಸುವುದು ತುಂಬಾ ಕಷ್ಟವಾಗುತ್ತದೆ. ಆದುದರಿಂದ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಮುಂದಿನ ವರ್ಷದಿಂದ ವನರಂಗದ ಬಯಲು ಮಂದಿರ ಮೇಲ್ಭಾಗವನ್ನು ಥಾರಸಿ ಅಥವಾ ಕಲ್ನಾರ್ ಶೀಟ್‌ಗಳನ್ನು ಅಳವಡಿಸುವುದರ ಮುಖಾಂತರ ಮುಚ್ಚಿಸಿದರೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಅದೂ ಅಲ್ಲದೇ ಒಂದು ಉತ್ತಮ ಸಭಾಂಗಣವಾಗಿ ರೂಪುಗೊಳ್ಳುತ್ತದೆ.

– ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು

ಬನ್ನಿ... ವೈವಿಧ್ಯಮಯ ಸುತ್ತೂರು ಜಾತ್ರೆಗೆ



ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ.94815 33167



ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಸುತ್ತೂರು ಶ್ರೀ ಕ್ಷೇತ್ರ ಮತ್ತು ಇಲ್ಲಿನ ಗುರು ಪರಂಪರೆ ಹಾಗೂ ಶ್ರೀ ಮಠದ ವಿಶಿಷ್ಟತೆಯೇ ಬೇರೆ. ಅದರಲ್ಲೂ ಇಲ್ಲಿ ಪ್ರತಿ ವರ್ಷ ಜನವರಿ ತಿಂಗಳಲ್ಲಿ ಜರುಗುವ 'ಸುತ್ತೂರು ಜಾತ್ರೆ ಅರ್ಥಾತ್ ವಿಶ್ವ ವಿಖ್ಯಾತಿ ಹೊಂದಿರುವ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವವಂತೂ ಬಹು ವೈಶಿಷ್ಟ್ಯ

ದೇಶದಲ್ಲಿ ಬೇಕಾದಷ್ಟು ಧಾರ್ಮಿಕ ಕ್ಷೇತ್ರಗಳಿವೆ. ಗುರು ಪರಂಪರೆಯ ಶ್ರೀಮಠಗಳಿವೆ. ಅಂತೆಯೇ, ಬಹಳಷ್ಟು ಜಾತ್ರೆಗಳಿವೆ. ಆದರೆ ಸಾವಿರ ವರ್ಷಗಳಿಗೂ ಮಿಗಿಲಾದ ಇತಿಹಾಸವಿರುವ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಸುತ್ತೂರು ಶ್ರೀ ಕ್ಷೇತ್ರ ಮತ್ತು ಇಲ್ಲಿನ ಗುರು ಪರಂಪರೆ ಹಾಗೂ ಶ್ರೀ ಮಠದ ವಿಶಿಷ್ಟತೆಯೇ ಬೇರೆ. ಅದರಲ್ಲೂ ಇಲ್ಲಿ ಪ್ರತಿ ವರ್ಷ ಜನವರಿ ತಿಂಗಳಲ್ಲಿ ಜರುಗುವ 'ಸುತ್ತೂರು ಜಾತ್ರೆ' ಎಂದೇ ವಿಶ್ವ ವಿಖ್ಯಾತಿ ಹೊಂದಿರುವ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವವಂತೂ ಬಹು ವೈಶಿಷ್ಟ್ಯವಾಗಿದ್ದು, ಜಗತ್ತಿನ ಎಲ್ಲಾ ಜಾತ್ರೆಗಳಿಗೂ ಮಾದರಿಯಾಗುವಂತಾದ್ದು! ಈ ಸುತ್ತೂರು ಜಾತ್ರೆಯಲ್ಲಿ ಏನಿಲ್ಲ ಎನ್ನುವಂತಿಲ್ಲ. ಎಲ್ಲಾ ರೀತಿಯ ಪಾರಂಪರಿಕ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಮಹೋತ್ಸವಗಳ ಮಹಾಸಂಗಮವಿದು.

ಸಂಕ್ರಾಂತಿಯಂದು ಆರಂಭವಾಗಿ ಒಟ್ಟು ಆರು ದಿನಗಳು ಬಹು ವೈವಿಧ್ಯಮಯ ವಾಗಿ ನಡೆಯುವ ಸುತ್ತೂರು ಜಾತ್ರೆಯಲ್ಲಿ ಮೊದಲ ದಿನ ಶ್ರೀಮಠದಿಂದ ಆದಿಜಗದ್ಗುರು ಶಿವಯೋಗಿಗಳ ಉತ್ಸವಮೂರ್ತಿಯನ್ನು ಕರ್ತೃ ಗದ್ದುಗೆಗೆ ಬಿಜಯಂಗೈಸಿಕೊಳ್ಳಲಾಗುವುದು. ಎರಡನೇ ದಿನ ಸಹಸ್ರಕುಂಭೋತ್ಸವ, ಮೂರನೇ ದಿನ ಬೆಳಿಗ್ಗೆ ರಥೋತ್ಸವ, ನಾಲ್ಕನೇ ದಿನ ಸಂಜೆ ಶ್ರೀ ಮಹದೇಶ್ವರ ಕೊಂಡೋತ್ಸವ ಮತ್ತು ಮುತ್ತಿನ ಪಲ್ಲಕ್ಕಿ ಉತ್ಸವ, ಐದನೇ ದಿನ ರಾತ್ರಿ ಲಕ್ಷದೀಪೋತ್ಸವದ ಮಹಾಬೆಳಕಿನಲ್ಲಿ ತೆಪ್ಪೋತ್ಸವ, ಆರನೇ ದಿನ ಅನ್ನ ಬ್ರಹ್ಮೋತ್ಸವ ಹಾಗೂ ಶ್ರೀ ವೀರಭದ್ರೇಶ್ವರ ಕೊಂಡೋತ್ಸವಗಳು ಲಕ್ಷಾಂತರ ಭಕ್ತ ಸಮೂಹದ ನಡುವೆ ಜರುಗುತ್ತವೆ. ಈ ಸಂದರ್ಭದಲ್ಲಿ ಶ್ರೀ ಕ್ಷೇತ್ರದಲ್ಲಿರುವ ಕರ್ತೃಗದ್ದುಗೆ ಮತ್ತು ಪುರಾಣ ಪ್ರಸಿದ್ಧ ಶ್ರೀ ಸೋಮೇಶ್ವರ, ಶ್ರೀ ಮಹದೇಶ್ವರ, ಶ್ರೀ ಶಂಕರನಾರಾಯಣ, ಶ್ರೀ ವೀರಭದ್ರೇಶ್ವರ, ಶ್ರೀ ನಾರಾಯಣಸ್ವಾಮಿ ದೇವಾಲಯಗಳಲ್ಲಿ ತ್ರಿಕಾಲ ಪೂಜೆ, ಮಹಾರುದ್ರಾಭಿಷೇಕ, ನವನೀತಾಲಂಕಾರ, ಹಸಿರುವಾಣಿ ಅಲಂಕಾರ ಹಾಗೂ ಗುರುಪರಂಪರೆಯ ಸಂಸ್ಮರಣೋತ್ಸವಗಳು ಭಕ್ತಿಯ ದ್ಯೋತಕವಾಗಿ ನಡೆಯುತ್ತವೆ. ಶ್ರೀಮಠದ ಸಕಲ ಬಿರುದಾವಳಿಗಳ ಸಮೇತ, ಛತ್ರಿ, ಚಾಮರ, ಸೂರಪಾನಿ, ಗಾರುಡಿಗೊಂಬೆ, ಮರಗಾಲು ಕುಣಿತ, ನೃತ್ಯ, ವೀರಗಾಸೆ, ಡೊಳ್ಳು ಹಾಗೂ ಪೂಜಾ ಕುಣಿತ, ಕರಡಿ ಮೇಳ, ನಾದಸ್ವರಗಳೊಂದಿಗೆ ಬೇರೆ ಬೇರೆ ರಾಜ್ಯಗಳ ವಿವಿಧ ಜನಪದ ಕಲಾತಂಡಗಳು ಮೇಳೈಸಿ ಜರುಗುವ ಸುತ್ತೂರು ಜಾತ್ರೆಯ ವೈಭವವನ್ನು ನೋಡಿಯೇ ಸವಿಯಬೇಕು.

ಧಾರ್ಮಿಕ ಉತ್ಸವಗಳ ಜೊತೆಗೆ ವಾರ ಪೂರ್ತಿ ಆರೋಗ್ಯ ಮೇಳ, ಕೃಷಿ ಮೇಳ, ಉತ್ಪಾದಕ ಮತ್ತು ಗ್ರಾಹಕ ಮೇಳ, ಕ್ರೀಡಾ ಮೇಳ, ಸಾಂಸ್ಕೃತಿಕ ಮೇಳ, ಶೈಕ್ಷಣಿಕ ಮೇಳ, ಸಾಹಿತ್ಯ ಮತ್ತು ಪುಸ್ತಕ ಮೇಳ, ಸರ್ವಧರ್ಮ ಸಮ್ಮಿಲನ, ಸಾಮೂಹಿಕ ವಿವಾಹ, ವಿವಿಧ ವಸ್ತು ಪ್ರದರ್ಶನಗಳು, ದನಗಳ ಜಾತ್ರೆ, ಜಾನಪದ ಜಾತ್ರೆ, ಕುಸ್ತಿ ಪಂದ್ಯಾವಳಿ, ನಗೆ ಉತ್ಸವ, ನಾಟಕ, ನೃತ್ಯ, ವಚನಗಾಯನ, ಸುಗಮ ಸಂಗೀತ, ಯಕ್ಷಗಾನ... ಹೀಗೆ ಎಲ್ಲಾ ರೀತಿಯ ಕಾರ್ಯಕ್ರಮಗಳು, ಉತ್ಸವಗಳು ಇಲ್ಲಿ ಸಾರ್ಥಕ ರೀತಿಯಲ್ಲಿ ನಡೆಯುತ್ತವೆಯಲ್ಲದೆ, ಸಾಮಾಜಿಕ ಜಾಗೃತಿ ಉಂಟು ಮಾಡುವಲ್ಲಿ 'ಸುತ್ತೂರು ಜಾತ್ರೆ' ಸಂಪೂರ್ಣವಾಗಿ ತನ್ನನ್ನು ತೆರೆದುಕೊಳ್ಳುತ್ತದೆಂಬುದೇ ಇಲ್ಲಿನ ವಿಶೇಷ.

ಶ್ರೀ ಕ್ಷೇತ್ರದ ಇತಿಹಾಸ : ಸುಮಾರು ಒಂದು ಸಾವಿರ ವರ್ಷಗಳ ಹಿಂದಿನ ಕಥೆ, ಕಂಚಿಯ ರಾಜೇಂದ್ರ ಚೋಳನಿಗೂ ತಲಕಾಡಿನ ಗಂಗರಾಜ ರಾಚಮಲ್ಲನಿಗೂ ಬಹಳ ಕಾಲದಿಂದಲೂ ಇದ್ದ ರಾಜಕೀಯ ದ್ವೇಷಾಗ್ನಿಯಿಂದ ಇವರಿಬ್ಬರೂ ಯುದ್ಧೋನ್ಮಾದದಲ್ಲಿ ಮುಳುಗಿ ಒಬ್ಬರನ್ನೊಬ್ಬರು ಕೊಲ್ಲಲು ಭಾರೀ ಸೈನ್ಯದೊಡನೆ ಕಾದಾಟಕ್ಕೆ ನುಗ್ಗುತ್ತಾರೆ. ಆಗ ರಾಜೇಂದ್ರ ಚೋಳನ ಕುದುರೆ ಏನು ಮಾಡಿದರೂ ಹಿಡಿತಕ್ಕೆ ಸಿಗದೆ ಶರವೇಗದಲ್ಲಿ ಮಿಂಚಿನಂತೆ ಓಡುತ್ತದೆ. ಹೀಗೆ ಓಡಿಬಂದ ಕುದುರೆ ದಕ್ಷಿಣಕಾಶಿ ಎಂದೇ ಹೆಸರಾದ ಕಪಿಲಾ ನದಿ ತೀರದಲ್ಲಿ ತಪಸ್ಸಿನಲ್ಲಿ ನಿರತರಾಗಿದ್ದ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಸುತ್ತ ಭಕ್ತಿಯಿಂದ ಪ್ರದಕ್ಷಿಣೆ ಹಾಕಿ ಅವರ ಬಳಿ ಶಾಂತವಾಗಿ ನಿಲ್ಲುತ್ತದೆ. ತನ್ನ ಮೆಚ್ಚಿನ ಕುದುರೆಯ ವರ್ತನೆ ಕಂಡು ಅಚ್ಚರಿಗೊಂಡ ರಾಜೇಂದ್ರ ಚೋಳ ಅಲ್ಲಿ ಧ್ಯಾನಮಗ್ನರಾಗಿದ್ದ ಶ್ರೀ ಶಿವರಾತ್ರೀಶ್ವರ ಶಿವಯೋಗಿ ಮಹಾಮುನಿಗಳನ್ನು ಕಂಡು ಮತ್ತಷ್ಟು ಮಹದಾಶ್ಚರ್ಯದಿಂದ ಕೂಡಲೇ ಕುದುರೆಯಿಂದಿಳಿದು ಭಕ್ತಿಯಿಂದ ಅವರ ಪಾದಕಮಲ ಗಳಿಗೆರಗಿ ಪೂಜಿಸುತ್ತಾನೆ. ಅಷ್ಟರಲ್ಲಿ ಇವನನ್ನು ಹಿಂಬಾಲಿಸಿಕೊಂಡು ಬಂದ ರಾಚಮಲ್ಲನೂ ಅಲ್ಲಿನ ದೃಶ್ಯ ನೋಡಿ ಶ್ರೀ ಶಿವರಾತ್ರೀಶ್ವರರಿಗೆ ಶಿರಬಾಗಿ ನಮಿಸುತ್ತಾನೆ. ಆಗ ಧ್ಯಾನದಿಂದ ಕಣ್ತೆರೆದ ತೇಜೋಮೂರ್ತಿ ಶ್ರೀ ಶಿವರಾತ್ರೀಶ್ವರ ಮಹಾಮುನಿಗಳು ಯುದ್ಧದಿಂದಾಗುವ ಅನಾಹುತ ಮತ್ತು ದುರಂತಗಳನ್ನು ವಿವರಿಸಿ ಶಾಂತಿ, ಸಂಯಮ, ಸಹಬಾಳ್ವೆಯಲ್ಲಿ ಮನುಷ್ಯತ್ವದಿಂದ ಬದುಕಬೇಕೆಂದು ಉಪದೇಶಿಸಿ ಇಬ್ಬರಿಗೂ ಆಶೀರ್ವದಿಸುತ್ತಾರೆ. ಆ ಕ್ಷಣ ಅವರಿಬ್ಬರಲ್ಲಿದ್ದ ದ್ವೇಷದ ಅಗ್ನಿ ತಣ್ಣಗಾಗಿ ಯುದ್ಧೋನ್ಮಾದ ಇಳಿಯುತ್ತದೆ. ಮಾನವತೆಯ ಮಹಾಬೆಳಕು ಪ್ರಜ್ವಲಿಸಿ ಅವರಲ್ಲಿ ಪರಿವರ್ತನೆಯ ಹೂವು ಅರಳಿ ರಾಜರೀರ್ವರೂ ಯುದ್ಧಕ್ಕೆ ತಿಲಾಂಜಲಿ ಹೇಳುತ್ತಾರೆ. ಮತ್ತು ತಮಗೆ ದರ್ಶನ ನೀಡಿದ ಈ ಪುಣ್ಯ ಸ್ಥಳದಲ್ಲಿಯೇ ತಾವು ನೆಲೆಗೊಳ್ಳಬೇಕೆಂದು ಶ್ರೀ ಶಿವರಾತ್ರೀಶ್ವರ ಮುನಿಗಳಲ್ಲಿ ಕೋರಿಕೊಂಡು ಅವರು ಅಲ್ಲೇ ನೆಲೆಸುವಂತೆ ಮಾಡುತ್ತಾರೆ.

ಆ ಪುಣ್ಯ ಸ್ಥಳವೇ ಈ ಸುತ್ತೂರು ಶ್ರೀ ಕ್ಷೇತ್ರ. ಮಾನವತೆಯ ನೆಲೆಯಲ್ಲಿ ಆದಿಗುರು ಶ್ರೀ ಶಿವರಾತ್ರೀಶ್ವರರಿಂದ ಉದಯವಾದ ಇಲ್ಲಿನ ಸುತ್ತೂರು ವೀರಸಿಂಹಾಸನ ಮಠವು ಹತ್ತು ಶತಮಾನಗಳಿಗೂ ಮೀರಿದ ಸುದೀರ್ಘ ಪರಂಪರೆಯನ್ನು ಹೊಂದಿದ್ದು, ಆದಿಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ (ಕ್ರಿ.ಶ. 950–1030) ಆದಿಯಾಗಿ ಶ್ರೀ ಈಶಾನೇಶ್ವರ ಒಡೆಯರು (1030–1090), ಶ್ರೀ ನಿಜಲಿಂಗ ಶಿವಾಚಾರ್ಯರು (1090–1170), ಶ್ರೀ ಸಿದ್ಧನಂಜ ದೇಶಿಕೇಂದ್ರರು (1170–1240), ಶ್ರೀ ಕಪನಿ ನಂಜುಂಡ ದೇಶಿಕೇಂದ್ರರು (1240–1310), ಶ್ರೀ ಚೆನ್ನವೀರ ದೇಶಿಕೇಂದ್ರರು (1310–1380), ಶ್ರೀ ಸಿದ್ದಮಲ್ಲ ಶಿವಾಚಾರ್ಯರು (1380–1470), ಶ್ರೀ ಪರ್ವತೇಂದ್ರ ಶಿವಾಚಾರ್ಯರು (1470–1490), ಶ್ರೀ ಭಂಡಾರಿಬಸಪ್ಪ ಒಡೆಯರು (1490–1515), ಶ್ರೀ ಕೂಗಲೂರು ಶ್ರೀ ನಂಜುಂಡ ದೇಶಿಕೇಂದ್ರರು (1515–1530), ಶ್ರೀ ಘನಲಿಂಗದೇವರು (1530–1550), ಶ್ರೀ ಇಮ್ಮಡಿ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳು (1550–1590), ಶ್ರೀ ಚೆನ್ನಬಸವ ದೇಶಿಕೇಂದ್ರರು (1590–1608), ಶ್ರೀ ಗುರುನಂಜ ದೇಶಿಕೇಂದ್ರರು (1608–1641), ಶ್ರೀ ಚೆನ್ನಬಸವ ದೇವಾಚಾರ್ಯರು (1641–1713), ಶ್ರೀ ಪಂಚಾಕ್ಷರ ದೇಶಿಕೇಂದ್ರರು (1713–1730), ಶ್ರೀ ಚಿದ್ಘನ ಶಿವಾಚಾರ್ಯರು (1730–1750), ಶ್ರೀ ಚೆನ್ನವೀರ ದೇಶಿಕೇಂದ್ರರು (1750–1801), ಶ್ರೀ ಮಹಾಂತ ದೇಶಿಕೇಂದ್ರರು (1801–1842), ಶ್ರೀ ಸಿದ್ಧಮಲ್ಲ ಶಿವಾಚಾರ್ಯರು (1842–1884), ಶ್ರೀ ಶಿವರಾತ್ರಿ ದೇಶಿಕೇಂದ್ರರು (1884–1902), ಶ್ರೀ ಮಂತ್ರ ಮಹರ್ಷಿ ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳವರು (1902–1966), ರಾಜಗುರು ತಿಲಕ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು (1966–1986) ಸೇರಿದಂತೆ ಇಪ್ಪತ್ಮೂರು ಸಾರ್ಥಕ ಜಗದ್ಗುರುಗಳ ಸೇವಾ ಕೈಂಕರ್ಯಗಳನ್ನು ತನ್ನೊಡಲಲ್ಲಿ ಇಟ್ಟುಕೊಂಡಿದೆ. ಮಾನವ ಕುಲದ ಉದ್ಧಾರಕ್ಕಾಗಿ ಈ ಮಹಾತ್ಮರೆಲ್ಲರೂ ಕಂಡ ಮಹಾಕನಸುಗಳನ್ನೆಲ್ಲಾ ಸಾಕಾರಗೊಳಿಸುವತ್ತ ಟೊಂಕಕಟ್ಟಿ ನಿಂತಿರುವ ಪ್ರಸ್ತುತ 24ನೇ ಪೀಠಾಧಿಕಾರಿಗಳಾಗಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ, ಸಾಂಸ್ಕೃತಿಕವಾಗಿ ಎಲ್ಲಕ್ಕಿಂತ ಮಿಗಿಲಾಗಿ 'ಶಿಕ್ಷಣಯಜ್ಞ'ವನ್ನು ನಡೆಸಿ ಇಡೀ ಜಗತ್ತೇ ಸುತ್ತೂರಿನತ್ತ ಸುಳಿಯುವಂತೆ ಮಾಡಿದ್ದಾರೆ.

ಪ್ರತಿವರ್ಷ ಪರಂಪರಾನುಗತವಾಗಿ ಸುತ್ತೂರು ಶ್ರೀ ಕ್ಷೇತ್ರದಲ್ಲಿ ಜರುಗುವ ಸುತ್ತೂರು ಜಾತ್ರಾ ಮಹೋತ್ಸವವಂತೂ ಇಡೀ ದೇಶ ಇತ್ತ ತಿರುಗಿ ನೋಡುವಂಥದ್ದು. ಇಂದಿನ ಆಧುನಿಕ ಸಮಾಜದ ಅಭಿವೃದ್ಧಿಗೆ ಪೂರಕವಾದ ಹಲವು ಹತ್ತು ಸಾರ್ಥಕ ಕಾರ್ಯಕ್ರಮಗಳು ಇಲ್ಲಿ ಮೇಳೈಸಿ ಸುತ್ತೂರಿಗೆ ಸುತ್ತೂರೇ ನಾಡಿನ ಲಕ್ಷಾಂತರ ಜನ ಸಮೂಹದಿಂದ ಜಾತ್ರೆಯಲ್ಲಿ ಸಂಭ್ರಮಿಸುವುದುಂಟು. ದೇಶದ ಪ್ರಧಾನಿ ಮತ್ತು ರಾಷ್ಟ್ರಪತಿಯಾದಿಯಾಗಿ ರಾಷ್ಟ್ರದ ಗಣ್ಯಾತಿಗಣ್ಯರೆಲ್ಲಾ ಸುತ್ತೂರು ಜಾತ್ರೆಗೆ ಭೇಟಿ ನೀಡುತ್ತಾರೆಂದರೆ ಸುತ್ತೂರು ಶ್ರೀ ಕ್ಷೇತ್ರದ ಅಪೂರ್ವತೆ ಎಂಥವರಿಗೂ ಅರಿವಾದೀತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜನವರಿ 15 ಗುರುವಾರ 2026

ಸಂಪುಟ: 46 | ಸಂಚಿಕೆ: 268 | ಪುಟಗಳು: 12


₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಶುಭಾಶಯಗಳು



ನಾಡಿನ ಸಮಸ್ತರಿಗೂ ಮಕರ ಸಂಕ್ರಾಂತಿ ಹಬ್ಬದ ಶುಭಾಶಯಗಳು

ಬಿಡುವು

ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ ಜ.16ರ ಶುಕ್ರವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು

ಮಕ್ಕಳಿಗೆ ನೀರು ಕುಡಿಯಲು ಶಾಲೆಗಳಲ್ಲಿ 'ವಾಟರ್ ಬೆಲ್'



ಬೆಂಗಳೂರು, ಜ.14– ರಾಜ್ಯದ ಎಲ್ಲಾ ಸರ್ಕಾರಿ, ಖಾಸಗಿ ಶಾಲೆಗಳಲ್ಲಿ ಮಕ್ಕಳಿಗೆ ನೀರು ಕುಡಿಯಲು ಇನ್ನು ಮುಂದೆ 'ವಾಟರ್ ಬೆಲ್' ಎಂಬ ಸಮಯ ನಿಗದಿ ಮಾಡಬೇಕು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಶಾಲೆಗಳಲ್ಲಿ ಮಕ್ಕಳಿಗೆ ನೀರು ಕುಡಿಯಬೇಕೆಂಬ ಅರಿವು ಅಷ್ಟಾಗಿ ಇರುವುದಿಲ್ಲ. ಮಕ್ಕಳ ಬೆಳವಣಿಗೆ ಮತ್ತು ಆರೋಗ್ಯಕ್ಕೆ ನೀರು ಅತ್ಯವಶ್ಯಕವಾಗಿರುತ್ತದೆ. ಜೊತೆಗೆ ದೇಹದ ಉಷ್ಣತೆಯನ್ನು ನಿಯಂತ್ರಿಸುವುದರ ಜೊತೆಗೆ ಆಹಾರವನ್ನು ಜೀರ್ಣಿಸಿಕೊಳ್ಳಲು ಸಹಾಯ ಮಾಡುತ್ತದೆ. ಹೀಗಾಗಿ ರಾಜ್ಯದಲ್ಲಿರುವ ಎಲ್.ಕೆ.ಜಿ, ಯು.ಕೆ.ಜಿ ಒಳಗೊಂಡಂತೆ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ ಮಕ್ಕಳಿಗೆ ಆಗಾಗ ನೀರು ಕುಡಿಯುವಂತೆ ಜ್ಞಾಪಿಸಲು ವಾಟರ್ ಬೆಲ್ ಅನುಷ್ಠಾನಗೊಳಿಸಲು ಸೂಚನೆ ನೀಡಿದೆ.

ವಾಟರ್ ಬೆಲ್ ಬಗ್ಗೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಶಿಕ್ಷಣ ಇಲಾಖೆಗೆ ಪತ್ರ ಬರೆದು ಮನವಿ ಮಾಡಿತ್ತು. ಅದರಂತೆ ಆಯೋಗದ ಪತ್ರಕ್ಕೆ ನೀರಿನ ಗಂಟೆ ಬಾರಿಸಲು ಶಿಕ್ಷಣ ಇಲಾಖೆ ಪಿಎಂ ಪೋಷಣ್ ಶಕ್ತಿ ನಿರ್ಮಾಣ್ ಸುತ್ತೋಲೆ ಹೊರಡಿಸಿದ್ದು, ಆಗಾಗ್ಗೆ ವಾಟರ್ ಬೆಲ್ ಹೊಡೆದು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲು ಆದೇಶಿಸಿದೆ.

ರಾಹುಲ್ ಗಾಂಧಿ ಬಳಿ ಪ್ರಾರ್ಥನೆ ಬಳಿಕ

ಡಿಕೆಶಿ ದಿಲ್‌ಖುಷ್

ಬೆಂಗಳೂರು, ಜ.14(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಂಪುಟ ಪುನರ್ ರಚನೆಗೆ ಅವಕಾಶ ನೀಡದ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿದಂತೆ 'ಚಿಂತಿಸಬೇಡಿ' ಎಂದೇಳಿ ಅಭಯ ನೀಡಿದ್ದಾರೆ.

ರಾಹುಲ್ ಗಾಂಧಿ ಅವರಿಂದ ಈ ಸಂದೇಶ ದೊರೆಯುತ್ತಿದ್ದಂತೆ ಶಿವಕುಮಾರ್ ತಮ್ಮ ಸಾಮಾಜಿಕ ಜಾಲತಾಣ ಖಾತೆಯಲ್ಲಿ, ಒಂದಲ್ಲಾ ಎರಡು ಬಾರಿ ಟ್ವೀಟ್ ಮಾಡಿ, 'ಪ್ರಯತ್ನ ವಿಫಲವಾದರೂ, ಪ್ರಾರ್ಥನೆ ವಿಫಲ ಆಗುವುದಿಲ್ಲ' ಎಂಬ ಆಶಾಭಾವನೆ ವ್ಯಕ್ತಪಡಿಸಿದ್ದಾರೆ.


ಇದಕ್ಕೆ ಪೂರಕವಾಗಿ ಅವರ ಸಹೋದರ ಡಿ.ಕೆ. ಸುರೇಶ್ 'ಯಶಸ್ಸಿನ ಮೊದಲ ಹೆಜ್ಜೆಯೇ ಪ್ರಯತ್ನ. ಸತತ ಪ್ರಯತ್ನದ ಫಲವೇ ಯಶಸ್ಸು' ಎಂದು ಟ್ವೀಟ್ ಮಾಡಿ, ಹುರಿದುಂಬಿಸಿದ್ದಾರೆ.


ತಮಿಳುನಾಡಿನ ಗುಡಲೂರು ಪ್ರವಾಸ ಮಾರ್ಗದಲ್ಲಿ ಮಂಗಳವಾರ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಿದ ವೇಳೆ, ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಶಿವಕುಮಾರ್ ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಅವರಿಗೆ ನೆನಪಿಸಿದರು.

ಗುಡಲೂರಿಗೆ ತೆರಳುವ ಮುನ್ನ ಹಾಗೂ ದೆಹಲಿಗೆ ಹಿಂತಿರುಗುವ ಸಂದರ್ಭದಲ್ಲೂ ಶಿವಕುಮಾರ್ ತಮಗೆ ಸಿಕ್ಕ ಅಲ್ಪ ಸಮಯದಲ್ಲೇ, ತಾವು ಏನು ಹೇಳಬೇಕೋ ಅದನ್ನು ರಾಹುಲ್ ಕಿವಿಗೆ ಹಾಕಿದರು. ವಿಷಯ ಕುರಿತಂತೆ ಚರ್ಚಿಸಲು ಕಳೆದ ಎರಡು ತಿಂಗಳಿಂದ ಭೇಟಿಗಾಗಿ ಹಾತೊರೆಯುತ್ತಿದ್ದೆ, ಆದರೆ, ಸಾಧ್ಯವಾಗಿರಲಿಲ್ಲ.

ಕರ್ನಾಟಕದಲ್ಲಿ ಪಕ್ಷ ಅಧಿಕಾರ ವಹಿಸಿಕೊಳ್ಳುವ ಸಂದರ್ಭದಲ್ಲಿ ನಡೆದ ಒಪ್ಪಂದದಂತೆ ಸಿದ್ದರಾಮಯ್ಯ ನವೆಂಬರ್ 20ಕ್ಕೆ ಅಧಿಕಾರ ಬಿಟ್ಟುಕೊಡಬೇಕಿತ್ತು.

ದೇವರಾಜ ಅರಸು ಆಡಳಿತ ದಾಖಲೆ ನಂತರವೂ ತಮಗೆ ಅವಕಾಶ ನೀಡದೆ, ಅಧಿಕಾರದಲ್ಲಿ ಮುಂದುವರೆಯುವ ಹಾಗೂ ಸಂಪುಟ ಪುನರ್ ರಚನೆ ಪ್ರಯತ್ನಕ್ಕೂ ಮುಂದಾಗಿದ್ದಾರೆ.





ಇದಕ್ಕೆ ಅವಕಾಶ ನೀಡದೆ ತಮಗೆ ನೀಡಿದ ವಾಗ್ದಾನದಂತೆ ನಡೆದುಕೊಳ್ಳಲು ತಿಳಿಹೇಳಬೇಕು ಎನ್ನುತ್ತಿದ್ದಂತೆ, ರಾಹುಲ್, 'ನೀವೇನೂ ಚಿಂತೆ ಮಾಡಬೇಡಿ, ನಿಮ್ಮನ್ನು ಶೀಘ್ರವೇ ದೆಹಲಿಗೆ ಕರೆಸಿಕೊಳ್ಳುತ್ತೇನೆ' ಎಂಬ ಭರವಸೆ ನೀಡಿದ್ದಾರೆ. ಈ ಭರವಸೆ ಹಿನ್ನೆಲೆಯಲ್ಲಿ ಶಿವಕುಮಾರ್ ಇಂದು ಬೆಳಗ್ಗೆ ಸಾಮಾಜಿಕ ಜಾಲತಾಣದಲ್ಲಿ ■ 10ನೇ ಪುಟಕ್ಕೆ

ಬಹಿರಂಗ ಚರ್ಚೆ ಮಾಡಲಾಗದು

ಬೆಂಗಳೂರು, ಜ.14(ಕೆಎಂಶಿ)– ನಮ್ಮ ಪಕ್ಷದ ನಾಯಕರ ಜೊತೆಗಿನ ಮಾತುಕತೆ ವಿವರ ಕುರಿತು ಬಹಿರಂಗ ಚರ್ಚೆ ಮಾಡುವುದಿಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಕೆಪಿಸಿಸಿ ಅಧ್ಯಕ್ಷ, ರಾಹುಲ್ ಗಾಂಧಿ ಲೋಕಸಭೆ ವಿರೋಧ ಪಕ್ಷದ ನಾಯಕ, ಶಿಷ್ಟಾಚಾರದ ಮೂಲಕ ಅವರನ್ನು ನಾನು ಸ್ವಾಗತಿಸಿ, ಭೇಟಿ ಮಾಡಿದ ವಿಚಾರವನ್ನು ಸಾರ್ವಜನಿಕವಾಗಿ ಚರ್ಚೆ ಮಾಡಲು ಸಾಧ್ಯವೇ? ಎಂದರು.

ನೀವುಗಳು (ಮಾಧ್ಯಮ) ನಿಮಗೆ ಇಚ್ಛೆ ಬಂದಂತೆ ಗೊಂದಲ ಸೃಷ್ಟಿಸಿಕೊಳ್ಳುತ್ತಿದ್ದೀರಿ, ನಾವು ಯಾವ ಸಂದೇಶವನ್ನೂ ಕೊಟ್ಟಿಲ್ಲ, ನಮಗೂ ಯಾವ ಸಂದೇಶವನ್ನೂ ಕೊಟ್ಟಿಲ್ಲ. ಚೆನ್ನಾಗಿ ಕೆಲಸ ಮಾಡುತ್ತಿದ್ದೀರಿ, ಇದನ್ನೇ ಮುಂದುವರಿಸಿಕೊಂಡು ಹೋಗಿ ಎಂಬುದಾಗಿ ನಮ್ಮ ನಾಯಕರು ಹೇಳಿದ್ದಾರೆ. ಮನರೇಗಾ ವಿಚಾರವಾಗಿ ನಾವು ಮಾಡುತ್ತಿರುವ ಕಾರ್ಯಕ್ರಮಗಳ ವಿವರ ತಿಳಿಸಿದ್ದೇನೆ. ರಾಜ್ಯ ಬಿಜೆಪಿಯಲ್ಲಿ ಆಗುತ್ತಿರುವ ರಾಜಕಾರಣ ಚರ್ಚೆ ಮಾಡಿದ್ದೇವೆ. 'ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲವಾಗುವುದಿಲ್ಲ' ಮಾತನ್ನು ನಾನು ಹೊಸದಾಗಿ ಹೇಳುತ್ತಿಲ್ಲ, ಒಕ್ಕಲಿಗ ಉದ್ಯಮಿಯೊಬ್ಬರ ಕಾರ್ಯಕ್ರಮಕ್ಕೆ ಹೋಗಿದ್ದಾಗ ನಾನು ಅಲ್ಲಿನ ಉದ್ಯಮಿಗಳ ಜೊತೆ ನನ್ನ ಅನುಭವದ ಮಾತುಗಳನ್ನು ಹೇಳಿಕೊಂಡಿದ್ದೇನೆ ಎಂದರು. ದೆಹಲಿಗೆ ತೆರಳುತ್ತಿದ್ದೀರಾ ಎಂಬ ಪ್ರಶ್ನೆಗೆ, 16ರಂದು ದೆಹಲಿಗೆ ತೆರಳುತ್ತಿದ್ದೇನೆ ಎಂದಷ್ಟೇ ಉತ್ತರಿಸಿದರು.

ಚಾಮುಂಡಿಬೆಟ್ಟದಲ್ಲಿ ಪ್ರಸಾದ್ ಕಾಮಗಾರಿಗೆ

ಗ್ರಾಮಸ್ಥರ ತೀವ್ರ ವಿರೋಧ

● ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಬಳಿ ಆಕ್ಷೇಪ; ಅವರ ಕಾನೂನು ಹೋರಾಟಕ್ಕೆ ಬೆಂಬಲ ● ಅತ್ತ ವಿವರಣೆ ನೀಡುವಂತೆ ಕೇಂದ್ರ, ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿದ ಹೈಕೋರ್ಟ್



ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಬುಧವಾರ ಸಂಜೆ ಭೇಟಿ ನೀಡಿದ್ದ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರಲ್ಲಿ ಗ್ರಾಮಸ್ಥರು ಬೆಟ್ಟದಲ್ಲಿ ನಡೆಯುತ್ತಿರುವ ಕಾಮಗಾರಿಗಳ ಬಗ್ಗೆ ತಮ್ಮ ಆಕ್ಷೇಪ ವ್ಯಕ್ತಪಡಿಸಿದರು.

ಮೈಸೂರು, ಜ.14(ಪಿಎಂ)– ಚಾಮುಂಡಿಬೆಟ್ಟದಲ್ಲಿ ಕೇಂದ್ರ ಸರ್ಕಾರದ ಪ್ರಸಾದ್ ಯೋಜನೆಯಡಿ ಕೈಗೆತ್ತಿಕೊಂಡಿರುವ ಅಭಿವೃದ್ಧಿ ಕಾಮಗಾರಿಗಳಿಗೆ ಗ್ರಾಮಸ್ಥರಿಂದ ಭಾರೀ ವಿರೋಧ ವ್ಯಕ್ತವಾಗಿದೆ.

ಬುಧವಾರ ಸಂಜೆ ಬೆಟ್ಟಕ್ಕೆ ಭೇಟಿ ನೀಡಿದ್ದ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರೊಂದಿಗೆ ಸದರಿ ಕಾಮಗಾರಿಗಳು ಅನಗತ್ಯ ಎಂದು ಚಾಮುಂಡಿಬೆಟ್ಟದ ಗ್ರಾಮಸ್ಥರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಮತ್ತೊಂದೆಡೆ ಸದರಿ ಕಾಮಗಾರಿ ಸಂಬಂಧ ವಿವರಣೆ ಕೇಳಿ ಕೇಂದ್ರ, ರಾಜ್ಯ ಸರ್ಕಾರಗಳಿಗೆ ರಾಜ್ಯ ಹೈಕೋರ್ಟ್ ನೋಟಿಸ್ ಜಾರಿ ಮಾಡಿದೆ.

ಇಂದು ರಾತ್ರಿ ಸುಮಾರು 7 ಗಂಟೆ ವೇಳೆಗೆ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿದ ಪ್ರಮೋದಾದೇವಿ ಒಡೆಯರ್, ಮೊದಲಿಗೆ ಇಲ್ಲಿನ ಚಾಮುಂಡೇಶ್ವರಿ ದೇವಸ್ಥಾನಕ್ಕೆ ತೆರಳಿ, ಚಾಮುಂಡೇಶ್ವರಿ ದರ್ಶನ ಪಡೆದರು. ಬಳಿಕ ಇಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳನ್ನು ವೀಕ್ಷಿಸಿದರು.

ಈ ವೇಳೆ ಸದರಿ ಕಾಮಗಾರಿಗಳು ಅನಗತ್ಯ ಎಂದು ಗ್ರಾಮಸ್ಥರು ತಮ್ಮ ಅಭಿಪ್ರಾಯವನ್ನು ಪ್ರಮೋದಾದೇವಿ ಒಡೆಯರ್ ಅವರಲ್ಲಿ ಹೇಳಿಕೊಂಡರು. ಸದರಿ ಕಾಮಗಾರಿ ವಿರುದ್ಧ ತಮ್ಮ ಕಾನೂನು ಹೋರಾಟಕ್ಕೆ ಬೆಂಬಲವಾಗಿ ನಿಲ್ಲುವುದಾಗಿ ಪ್ರಮೋದಾದೇವಿ ಒಡೆಯರ್ ಅವರಿಗೆ ಗ್ರಾಮದ ಹಲವು ಮುಖಂಡರು ತಿಳಿಸಿದರು. ಇವೆಲ್ಲಾ ಅನಗತ್ಯ ಕಾಮಗಾರಿ. ಜೊತೆಗೆ ಮಧ್ಯರಾತ್ರಿ ಸಹ ಕಾಮಗಾರಿಗಳನ್ನು ನಡೆಸಲಾಗುತ್ತಿದೆ. ದೇವಸ್ಥಾನದ ಪಕ್ಕದಲ್ಲೇ ಕಾಮಗಾರಿ ಮಾಡುತ್ತಿದ್ದು, ಆ ಮೂಲಕ ದೇವಸ್ಥಾನದ ಪಾರಂಪರಿಕತೆಗೆ ಧಕ್ಕೆ ಉಂಟು ಮಾಡಲಾಗುತ್ತಿದೆ. ■ 10ನೇ ಪುಟಕ್ಕೆ

ಅವಾಚ್ಯ ಶಬ್ಧಗಳಿಂದ ನಿಂದನೆ, ಕೊಲೆ ಬೆದರಿಕೆ: 'ಕೈ' ಮುಖಂಡನ ವಿರುದ್ಧ ಪೌರಾಯುಕ್ತೆ ದೂರು

ಚಿಕ್ಕಬಳ್ಳಾಪುರ, ಜ.14– ಬಳ್ಳಾರಿ ಬ್ಯಾನರ್ ಗಲಾಟೆ ಕಾವು ಇನ್ನೂ ತಣ್ಣಗಾಗಿಲ್ಲ. ಆಗಲೇ ಚಿಕ್ಕಬಳ್ಳಾಪುರದಲ್ಲಿ ಮತ್ತೊಂದು ಬ್ಯಾನರ್ ಫೈಟ್ ಶುರುವಾಗಿದೆ. ಸರ್ಕಾರಿ ಅಧಿಕಾರಿಗೆ ಕಾಂಗ್ರೆಸ್ ಮುಖಂಡ ಬೆದರಿಕೆ ಹಾಕಿದ್ದು, ಮಹಿಳಾ ಅಧಿಕಾರಿ ಕಣ್ಣೀರು ಹಾಕುವಂತೆ ಮಾಡಿದೆ. ಸರ್ಕಾರದ ವಿರುದ್ಧ ಬಿಜೆಪಿ, ಜೆಡಿಎಸ್ ನಾಯಕರು ನಿಗಿನಿಗಿ ಕೆಂಡವಾಗಿದ್ದರೆ, ಅತ್ತ ಉಸ್ತುವಾರಿ ಸಚಿವರು ಏನೂ ಆಗೇ ಇಲ್ಲವೇನೋ ಎನ್ನುವಂತೆ ವರ್ತಿಸುತ್ತಿದ್ದಾರೆ.



ಅಮೃತಗೌಡ



ರಾಜೀವ್‌ಗೌಡ

ಚಿಕ್ಕ ಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟದಲ್ಲಿ ಬ್ಯಾನರ್ ಜಟಾಪಟಿಯಲ್ಲಿ ನಗರಸಭೆ ಪೌರಾಯುಕ್ತೆಗೆ ಕಾಂಗ್ರೆಸ್ ಮುಖಂಡ ಧಮ್ಕಿ ಹಾಕಿದ ಆರೋಪ ಕೇಳಿ ಬಂದಿದೆ. ಕಾಂಗ್ರೆಸ್ ಮುಖಂಡ ರಾಜೀವ್ ಗೌಡ ವಿರುದ್ಧ ದಂಗೆ ಎಬ್ಬಿಸುವ ಬೆದರಿಕೆ ಹಾಕಿದ್ದಾರೆ. ಈ ಹಿನ್ನೆಲೆ ಪೌರಾಯುಕ್ತೆ ಅಮೃತಗೌಡ ಅವರು ಶಿಡ್ಲಘಟ್ಟ ನಗರ ಪೊಲೀಸ್ ಠಾಣೆಗೆ ರಾಜೀವ್ ಗೌಡ ವಿರುದ್ಧ ದೂರು ನೀಡಿದ್ದಾರೆ. ಅವಾಚ್ಯ ಶಬ್ಧಗಳಿಂದ ನಿಂದಿಸಿ, ಕೊಲೆ ಬೆದರಿಕೆ ಆರೋಪ ■ 10ನೇ ಪುಟಕ್ಕೆ

ನಾಗಮಂಗಲ ತಾಲೂಕು ಕಚೇರಿಯಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ

200 ಕೋಟಿ ಮೌಲ್ಯದ ಸರ್ಕಾರಿ ಭೂಮಿ ಅಕ್ರಮ ಮಂಜೂರು: ಐವರ ಬಂಧನ

● ಲೋಕಾಯುಕ್ತದಲ್ಲಿ ಸ್ವಯಂ ಪ್ರೇರಿತ ಪ್ರಕರಣ ದಾಖಲು ● ಮಂಡ್ಯ ಲೋಕಾಯುಕ್ತ ಎಸ್ಪಿ ಸುರೇಶ್ ಬಾಬು ನೇತೃತ್ವದ ತಂಡದಿಂದ ತನಿಖೆ ● ನಕಲಿ ದಾಖಲಾತಿ ಸೃಷ್ಟಿಸಿ, 320 ಎಕರೆ ಕಬಳಿಸಲು ಸಂಚು ● ಹಳೆ ಫಲಾನುಭವಿಗಳಿಗೆ ಕೊಕ್, ಹೊಸಬರ ಹೆಸರು ಸೇರ್ಪಡೆ

ಮಂಡ್ಯ, ಜ.14 (ಬಿಎಲ್‌ಯು)– ನಕಲಿ ಸಾಗುವಳಿ ಚೀಟಿ ಸೃಷ್ಟಿಸಿ ಸುಮಾರು 200 ಕೋಟಿ ರೂ. ಮೌಲ್ಯದ 320 ಎಕರೆ ಸರ್ಕಾರಿ ಜಮೀನು ಹಾಗೂ ಗೋಮಾಳವನ್ನು ಅಕ್ರಮವಾಗಿ ಮಂಜೂರು ಮಾಡಿರುವ ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕು ಕಚೇರಿ ಅಧಿಕಾರಿ ಹಾಗೂ ನೌಕರರ ಮನೆ, ಕಚೇರಿಗಳ ಮೇಲೆ ಲೋಕಾಯುಕ್ತ ಪೊಲೀಸರು ದಿಢೀರ್ ದಾಳಿ ನಡೆಸಿ, ಐವರನ್ನು ಬಂಧಿಸಿದ್ದಾರೆ. ದ್ವಿತೀಯ ದರ್ಜೆ ಸಹಾಯಕರಾದ ಸತೀಶ್ ಹೆಚ್.ವಿ, ಗುರುಮೂರ್ತಿ, ಶಿರಸ್ತೆದಾರರಾದ ರವಿ ಶಂಕರ್, ಉಮೇಶ್, ಕಾಂತಾಪುರ ವೃತ್ತದ ಗ್ರಾಮ ಸಹಾಯಕ ಎಸ್.ಯೋಗೇಶ್ ಬಂಧಿತ ಆರೋಪಿಗಳು.



ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕು ಕಚೇರಿಯಲ್ಲಿ ನಡೆದಿರುವ ಸರ್ಕಾರಿ ಜಮೀನು ಹಾಗೂ ಗೋಮಾಳ ಅಕ್ರಮ ಮಂಜೂರಾತಿ ಸಂಬಂಧ ಲೋಕಾಯುಕ್ತ ಪೊಲೀಸರು ದಾಳಿ ಮಾಡಿ ದಾಖಲಾತಿ ಪರಿಶೀಲಿಸುತ್ತಿರುವುದು.

ನಾಗಮಂಗಲ ತಾಲೂಕಿನ ಹೆಚ್.ಎನ್.ಕಾವಲು, ಚಿಕ್ಕಜಟಕ, ದೊಡ್ಡ ಜಟಕ, ಕರಡಹಳ್ಳಿ ಹಾಗೂ ಇತರೆ ಗ್ರಾಮಗಳಲ್ಲಿರುವ ಸರ್ಕಾರಿ ಭೂಮಿಗೆ ನಕಲಿ ದಾಖಲೆ ಸೃಷ್ಟಿಸಿ ಅಕ್ರಮವಾಗಿ ಮಂಜೂರು ಮಾಡಿರುವ ಬಗ್ಗೆ ಸಾರ್ವಜನಿಕರು ಲೋಕಾಯುಕ್ತರಿಗೆ ದೂರು ನೀಡಿದ್ದರು.

ಇದನ್ನು ಗಂಭೀರವಾಗಿ ಪರಿಗಣಿಸಿದ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ, ಈ ಸಂಬಂಧ ಜ.12ರಂದು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು, ತಾಲೂಕು ಕಚೇರಿ ಅಧಿಕಾರಿಗಳು ಹಾಗೂ ನೌಕರರ ಮನೆ, ಕಚೇರಿ ಸೇರಿದಂತೆ ಸಂಬಂಧಿಸಿದ ಇತರೆ ಸ್ಥಳಗಳ ಮೇಲೆ ದಾಳಿ ನಡೆಸಿ ತನಿಖೆ ಕೈಗೊಳ್ಳುವಂತೆ ಸೂಚಿಸಿ, ಜ.13ರಂದು ಮಂಡ್ಯ ■ 10ನೇ ಪುಟಕ್ಕೆ


ಗ್ರಾಮ ಸಹಾಯಕನ ಕಾರಿನಲ್ಲಿತ್ತು ನಕಲಿ ದಾಖಲೆ ರಾಶಿ

ನ್ಯಾಯಮೂರ್ತಿ ವೀರಪ್ಪ ಅವರ ನಿರ್ದೇಶನದ ಮೇರೆಗೆ ಲೋಕಾಯುಕ್ತ ಎಸ್ಪಿ ಸುರೇಶ್ ಬಾಬು ನೇತೃತ್ವದ ತನಿಖಾ ತಂಡ ಮಂಗಳವಾರ ಬೆಳಗ್ಗೆಯಿಂದ ಬುಧವಾರ ಮುಂಜಾನೆ 4.30ರವರೆಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಗಮಂಗಲ ತಾಲೂಕು ಕಚೇರಿ ಅಧಿಕಾರಿಗಳು ಹಾಗೂ ನೌಕರರ ಮನೆ, ಸರ್ಕಾರಿ ವಸತಿ ಗೃಹ, ಜೆರಾಕ್ಸ್ ಅಂಗಡಿ, ಖಾಸಗಿ ಸ್ಥಳಗಳು ಸೇರಿದಂತೆ ಇತರೆ ಖಾಸಗಿ ಸ್ಥಳಗಳ ಮೇಲೆ ಏಕಕಾಲಕ್ಕೆ ದಾಳಿ ಮಾಡಿ ನಿರಂತರ ಶೋಧ ಕಾರ್ಯ ಕೈಗೊಂಡಿದ್ದರು.

ಗ್ರಾಮ ಸಹಾಯಕ ಯೋಗೇಶ್ ಅವರ ಮನೆ ಹಾಗೂ ಅವರಿಗೆ ಸೇರಿದ ಕಾರು (ಕೆಎ 54, ಎಂ.4459) ಶೋಧನೆ ಮಾಡಿದಾಗ ನಾಗಮಂಗಲ ತಾಲೂಕು ರೆಕಾರ್ಡ್ ರೂಂನ ಮೂಲ ದಾಖಲಾತಿಗಳು, ಸಾರ್ವಜನಿಕರ ಹೆಸರಿನಲ್ಲಿ ಸೃಷ್ಟಿಸಿರುವ ಹಲವು ನಕಲಿ ಚಲನ್‌ಗಳು, ತಿಳುವಳಿಕೆ ನೋಟಿಸ್‌ಗಳು, ಸಾಗುವಳಿ ಚೀಟಿಗಳು, ಅಧಿಕೃತ ಜ್ಞಾಪನಾ ಪತ್ರ ಸಾರ್ವಜನಿಕರ ಹೆಸರಿನಲ್ಲಿ ಮಂಜೂರಾದ ದಾಖಲೆಗಳು, ದರಖಾಸ್ತು ಮಂಜೂರಾತಿ ಕೋರಿದ ಅರ್ಜಿಗಳು, ತಿಳುವಳಿಕೆ ನೋಟಿಸ್, ಕಿಮ್ಮತ್ತು ಪಾವತಿಸಿರುವ ಚಲನ್‌ಗಳು ಪತ್ತೆಯಾಗಿವೆ.

ಇಂದಿನಿಂದ ಐತಿಹಾಸಿಕ ಸುತ್ತೂರು ಜಾತ್ರೆ

ಸೌದೆ ಒಲೆಯ ಮಹಾ ದಾಸೋಹಕ್ಕೆ ಸುತ್ತೂರು ಶ್ರೀಗಳ ಚಾಲನೆ



ಸಂಕ್ರಾಂತಿ ಹಬ್ಬದಂದು ಪ್ರಾರಂಭವಾಗುವ ಐತಿಹಾಸಿಕ ಸುತ್ತೂರು ಜಾತ್ರೆಗೆ ಬರುವ ಲಕ್ಷಾಂತರ ಭಕ್ತರಿಗೆ ಮಹಾಪ್ರಸಾದದ ವ್ಯವಸ್ಥೆ ಮಾಡಲಾಗಿದ್ದು, ಸಾಂಪ್ರದಾಯಿಕ ಸೌದೆ ಒಲೆಯಿಂದ ಅಡುಗೆ ತಯಾರಿಸುವ ಕಾರ್ಯಕ್ಕೆ ಬುಧವಾರ ಸುತ್ತೂರು ಶ್ರೀ ದೇಶಿಕೇಂದ್ರ ಮಹಾಸ್ವಾಮಿಗಳು ಚಾಲನೆ ನೀಡಿದರು. ಚಿತ್ರ: ಸುತ್ತೂರು ನಂಜುಂಡ ನಾಯಕ

ಸುತ್ತೂರು, ಜ.14– ನಂಜನಗೂಡು ತಾಲೂಕು ಸುತ್ತೂರಿನಲ್ಲಿ ಸಂಕ್ರಾಂತಿ ಹಬ್ಬ ದಿನವಾದ ಗುರುವಾರ (ಜ.15)ದಿಂದ ಪ್ರಾರಂಭವಾಗುವ ಸುತ್ತೂರು ಜಾತ್ರೆಗೆ ಮಹಾದಾಸೋಹ ಆರಂಭಗೊಂಡಿದೆ.

ಜಾತ್ರೆಗೆ ಆಗಮಿಸುವ ಲಕ್ಷಾಂತರ ಭಕ್ತಾದಿಗಳಿಗೆ ಸೌದೆ ಒಲೆಯಲ್ಲಿ ಆರೋಗ್ಯಕರ ಅಡುಗೆ ಮಾಡಿ ಬಡಿಸುವ ಕಾಯಕವನ್ನು ತಲ–ತಲಾಂತರದಿಂದಲೂ ನಡೆಯುತ್ತಿದೆ. ಮಠದ ಭಕ್ತರು ಹಾಗೂ ಸುತ್ತ ಮುತ್ತಲ ಗ್ರಾಮಸ್ಥರೆಲ್ಲರೂ ಸೇರಿ ಅಡುಗೆ ತಯಾರಿಸುವ ಕಾಯಕವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಈ ಸೌದೆ ಒಲೆಯಲ್ಲಿ ಅಡುಗೆ ಮಾಡಿ ಬಡಿಸುವ ಆಹಾರ ಪದಾರ್ಥಗಳ ರುಚಿಗೆ ಭಕ್ತರೆಲ್ಲರೂ ಮಾರುಹೋಗಿದ್ದು, ತಂಡೋಪತಂಡವಾಗಿ ಆಗಮಿಸಿ ಪ್ರಸಾದವನ್ನು ಸ್ವೀಕರಿಸಿ ಸಂತುಷ್ಟರಾಗುತ್ತಾರೆ. ಇಂದು ಅಡುಗೆ ತಯಾರಿಕಾ ಕಾರ್ಯಕ್ಕೆ ಶ್ರೀ ಸುತ್ತೂರು ದೇಶಿಕೇಂದ್ರ ಮಹಾಸ್ವಾಮಿಗಳು ಚಾಲನೆ ನೀಡಿದ್ದು, ಬಗೆ–ಬಗೆಯ ಸಿಹಿ ತಿನಿಸು, ಖಾರಬೂಂದಿ, ಪಾಯಸ ಸೇರಿದಂತೆ ವಿವಿಧ ಭಕ್ಷ್ಯಗಳ ತಯಾರಿಕಾ ಕಾರ್ಯ ಆರಂಭವಾಗಿದೆ.

ಈ ವೇಳೆ ದಾಸೋಹ ಸಮಿತಿ ಸಂಚಾಲಕರಾದ ಬೊಕ್ಕಹಳ್ಳಿ ಸುಬ್ಬಪ್ಪನವರು ಮಾತನಾಡಿ, ಜಾತ್ರೆಯಲ್ಲಿ ಸೌದೆ ಒಲೆಯ ಅಡುಗೆಗೆ ವ್ಯವಸ್ಥೆ ಮಾಡಲಾಗಿದ್ದು, ಇದು ಆರೋಗ್ಯಕರವಾದ ಅಡುಗೆ ಮಾಡುವ ವಿಧಾನವಾಗಿದೆ. ಮಹಾಸ್ವಾಮಿಗಳ ಆದೇಶದಂತೆ ಇಂದಿನಿಂದಲೇ ಅಡುಗೆ ತಯಾರಿಕೆ ವ್ಯವಸ್ಥೆ ಮಾಡಲಾಗಿದೆ. ಈ ಜಾತ್ರೆಯ ಆರಂಭಕ್ಕೆ ಮೊದಲೆ ಸುತ್ತ ಮುತ್ತಲ ಗ್ರಾಮಗಳಲ್ಲಿ ಮಠದ ಭಕ್ತರಿಂದ ಕಾಣಿಕೆ, ದವಸ ಧಾನ್ಯಗಳನ್ನು ಪಡೆಯಲಾಗಿದೆ. ಈಗ ಭತ್ತದ ಕಟಾವು ಆಗಿರುವುದರಿಂದ ಭಕ್ತಾದಿಗಳು ತಾವಾಗಿಯೇ ಆಗಮಿಸಿ ಈ ಜಾತ್ರೆಗೆ ಭತ್ತ, ತರಕಾರಿ ಸೇರಿದಂತೆ ವಿವಿಧ ದವಸ ಧಾನ್ಯಗಳನ್ನು ದೇಣಿಗೆಯಾಗಿ ನೀಡಿ ಜಾತ್ರೆಗೆ ತಮ್ಮ ಅಳಿಲು ಸೇವೆಯನ್ನು ಸಲ್ಲಿಸುತ್ತಿದ್ದಾರೆ ಎಂದರು.

ನಮ್ಮ ರಾಜ್ಯವಲ್ಲದೇ ದೇಶ ವಿದೇಶಗಳಲ್ಲೂ ಶ್ರೀ ಮಠದ ಸಂಸ್ಥೆಯ ಶಾಖೆಗಳು ಇರುವುದರಿಂದ ದೇಶ ವಿದೇಶಗಳಿಂದಲೂ ಈ ಜಾತ್ರೆಗೆ ಭಕ್ತಾದಿಗಳು ಆಗಮಿಸಿ ಪ್ರಸಾದವನ್ನು ಸ್ವೀಕರಿಸುತ್ತಾರೆ. ಕಳೆದ ವರ್ಷ ನಡೆದ ಜಾತ್ರೆಯಲ್ಲಿ ಸುಮಾರು 20 ಲಕ್ಷಕ್ಕೂ ಹೆಚ್ಚು ಭಕ್ತಾದಿಗಳು ಆಗಮಿಸಿದ್ದರು, ಈ ಬಾರಿ ಹೆಚ್ಚು ಪ್ರಚಾರ ನಡೆಸಿರುವುದರಿಂದ 25 ಲಕ್ಷಕ್ಕೂ ಹೆಚ್ಚು ಸಂಖ್ಯೆ ಭಕ್ತಾದಿಗಳು ಆಗಮಿಸುವ ನಿರೀಕ್ಷೆಯಿದೆ. ಈ ಬಾರಿ ಎಲ್ಲಾ ಭಕ್ತರಿಗೂ ಕಜ್ಜಾಯ ಹಾಗೂ ಪಾಯಸ ನೀಡುತ್ತಿರುವುದು ವಿಶೇಷವಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಚುಂಚನಹಳ್ಳಿ ಮಠಾಧ್ಯಕ್ಷರಾದ ಶ್ರೀ ಚೆನ್ನಬಸವಸ್ವಾಮಿಗಳು ಮಾತನಾಡಿ ಶ್ರೀ ಮಠದ ಜಾತ್ರೆಗೆ ನಾನು ಕಳೆದ 32 ವರ್ಷಗಳಿಂದ ಆಗಮಿಸುತ್ತಿದ್ದೇನೆ. ಸೌದೆ ಒಲೆಯಲ್ಲೇ ಅಡುಗೆ ಮಾಡಿ ಬಡಿಸುತ್ತಿದ್ದು, ಇದು ಆರೋಗ್ಯಕರವಾದ ಅಡುಗೆ ವಿಧಾನವಾಗಿದೆ. ಹಾಗೂ ಗ್ಯಾಸ್ ಒಲೆಯಲ್ಲಿ ಮಾಡುವ ಅಡುಗೆಗಿಂತಲೂ ಉತ್ತಮ ರುಚಿ ಹೊಂದಿದ್ದು, ಆರೋಗ್ಯಕ್ಕೆ ತುಂಬಾ ಅನುಕೂಲಕರವಾಗಿದೆ ಎಂದು ತಿಳಿಸಿದರು.



ಐಎಎಸ್, ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ


ಮೈಸೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕೇಂದ್ರ ಲೋಕ ಸೇವಾ ಆಯೋಗದವರು ನಡೆಸಲಿರುವ ಐಎಎಸ್ ಹಾಗೂ ಕರ್ನಾಟಕ ಲೋಕ ಸೇವಾ ಆಯೋಗದವರು ನಡೆಸಲಿರುವ ಕೆಎಎಸ್ ಮತ್ತಿತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿಯನ್ನು ಮೈಸೂರಿನ ಕೇಂದ್ರ ಕಚೇರಿಯಲ್ಲಿ ನಡೆಸಲು ನಿರ್ಧರಿಸಲಾಗಿದೆ. ಆಸಕ್ತರು ಜ.17ರೊಳಗಾಗಿ ಬೆಳಗ್ಗೆ 10 ಗಂಟೆಯಿಂದ ಸಂಜೆ 4.30 ಗಂಟೆಯವರೆಗೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು 0821–2515944 ದೂ.ಸಂಖ್ಯೆಯನ್ನು ಸಂಪರ್ಕಿಸಬಹುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಕೆಪಿಆರ್ ಹುಂಡೈನಿಂದ ಹುಂಡೈ ಪ್ರೈಮ್ ಟ್ಯಾಕ್ಸಿ ಕಾರು ಬಿಡುಗಡೆ...



ಕೆಪಿಆರ್ ಗ್ರೂಪ್‌ನ ಪ್ರಮುಖ ಆಟೋಮೋಟಿವ್ ಡೀಲರ್ ಆಗಿರುವ ಕೆಪಿಆರ್ ಹುಂಡೈ ವತಿಯಿಂದ ಜ.12ರಂದು ಮೈಸೂರಿನ ಹಿನಕಲ್ ಗ್ರಾಮದ ಕೆಪಿಆರ್ ಹುಂಡೈ ಶೋ ರೂಂನಲ್ಲಿ ಹೊಸ ಹುಂಡೈ ಪ್ರೈಮ್ ಟ್ಯಾಕ್ಸಿ ಕಾರನ್ನು ಬಿಡುಗಡೆ ಮಾಡಲಾಯಿತು. ಮೈಸೂರಿನ ಟ್ರಾವೆಲ್ ಅಸೋಸಿಯೇಷನ್ ಅಧ್ಯಕ್ಷ ಬಿ.ಎಸ್.ಪ್ರಶಾಂತ್, ಉಪಾಧ್ಯಕ್ಷ ಡೇವಿಡ್‌ರಾಜ್, ಮೈಸೂರು ಮ್ಯಾಕ್ಸಿ ಕ್ಯಾಬ್ ಸಂಘಟನೆಯ ರವಿ, ಕೆಪಿಆರ್ ಹುಂಡೈ ವ್ಯವಸ್ಥಾಪಕ ನಿರ್ದೇಶಕ ವಿ.ಜೆ.ಹೇಮಂತ್, ವಿ.ಜೆ.ಕೌಶಿಕ್, ಜೈಕುಮಾರ್, ಹುಂಡೈ ಮೋಟಾರ್ಸ್ ಇಂಡಿಯಾ ಲಿಮಿಟೆಡ್‌ನ ರಾಕೇಶ್ ಹಾಗೂ ಕಮಲ್, ಗೌತಮ್ ಸೇರಿದಂತೆ ಗ್ರಾಹಕರು ಈ ವೇಳೆ ಉಪಸ್ಥಿತರಿದ್ದರು.

ಕನ್ನಡ ಅಂಕಿಗಳ ದಿನದರ್ಶಿಕೆ ಬಿಡುಗಡೆ...



ಕನ್ನಡ ಚಳವಳಿ ಕೇಂದ್ರ ಸಮಿತಿಯಿಂದ 2026ನೇ ವರ್ಷದ ಕನ್ನಡ ಅಂಕಿಗಳ ದಿನದರ್ಶಿಕೆಯನ್ನು ಯೋಗನರಸಿಂಹಸ್ವಾಮಿ ದೇವಸ್ಥಾನದಲ್ಲಿ ದೇವಸ್ಥಾನದ ಸಂಸ್ಥಾಪಕರಾದ ಪ್ರೊ.ಭಾಷ್ಯಂ ಸ್ವಾಮೀಜಿ ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಪ್ರೊ.ಬಸವರಾಜು, ಹೆಳವರಹುಂಡಿ ಸಿದ್ದಪ್ಪ, ಯಶಸ್ವಿ ಎಸ್.ಸೋಮಶೇಖರ್, ರಾಜಶೇಖರ್ ಕದಂಬ, ಡಾ.ಕೆ.ಸಿ.ಮಹದೇಶ್, ಉದ್ಯಮಿ ಎ.ಸಿ.ಜಗದೀಶ್, ಕನ್ನಡ ಚಳವಳಿ ಕೇಂದ್ರ ಸಮಿತಿ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ ಉಪಸ್ಥಿತರಿದ್ದರು.

ರಾಜ್ಯದಲ್ಲೂ ಶಿವಸೇನೆ ಕಾರ್ಯೋನ್ಮುಖ

ಮೈಸೂರಲ್ಲೂ ಘಟಕ ಆರಂಭ

ಮೈಸೂರು ಜ.14(ಎಂಕೆ)– ಮಹಾರಾಷ್ಟ್ರದಲ್ಲಿ ಪ್ರಾಬಲ್ಯ ಹೊಂದಿರುವ ಶಿವಸೇನೆ ಪಕ್ಷ ಕರ್ನಾಟಕದಲ್ಲೂ ತನ್ನ ವ್ಯಾಪ್ತಿ ವಿಸ್ತರಿಸಿದ್ದು, ರಾಜ್ಯದ 13ನೇ ಜಿಲ್ಲೆಯಾಗಿ ಮೈಸೂರಲ್ಲೂ ಘಟಕ ಆರಂಭಿಸಿದ್ದೇವೆ ಎಂದು ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಗಂಗಾಧರ ಕುಲಕರ್ಣಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಬುಧವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಸೆಂದಿಲ್‌ಕುಮಾರ್ ಜಿಲ್ಲಾಧ್ಯಕ್ಷರಾಗಿ ಕಾರ್ಯನಿರ್ವಹಿಸಲಿದ್ದಾರೆ. ಹಿಂದುತ್ವ ಮತ್ತು ಅಭಿವೃದ್ಧಿ ವಿಚಾರಗಳನ್ನು ಹೊಂದಿರುವ ಶಿವಸೇನೆ ಪಕ್ಷವೂ ಮುಂಬರುವ ಜಿಪಂ, ತಾಪಂ ಮತ್ತು ಗ್ರಾಪಂ ಚುನಾವಣೆಗಳಲ್ಲಿ ಪಕ್ಷ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದ್ದು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಹಿಂದೂ ವಿರೋಧಿ ನೀತಿ ವಿರುದ್ಧ ಧ್ವನಿಯೆತ್ತಲಿದೆ ಎಂದು ಹೇಳಿದರು.

ಕಾಶ್ಮೀರದಲ್ಲಿ ಹಿಂದೂಗಳ ಹಕ್ಕಿಗಾಗಿ ಜ.16ರಿಂದ 19ರವರೆಗೆ ಜಮ್ಮುವಿನಲ್ಲಿ ಹಮ್ಮಿಕೊಂಡಿರುವ ಅಧಿವೇಶನಕ್ಕೆ ಶಿವಸೇನೆ ಬೆಂಬಲ ನೀಡಿದ್ದು, ರಾಜ್ಯ ಶಿವಸೇನೆ ಪಕ್ಷದ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಕಾಶ್ಮೀರದಿಂದ ವಲಸೆ ಬಂದಿರುವ ಹಿಂದೂಗಳಿಗೆ ಮತ್ತೆ ಕಾಶ್ಮೀರದಲ್ಲಿ ನೆಲೆ ಕಲ್ಪಿಸಲು ಹೋರಾಟ ನಡೆಸಲಾಗುವುದು ಎಂದರು.

ದೇಶದಲ್ಲಿ ಬಾಂಗ್ಲಾ ನುಸುಳುಕೋರರ ಸಂಖ್ಯೆ ಹೆಚ್ಚಾಗಿದ್ದು, ಬೆಂಗಳೂರಿನಲ್ಲಿಯೇ ಲಕ್ಷಕ್ಕೂ ಅಧಿಕ ಮಂದಿ ಇದ್ದು, ಬೆಂಗಳೂರಿನ ಪ್ರಮುಖ ಹೋಟೆಲ್‌ಗಳಲ್ಲಿ ಅವರೇ ಕೆಲಸದಲ್ಲಿದ್ದಾರೆ. ಮಾದಕ ವಸ್ತುಗಳ ಮಾರಾಟ ಜಾಲದಲ್ಲಿ ತೊಡಗಿಕೊಂಡಿದ್ದಾರೆ. ಆದ್ದರಿಂದ ರಾಜ್ಯ ಸರ್ಕಾರ ಕೂಡಲೇ ಅವರನ್ನು ಹೊರಗಟ್ಟುವ ಕೆಲಸ ಮಾಡಬೇಕು ಎಂದು ಆಗ್ರಹಿಸಿದರು.

ಶಿವಸೇನೆ ಪಕ್ಷದ ರಾಜ್ಯ ವಕ್ತಾರ ಎಸ್.ಭಾಸ್ಕರನ್, ರಾಜ್ಯ ಸಂಘಟನಾ ಕಾರ್ಯದರ್ಶಿ ಅಮರ್‌ನಾಥ್, ರಾಜ್ಯ ಕಾರ್ಯದರ್ಶಿ ಎಂ.ಎಸ್.ಹರೀಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಮೋದ್, ಸಂಘಟನಾ ಕಾರ್ಯದರ್ಶಿ ಚಂದ್ರಶೇಖರ್, ಮಹಿಳಾಧ್ಯಕ್ಷೆ ಮೀರಾ ಮತ್ತಿತರರಿದ್ದರು.

ಜಿ.ತೇಜಶ್ವಿನಿಗೆ ಚಿನ್ನದ ಪದಕ



ಮೈಸೂರು, ಜ.14–ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆದ 106ನೇ ಘಟಿಕೋತ್ಸವದಲ್ಲಿ ಮಾನಸ ಗಂಗೋತ್ರಿಯ ಎಂ.ಎಸ್ಸಿ ರೇಷ್ಮೆ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಜಿ. ತೇಜಶ್ವಿನಿ ಚಿನ್ನದ ಪದಕ ಗಳಿಸಿದ್ದಾರೆ. ಈಕೆ ನಗರದ ಯರಗನಹಳ್ಳಿಯ ನಿವಾಸಿ ಎಸ್.ಗಣೇಶ್ ಮತ್ತು ಎ.ಪ್ರಮೀಳಾ ಅವರ ಪುತ್ರಿ.

ನಾಳೆ ಸಂಕ್ರಾಂತಿ ಸುಗ್ಗಿ ಹಬ್ಬ

ಮೈಸೂರು, ಜ.14–ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್, ನೇಗಿಲಯೋಗಿ ಮಹಿಳೆಯರ ಮತ್ತು ನೇಗಿಲಯೋಗಿ ಹಿತೈಷಿಗಳ ಸೇವಾ ಬಳಗದಿಂದ ಸಂಕ್ರಾಂತಿ ಸುಗ್ಗಿ ಹಬ್ಬದ ಆಚರಣೆಯನ್ನು ಜ.16ರಂದು ಸಂಜೆ 6 ಗಂಟೆಗೆ ಜಯನಗರದ ನೇಗಿಲಯೋಗಿ ಮರುಳೇಶ್ವರ ಸೇವಾ ಭವನದಲ್ಲಿ ಏರ್ಪಡಿಸಲಾಗಿದೆ.

ಅಂದು ಸಂಗೀತ ಸುಧೆ, ಸಾಂಸ್ಕೃತಿಕ ಕಾರ್ಯಕ್ರಮ, ಎಳ್ಳು–ಬೆಲ್ಲ ಹಂಚುವ ಸಂಭ್ರಮ ಹಾಗೂ ಬಡ್ತಿ ಹೊಂದಿದ ಅಧಿಕಾರಿಗಳಿಗೆ ಸನ್ಮಾನ ಕಾರ್ಯಕ್ರಮವಿರುತ್ತದೆ. ಪುರುಷರು ಪಂಚೆ, ಶರ್ಟ್, ಶಲ್ಯ, ಜುಬ್ಬಾ ಪೈಜಾಮ ಇತರೆ ಹಬ್ಬದ ವಸ್ತ್ರವನ್ನು ಧರಿಸಬಹುದು. ಹೆಂಗಸರು ಯಾವುದಾರೂ ಸೀರೆಯಲ್ಲಿ ಬರಬೇಕು. ಮಕ್ಕಳು ಯಾವುದೇ ರೀತಿ ಬಟ್ಟೆಯಾದರೂ ಸರಿ ಧರಿಸಿಕೊಂಡು ಬರಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ನಿಧನ

ಪುಟ್ಟಮ್ಮಣ್ಣಿ



ಮೈಸೂರು, ಜ.14– ನಗರದ ರಾಮಾನುಜಾ ರಸ್ತೆಯ 12ನೇ ಕ್ರಾಸ್ ನಿವಾಸಿ ಪುಟ್ಟಮ್ಮಣ್ಣಿ ಅವರು ಬುಧವಾರ ಸಂಜೆ ನಿಧನ ರಾದರು. ಅವರಿಗೆ 90 ವರ್ಷ ವಯಸ್ಸಾಗಿತ್ತು.

ಮೃತರಿಗೆ ಓರ್ವ ಪುತ್ರ, ಮೂವರು ಪುತ್ರಿಯರು ಇದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಮೃತರ ಅಳಿಯ ಉದ್ಯಮಿ ಬಂಗಾರಪ್ಪ ತಿಳಿಸಿದ್ದಾರೆ.

ಡೈರಿ ಮಹೇಶ್



ಮೈಸೂರು, ಜ.14–ನಂಜನಗೂಡಿನ ಕಾರೇಪುರ ಗ್ರಾಮದ ನಿವಾಸಿ ಡೈರಿ ಮಹೇಶ್ ಅಲಿಯಾಸ್ ಮಹದೇವ ಕುಮಾರ್(48) ಸೋಮವಾರ ನಿಧನರಾದರು. ಮೃತರು ಪತ್ನಿ ಮಣಿ, ಮಕ್ಕಳಾದ ಮೌರ್ಯ, ಮೌನ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಸಂಜೆ ಸ್ವಗ್ರಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.1.2026 ಗುರುವಾರ, ಮಳೆ ನಕ್ಷತ್ರ: ಉಷಾ, 11.01.2026 ರಿಂದ 23.01.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ದೈಹಿಕ ದೀಕ್ಷೆ– ಅರಿವಿನಿಂದ ಆರೋಗ್ಯದತ್ತ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಡಾ.ಕುಲದೀಪ್.ಎನ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಡಾ.ಪಿ.ಎಸ್.ಮುರಳೀಧರ್, ಗೀತಾ ವೈ.ಪುಟ್ಟಿ ಮತ್ತು ಹಂಸಿನಿ ಎಸ್.ಕುಮಾರ್, ವ್ಯಾಖ್ಯಾನ–ಕೆ.ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.00 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಡಾ. ಎಂ.ಬಾಲಮುರಳಿ ಕೃಷ್ಣ–ಹಾಡುಗಾರಿಕೆ, 11.00 ಸುತ್ತ ಮುತ್ತ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ವಿಜ್ಞಾನ ಭಾರತಿ, 6.50 ಕೃಷಿರಂಗ, ಹಣ್ಣು–ಹೊನ್ನು ತೋಟಗಾರಿಕಾ ಬೆಳೆಗಳ ಸುಸ್ಥಿರ ಬೇಸಾಯ ಕುರಿತ ಬಾನುಲಿ ಸರಣಿ ಮಾವಿನ ಬೆಳೆಯ ಕೀಟ ರೋಗಗಳ ಸಮಗ್ರ ನಿರ್ವಹಣೆ ಕುರಿತು ಸಂವಾದ. ಭಾಗವಹಿಸುತ್ತಾರೆ–ಮೈಸೂರು ತಾಲೂಕು ಎಲಚನಹಳ್ಳಿ ತೋಟಗಾರಿಕಾ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ಜಿ.ಕೆ.ರಾಮೇಗೌಡ, ಅರಸೀಕೆರೆ ತೋಟಗಾರಿಕಾ ಸಂಶೋಧನಾ ಕೇಂದ್ರದ ಸಹಾಯಕ ಪ್ರಾಧ್ಯಾಪಕ ಡಾ.ಜಿ.ಕೆ.ಸುದರ್ಶನ್, ಪ್ರಸ್ತುತಿ–ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ–ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ದ್ವಿತೀಯ ಪಿಯುಸಿ ಪರೀಕ್ಷಾ ಸಿದ್ಧತಾ ಸರಣಿ ಕಾರ್ಯಕ್ರಮ, ವಿಷಯ–ಇತಿಹಾಸ, ಭಾಗವಹಿಸುವವರು–ಮೈಸೂರು ಮಹಾರಾಣಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರೇಮ, ಉಪನ್ಯಾಸಕರು, ಪ್ರಸ್ತುತಿ–ದಿಗ್ವಿಜಯ್ .ಬಿ., 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಆಕಾಶವಾಣಿ ಸಂಗೀತ್ ಸಮ್ಮೇಳನ್–2025–ಡಾ.ಸಹನಾ ಎಸ್.ವಿ.–ವೀಣಾವಾದನ



ಬಾಬಾ ಸಾಹೇಬ್ ಸಮತೆಯೆಡೆಗೆ ನಡಿಗೆ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ–2026

ಚಲನಚಿತ್ರೋತ್ಸವ–2026

(ಕನ್ನಡ–ಸಂಸ್ಕೃತಿ ಇಲಾಖೆ, ರಂಗಾಯಣ, ಮೈಸೂರು)

■ **ಶ್ರೀರಂಗ ರಂಗಮಂದಿರ:** ಬೆಳಗ್ಗೆ 10ರಿಂದ ಇನ್‌ಸೈಡ್ ದಿ ಲಾಸ್ಟ್ ಟ್ರೈಬ್ ಆಫ್ ಬಿಹಾರ್ (ಹಿಂದಿ), ನಿರ್ದೇಶನ : ಸೋನಾಲ್ ಪೆಟೇರಿಯಾ; ಮಧ್ಯಾಹ್ನ 12ರಿಂದ ಜೈ ಭೀಮ್ ಕಾಮ್ರೇಡ್–3 (ಹಿಂದಿ), ನಿರ್ದೇಶನ : ಆನಂದ್ ಪಟವರ್ಧನ್; ಮಧ್ಯಾಹ್ನ 2 ರಿಂದ ಪೆರಿಯೇರುಮ್ ಪೆರುಮಾಳ್ ಬಿ.ಎ., ಬಿ.ಎಲ್., (ತಮಿಳು), ನಿರ್ದೇಶನ : ಮಾರಿ ಸೆಲ್ವರಾಜ್.

ಮಕ್ಕಳ ಬಹುರೂಪಿ

■ **ಭೂಮಿಗೀತ :** ಹೆಗ್ಗೋಡು ನೀನಾಸಂ ತಂಡದಿಂದ ಮೀಡಿಯಾ (ಕನ್ನಡ) ನಾಟಕ ಪ್ರದರ್ಶನ, ರಚನೆ : ಯೂರಿಪಿಡೀಸ್, ಕನ್ನಡಕ್ಕೆ : ಮಾಧವ ಚಿಪ್ಪಳಿ, ನಿರ್ದೇಶನ : ಮಂಜು ಕೊಡಗು, ಸಂಜೆ 6.30ಕ್ಕೆ.

■ **ವನರಂಗ :** ಪಟ್ಲಾ ಭೂಮಿಗೀತ ಸಾಂಸ್ಕೃತಿಕ ವೇದಿಕೆಯಿಂದ ದಿ ಫೈಯರ್ (ತುಳು) ನಾಟಕ ಪ್ರದರ್ಶನ, ರಚನೆ : ಎಡ್ವರ್ಡ್ ಗ್ಯಾಲಿಯಾನೊ, ನಿರ್ದೇಶನ : ಸಂತೋಷ್ ನಾಯಕ್ ಪಟ್ಲಾ, ಸಂಜೆ 7ಕ್ಕೆ.

■ **ಕಿರುರಂಗಮಂದಿರ:** ಉಡುಪಿ ಸುಮನಸಾ ಕೊಡವೂರು ತಂಡದಿಂದ ಈದಿ (ಕನ್ನಡ) ನಾಟಕ ಪ್ರದರ್ಶನ, ಪರಿಕಲ್ಪನೆ ಮತ್ತು ನಿರ್ದೇಶನ : ವಿದ್ದು ಉಚ್ಚಿಲ್, ಸಂಜೆ 7ಕ್ಕೆ.

■ **ಕಲಾಮಂದಿರ :** ಮುಂಬೈ ಕಲೆಕ್ಟಿವ್ ಮ್ಯಾಡ್ನೆಸ್ ಸ್ಟುಡಿಯೋ ತಂಡದಿಂದ ತಾರಾಸ್ ಟ್ರಿಯೋ ನಾಟಕ ಪ್ರದರ್ಶನ, ರಚನೆ : ಆಸಿಫ್ ಅಲಿ ಬೇಗ್, ನಿರ್ದೇಶನ :ಕೌಸ್ತವ್ ಸಿನ್ಹಾ, ಬೆಳಗ್ಗೆ 11 ಮತ್ತು ಸಂಜೆ 7ಕ್ಕೆ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಬೆಳಗ್ಗೆಯಿಂದ ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.

■ **ಶ್ರೀ ಮಹಾಜನ ಸಭಾ ಟ್ರಸ್ಟ್:** ತಿರುಪ್ಪಾವೈ ಪಾರಾಯಣ, ಆಧ್ಯಾತ್ಮಿಕ ಪ್ರವಚನಕಾರರಾದ ಡಾ.ಎನ್.ಕೆ. ರಾಮಶೇಷನ್ ಅವರಿಂದ ಶ್ರೀ ಗೋದಾವರಿ ವಿರಚಿತ ತಿರುಪ್ಪಾವೈ ಪ್ರವಚನ, ಸ್ಥಳ: ಶ್ರೀ ಮಹಾಜನ ಸಭಾ ಟ್ರಸ್ಟ್, ಶ್ರೀರಾಮಮಂದಿರ, ಕಾಂತರಾಜ ರಸ್ತೆ, ಕೃಷ್ಣಮೂರ್ತಿಪುರಂ. ಸಂಜೆ 6.30ಕ್ಕೆ.

■ **ಸಾಧನ ಮಂದಿರ, ಮೈಸೂರು:** ವಿಶೇಷ ತರಬೇತಿ ಶಿಬಿರ ಹಾಗೂ ಸರಸ್ವತಿ ಪೂಜೆ, ಸಾನ್ನಿಧ್ಯ: ಪೂಜ್ಯ ಸ್ವಾಮಿ ಹಂಸಾನಂದ, ಸಂಜೆ 4ರಿಂದ ಶ್ರೀ ವೆಂಕಟೇಶ್ವರ ದೇವಸ್ಥಾನ, ಸಿದ್ಧಾರ್ಥನಗರ; ಸಂಜೆ 5.15ರಿಂದ ಬಲಮುರಿ ವಿನಾಯಕ ದೇವಸ್ಥಾನ, ಸಿದ್ಧಾರ್ಥ ಬಡಾವಣೆ, ಸಂಜೆ 6.30 ರಿಂದ ಗೀತಾ ಶಿಶು ಶಿಕ್ಷಣ ಸಂಘ, ಸಿದ್ಧಾರ್ಥ ಬಡಾವಣೆ.

■ **ಶಿಖಾ ಆರ್ಗ್ಯಾನಿಕ್ಸ್ :** ಉದ್ಘಾಟನಾ ಸಮಾರಂಭ, ಉಪಸ್ಥಿತರು: ಡಾ.ಭಾನು ಕೃಪಾ, ಡಾ.ಶೈಲಜಾ ಧರ್ಮೇಶ್, ಡಾ.ಎಚ್.ಪಿ.ರಾಣಿಪ್ರಭಾ, ಸ್ಥಳ: ಎಸ್‌ಬಿಎಂ ಬಡಾವಣೆ, ಬೆಳಗ್ಗೆ 10ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನ ಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾ ನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

ಸುತ್ತೂರು ಜಾತ್ರಾ ಮಹೋತ್ಸವ (ಜ. 15)

ಸುತ್ತೂರು ಶ್ರೀ ಕ್ಷೇತ್ರ : ವಸ್ತು ಪ್ರದರ್ಶನ, ಕೃಷಿ ಮೇಳ, ಸಾಂಸ್ಕೃತಿಕ ಮೇಳ, ಆರೋಗ್ಯ ತಪಾಸಣಾ ಶಿಬಿರ, ದೋಣಿ ವಿಹಾರ ಉದ್ಘಾಟನಾ ಸಮಾರಂಭ, ದಿವ್ಯ ಸಮ್ಮುಖ: ಶ್ರೀ ಶಿವಬಸವ ಸ್ವಾಮೀಜಿ, ಜಗದ್ಗುರು ಶ್ರೀ ನಿರಂಜನ ಪುರಿ ಮಹಾಸ್ವಾಮೀಜಿ, ಅಧ್ಯಕ್ಷತೆ: ಮಾಜಿ ಸಿಎಂ ಜಗದೀಶ್ ಶೆಟ್ಟರ್, ವಸ್ತು ಪ್ರದರ್ಶನ ಉದ್ಘಾಟನೆ: ಗೃಹ ಸಚಿವ ಜಿ.ಪರಮೇಶ್ವರ್, ಕೃಷಿ ಮೇಳ ಉದ್ಘಾಟನೆ: ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್. ಪಾಟೀಲ್, ಸಾಂಸ್ಕೃತಿಕ ಮೇಳ ಉದ್ಘಾಟನೆ: ಸಣ್ಣ ಕೈಗಾರಿಕೆ ಸಚಿವ ಶರಣ ಬಸಪ್ಪ ದರ್ಶನಾಪುರ, ಆರೋಗ್ಯ ತಪಾಸಣೆ ಉದ್ಘಾಟನೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್, ದೋಣಿ ವಿಹಾರ ಉದ್ಘಾಟನೆ: ಸಂಸದ ಯದುವೀರ್, ಮುಖ್ಯ ಅತಿಥಿಗಳು: ಶಾಸಕರಾದ ಹೆಚ್.ಕೆ.ಸುರೇಶ್, ಎಸ್.ಮಂಜುನಾಥ್, ಹೆಚ್.ಡಿ.ತಮ್ಮಯ್ಯ, ಕೇರಳ ಅಪರ ಕಾರ್ಯದರ್ಶಿ ಕೆ.ಆರ್. ಜ್ಯೋತಿಲಾಲ್, ಬಣ್ಣಾರಿ ಅಮ್ಮನ್ ಶುಗರ್ಸ್ ಅಧ್ಯಕ್ಷ ಎಸ್.ವಿ. ಬಾಲಸುಬ್ರಮಣ್ಯಂ, ಮಂಡ್ಯ ಸಿಇಓ ಕೆ.ಆರ್.ನಂದಿನಿ, ಮೈಸೂರು ಸಿಇಓ ಎಸ್.ಯುಕೇಶ್‌ಕುಮಾರ್, ಸಂಜೆ 4ಕ್ಕೆ.

ಮೈಸೂರು ಹಾಗೂ ಸುತ್ತಮುತ್ತ ನಾಳೆ...

ನಾಳಿನ ಪಂಚಾಂಗ

16.1.2026 ಶುಕ್ರವಾರ, ಮಳೆ ನಕ್ಷತ್ರ: ಉಷಾ, 11.01.2026 ರಿಂದ 23.01.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಮೂಲ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸ್ವಾತಂತ್ರ್ಯ ದೀಪ ಸ್ವರಾಜ್ಯ ಸೇನಾನಿಗಳ ಕುರಿತ ಬಾನುಲಿ ಸರಣಿ, ಪ್ರಸ್ತುತಿ : ನಿತೀಶ್ ಡಂಬಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ –ರೋಹಿಣಿ ಸುಧಾಂ ಮತ್ತು ಎಸ್. ಸಂಗೀತಾ, ವ್ಯಾಖ್ಯಾನ–ಡಾ. ಪ್ರದೀಪ್ ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ–ಹೆಣ್ಣು ಭ್ರೂಣ ಹತ್ಯೆ ಕಾರಣಗಳು ಮತ್ತು ಪರಿಹಾರ ಈ ಕುರಿತು ಮಂಡ್ಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ. ಕೆ. ಮೋಹನ್ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ –ಎನ್. ಕೇಶವಮೂರ್ತಿ, 9.30 ಗಾಂಧೀ ಸ್ಮೃತಿ, 9.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಜಿ.ಎನ್. ಬಾಲಸುಬ್ರಹ್ಮಣ್ಯಂ –ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಕಾಮನಬಿಲ್ಲು– ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ : ಜಿ.ಎನ್. ಮಂಜುನಾಥ್ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಬಿ. ವಿ. ದುರ್ಗಾಭವಾನಿ – ಹಾಡುಗಾರಿಕೆ, 4.00 ಮಹಿಳಾರಂಗ, ಸಖೀ ಸಾಹಿತ್ಯ–ಮಹಿಳಾ ಬರಹಗಾರರೊಂದಿಗೆ ಮಾತುಕತೆ ಭಾಗವಹಿಸುತ್ತಾರೆ–ಲೇಖಕಿ ಕೆ.ಟಿ. ಶ್ರೀಮತಿ, ಪ್ರಸುತಿ–ನೇತ್ರಾ .ಕೆ., 4.30 ಪ್ರಾಯೋಜಿತ ಕಾರ್ಯಕ್ರಮ ಆಧುನಿಕ ಕೃಷಿ ಚಾವಡಿ –ವಿಜ್ಞಾನಿಗಳಿಂದ ಕೃಷಿಕರವರೆಗೆ, ಪ್ರಾಯೋಜಕರು–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ, 6.50 ಕೃಷಿರಂಗ, ಹಲೋ ಕೃಷಿರಂಗ–ಪ್ರಾಯೋಜಿತ ನೇರ ಫೋನ್–ಇನ್ ಕಾರ್ಯಕ್ರಮ, ಪ್ರಾಯೋಜಕರು–ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ಪರಾಗ–ಬೇಸಾಯದ ಬದುಕು ಸರಾಗ, 7.45 ಕನ್ನಡದಲ್ಲಿ ಭಾಷಣ, 8.00 ರಸಮಂಜರಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ಆಕಾಶವಾಣಿ ಸಂಗೀತ್ ಸಮ್ಮೇಳನ್–2025, ಹೆಚ್. ಎಲ್. ಶಿವಶಂಕರಸ್ವಾಮಿ, ಮೃದಂಗ–ತರಂಗ (ಆಕಾಶವಾಣಿ ಮೈಸೂರು ಕೇಂದ್ರದ ಕೊಡುಗೆ), ಪಂಡಿತ್ ಚಟ್ಟೋಪಾಧ್ಯಾಯ ಕೊಳಲು ವಾದನ (ಆಕಾಶವಾಣಿ ಕೊಲ್ಕತ್ತಾ ಕೇಂದ್ರದ ಕೊಡುಗೆ)



ಬಾಬಾ ಸಾಹೇಬ್ ಸಮತೆಯೆಡೆಗೆ ನಡಿಗೆ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ–2026

ಚಲನಚಿತ್ರೋತ್ಸವ–2026

(ಕನ್ನಡ–ಸಂಸ್ಕೃತಿ ಇಲಾಖೆ, ರಂಗಾಯಣ, ಮೈಸೂರು)

■ **ಶ್ರೀರಂಗ ರಂಗಮಂದಿರ:** ಬೆಳಗ್ಗೆ 10 ರಿಂದ ಕರ್ನಾಟಕದಲ್ಲಿ ಅಂಬೇಡ್ಕರ್ ಹೆಜ್ಜೆಗಳು (ಕನ್ನಡ), ನಿರ್ದೇಶನ: ಎನ್.ಎಸ್. ಶಂಕರ್; ಮಧ್ಯಾಹ್ನ 12ರಿಂದ ಋತುಮತಿ (ಕನ್ನಡ), ನಿರ್ದೇಶನ : ಸಿದ್ದೇಗೌಡ ಜಿಬಿಎಸ್; ಮಧ್ಯಾಹ್ನ 2 ರಿಂದ ಪಲ್ಲಟ (ಕನ್ನಡ) ನಿರ್ದೇಶನ : ಎಸ್.ಪಿ. ರಘು.

ಮಕ್ಕಳ ಬಹುರೂಪಿ

■ **ಭೂಮಿಗೀತ :** ಮಹಾರಾಷ್ಟ್ರದ ಲೋಕ್ ಜಾಗೃತಿ ನಾಟ್ಯ ಸಂಸ್ಥೆ, ಚಂದ್ರಾಪುರ ತಂಡದಿಂದ ತೃತೀಯ ರತ್ನ (ಮರಾಠಿ) ನಾಟಕ ಪ್ರದರ್ಶನ, ರಚನೆ : ಮಹಾತ್ಮ ಜ್ಯೋತಿಬಾ ಫುಲೆ, ನಿರ್ದೇಶನ: ಡಾ. ಅನಿರುಧ್ ವಾಂಕರ್, ಸಂಜೆ 6.30ಕ್ಕೆ.

■ **ವನರಂಗ :** ಮೈಸೂರಿನ ನಾಲ್ವಡಿ ಸೋಶಿಯಲ್ ಕಲ್ಚರಲ್ ಅಂಡ್ ಎಜುಕೇಷನಲ್ ಟ್ರಸ್ಟ್ ತಂಡದಿಂದ ಆಳಿದ ಮಾಸ್ವಾಮಿಗಳು (ಕನ್ನಡ) ನಾಟಕ ಪ್ರದರ್ಶನ, ರಚನೆ : ರವಿಕಿರಣ್ ಆರ್. ಬಳ್ಳಗೆರೆ, ನಿರ್ದೇಶನ : ದಿನೇಶ್ ಚಮ್ಮಾಳಿಗೆ, ಸಂಜೆ 7ಕ್ಕೆ.

■ **ಕಿರು ರಂಗಮಂದಿರ :** ಮುಂಬೈನ ಶಬ್ದ್ ಥಿಯೇಟರ್ ಗ್ರೂಪ್ ತಂಡದಿಂದ ಸಿಫಾರ್ (ಹಿಂದಿ) ನಾಟಕ ಪ್ರದರ್ಶನ, ರಚನೆ, ನಿರ್ದೇಶನ : ಸಚಿನ್ ಮಾಲ್ವಿ, ಸಂಜೆ 7ಕ್ಕೆ.

■ **ಕಲಾಮಂದಿರ :** ಉಜ್ಜೈನ್ ಅಂಕೂರ್ ರಂಗಮಂಚ್ ಸಮಿತಿಯಿಂದ ಅಂಬೇಡ್ಕರ್ ಕ ಬಚ್ಚನ್ (ಹಿಂದಿ) ನಾಟಕ ಪ್ರದರ್ಶನ, ರಚನೆ : ಇವಾನ್ ಖಾನ್, ನಿರ್ದೇಶನ : ಹಫೀಜ್ ಖಾನ್, ಬೆಳಗ್ಗೆ 11 ಮತ್ತು ಸಂಜೆ 7ಕ್ಕೆ.

■ **ಶ್ರೀ ಮಹಾಜನ ಸಭಾ ಟ್ರಸ್ಟ್ :** ತಿರುಪ್ಪಾವೈ ಪಾರಾಯಣ, ಆಧ್ಯಾತ್ಮಿಕ ಪ್ರವಚನಕಾರರಾದ ಡಾ.ಎನ್.ಕೆ. ರಾಮಶೇಷನ್ ಅವರಿಂದ ಶ್ರೀ ಗೋದಾವರಿ ವಿರಚಿತ ತಿರುಪ್ಪಾವೈ ಪ್ರವಚನ, ಸ್ಥಳ: ಶ್ರೀ ಮಹಾಜನ ಸಭಾ ಟ್ರಸ್ಟ್, ಶ್ರೀರಾಮಮಂದಿರ, ಕಾಂತರಾಜ ರಸ್ತೆ, ಕೃಷ್ಣಮೂರ್ತಿಪುರಂ. ಸಂಜೆ 6.30ಕ್ಕೆ.


■ **ಸಾಧನ ಮಂದಿರ, ಮೈಸೂರು:** ವಿಶೇಷ ತರಬೇತಿ ಶಿಬಿರ ಹಾಗೂ ಸರಸ್ವತಿ ಪೂಜೆ, ಸಾನ್ನಿಧ್ಯ: ಪೂಜ್ಯ ಸ್ವಾಮಿ ಹಂಸಾನಂದ, ಸಂಜೆ 4ರಿಂದ ಶ್ರೀ ವೆಂಕಟೇಶ್ವರ ದೇವಸ್ಥಾನ, ಸಿದ್ಧಾರ್ಥನಗರ; ಸಂಜೆ 5.15ರಿಂದ ಬಲಮುರಿ ವಿನಾಯಕ ದೇವಸ್ಥಾನ, ಸಿದ್ಧಾರ್ಥ ಬಡಾವಣೆ, ಸಂಜೆ 6.30 ರಿಂದ ಗೀತಾ ಶಿಶು ಶಿಕ್ಷಣ ಸಂಘ, ಸಿದ್ಧಾರ್ಥ ಬಡಾವಣೆ.

■ **ಶಾರದಾ ವಿಲಾಸ ಫಾರ್ಮಸಿ ಕಾಲೇಜು:** ರಾಷ್ಟ್ರೀಯ ಯುವ ದಿನಾಚರಣೆ, ಮುಖ್ಯ ಅತಿಥಿಗಳು: ಪ್ರಾಧ್ಯಾಪಕ ಡಾ.ಎಂ.ಎನ್.ರವಿ, ವಿವೇಕ ವಂಶಿ ಫೌಂಡೇಷನ್ ಸಂಸ್ಥಾಪಕ ಎಸ್.ಬಿ.ನಿತ್ಯಾನಂದ, ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಆರ್.ದಿನೇಶ್, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಡಾ.ಹನುಮಂತಾಚಾರ್ ಜೋಶಿ, ಸ್ಥಳ: ಪ್ರೊ.ಚಿನ್ನಸ್ವಾಮಿ ಶೆಟ್ಟಿ ಕಾನ್ಫರೆನ್ಸ್ ಹಾಲ್, ಬೆಳಗ್ಗೆ 11ಕ್ಕೆ.


ಸುತ್ತೂರು ಜಾತ್ರಾ ಮಹೋತ್ಸವ (ಜ. 16)

ಸುತ್ತೂರು ಶ್ರೀ ಕ್ಷೇತ್ರ: ಸಾಮೂಹಿಕ ವಿವಾಹ, ದಿವ್ಯ ಸಮ್ಮುಖ: ಡಾ.ಗೇಬ್ರಿಯಲ್ ಮಾರ್ ಗ್ರೆಗೋರಿಯಸ್, ಫಾ. ಫ್ರಾನ್ಸಿಸ್ ಸೆದಾವ್ ಎಸ್.ಜೆ., ಉದ್ಘಾಟನೆ: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಅಧ್ಯಕ್ಷತೆ: ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಮಾಂಗಲ್ಯ ವಿತರಣೆ: ತೋಟಗಾರಿಕೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಪ್ರಮಾಣ ಪತ್ರ ವಿತರಣೆ: ಮೀನುಗಾರಿಕೆ ಸಚಿವ ಮಂಕಾಳ ಎಸ್.ವೈದ್ಯ, ಪರಿಕರ ವಿತರಣೆ: ವಿಧಾನಸಭೆ ಉಪಸಭಾಧ್ಯಕ್ಷ ರುದ್ರಪ್ಪ ಮಾನಪ್ಪ ಲಮಾಣಿ, ಪ್ರತಿಜ್ಞಾ ವಿಧಿ ಬೋಧನೆ: ಶಾಸಕ ವಿಜಯಾನಂದ ಎಸ್.ಕಾಶಪ್ಪನವರ್, ಮುಖ್ಯ ಅತಿಥಿಗಳು: ಶಾಸಕ ಸಿ.ಸಿ.ಪಾಟೀಲ್, ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್, ಮಾಜಿ ಸಚಿವ ಅಲ್ಲಂ ವೀರಭದ್ರಪ್ಪ, ಶಾಸಕರಾದ ಕೆ.ವೈ.ನಂಜೇಗೌಡ, ಡಾ.ಹೆಚ್.ಡಿ.ರಂಗನಾಥ್, ಪಿ.ರವಿಕುಮಾರ್ ಗಣಿಗ, ದರ್ಶನ್ ಧ್ರುವನಾರಾಯಣ್, ಬೆಳಗ್ಗೆ 10ಕ್ಕೆ.









ಸಾರ್ವಜನಿಕರ ಗಮನಕ್ಕೆ

ಈ ಮೂಲಕ ತಿಳಿಯ ಪಡಿಸುವುದೇನೇಂದರೆ, ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀ. ಮಹೇಂದ್ರ ಶೆಟ್ಟಿ ಬಿನ್ ಶ್ರೀ. ಲೇಟ್ ಆರ್. ನಾರಾಯಣ ಶೆಟ್ಟಿ ರವರು ನನ್ನ ಕಕ್ಷಿದಾರರಿಗೆ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಇಚ್ಛಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವ ವಿಧವಾದ ಹಕ್ಕು, ಆಸಕ್ತಿಗಳಿದ್ದಲ್ಲಿ ದಾಖಲಾತಿಗಳ ಸಮೇತ ಈ ಕೆಳಕಂಡ ಕಛೇರಿಯ ವಿಳಾಸಕ್ಕೆ 10 ದಿನಗಳ ಒಳಗಾಗಿ ಸಂಪರ್ಕಿಸಲು ಕೋರಲಾಗಿದೆ, ತಪ್ಪಿದ್ದಲ್ಲಿ ಯಾವುದೇ ಆಕ್ಷೇಪವಿಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಕ್ರಯವನ್ನು ಊರ್ಜಿತ ಗೊಳಿಸುತ್ತಾರೆ. ನಂತರದಲ್ಲಿ ಬಂದ ಯಾವುದೇ ಹಕ್ಕುಗಳನ್ನು ಪರಿಗಣಿಸುವುದಿಲ್ಲ ಹಾಗೂ ಕಾನೂನಿನ ರೀತಿ ಊರ್ಜಿತವಿಲ್ಲವೆಂದು ತಿಳಿಯುವುದು. ಕಛೇರಿ ಸಂಖ್ಯೆ 51/1, ಎರಡನೇ ಮಹಡಿ, 5ನೇ ತಿರುವು, 6ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಮೈಸೂರು–09.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು, ವಿಜಯನಗರ, ದೇವರಾಜ ಮೊಹಲ್ಲಾ, 3ನೇ ಹಂತ, ಇ ಬ್ಲಾಕ್ ರ ಸ್ವತ್ತಿನ ಸಂಖ್ಯೆ: ಹೆಚ್‌ಐಜಿ–318, ರ ಅಳತೆ ಪೂರ್ವದಿಂದ–ಪಶ್ಚಿಮಕ್ಕೆ 18.00 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 12.00 ಮೀಟರ್‌ಗಳು ಒಟ್ಟು 216.00 ಚದರ ಮೀಟರ್‌ಗಳುಳ್ಳ ಹಾಗೂ 130.06 ಚದರ ಮೀಟರ್ ಅಳತೆಯುಳ್ಳ ಮನೆಗೆ ಚೆಕ್ಕುಬಂಧಿ ಈ ಕೆಳಗಿನಂತಿದೆ. ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ನಿವೇಶನ ಸಂಖ್ಯೆ. 291, ಉತ್ತರಕ್ಕೆ: ನಿವೇಶನ ಸಂಖ್ಯೆ. 317, ದಕ್ಷಿಣಕ್ಕೆ: ನಿವೇಶನ ಸಂಖ್ಯೆ. 319.

ವಕೀಲರು: ಹರೀಶ್ ಕೆ.ಪಿ, ಕಛೇರಿ ಸಂಖ್ಯೆ 51/1, 5ನೇ ತಿರುವು, 6ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಮೈಸೂರು.
ಮೊ ನಂ: 9886332001
ಸ್ಥಳ: ಮೈಸೂರು ದಿನಾಂಕ: 14–01–2026.

ಮೈಸೂರು ಮಿತ್ರ 46
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಬೇಕಾಗಿದ್ದಾರೆ ಜೂನಿಯರ್ ಮೇಂಟೆನೆನ್ಸ್ ಟೆಕ್ನೀಷಿಯನ್

ಆರ್‌ಪ್ರೊಸೆಸ್ ಸಂಸ್ಥೆಗೆ 0–2 ವರ್ಷಗಳ ಅನುಭವ ಹೊಂದಿರುವ ಜೂನಿಯರ್ ಎಲೆಕ್ಟ್ರಿಕಲ್ ಮೇಂಟೆನೆನ್ಸ್ ಟೆಕ್ನೀಷಿಯನ್ ಮತ್ತು ಮೂಲಭೂತ ಆಡಳಿತಾತ್ಮಕ ಕೆಲಸಗಳಿಗೆ ಬೇಕಾಗಿದ್ದಾರೆ

ಅಗತ್ಯ ಕೌಶಲ್ಯಗಳು: ವೈರಿಂಗ್, ಸ್ವಿಚ್‌ಗಳು, ಸಾಕೆಟ್‌ಗಳು ಮತ್ತು ಲೈಟ್ ಫಿಕ್ಚರ್‌ಗಳ ದುರಸ್ತಿ ಹಾಗೂ ನಿರ್ವಹಣೆಗಳು ಮತ್ತು ಕಂಟ್ರೋಲ್ ಪ್ಯಾನಲ್‌ಗಳ ಜ್ಞಾನವಿರಬೇಕು ಮತ್ತು ಇನ್ವರ್ಟರ್ ನಿರ್ವಹಣೆ ಮಾಡುವುದು ದುರಸ್ತಿ ಹಾಗೂ ಎಲೆಕ್ಟ್ರಿಕಲ್ ಸಿಸ್ಟಂನ ದಿನನಿತ್ಯ ಪರಿಶೀಲನೆ, ಮೇಂಟೆನೆನ್ಸ್ ಪುಸ್ತಕ ನಿರ್ವಹಣೆ ಮತ್ತು ಸಂಪರ್ಕಗಳ ಪರಿಶೀಲನೆ.

ಅರ್ಹತೆ: ITI - ಎಲೆಕ್ಟ್ರಿಕಲ್

ಮೂಲದಾಖಲೆಗಳೊಂದಿಗೆ 16 ಮತ್ತು 19ನೇ ಜನವರಿ 2026 ರಂದು ಬೆಳಿಗ್ಗೆ 9.00 ರಿಂದ ಮಧ್ಯಾಹ್ನ 3.00ರವರೆಗೆ ನೇರ ಸಂದರ್ಶನಕ್ಕೆ ಹಾಜರಾಗಿ
ಸ್ಥಳ: ಗುಣಾಂಬ ಟವರ್ಸ್, ನಂ.579/2, ಡಿ ಸುಬ್ಬಯ್ಯ ರಸ್ತೆ, ಲಕ್ಷ್ಮೀಪುರಂ, ಮೈಸೂರು–04

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: 99800 07732 / 78295 73628 / 79753 64055
Apply to Email: careers@rprocess.net
www.rprocess.in

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,

ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : purmymul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸಾಮಾಗ್ರಿಗಳನ್ನು ಖರೀದಿಸಲು /ಸೇವೆಯನ್ನು ಪಡೆಯಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ **https://kppp.karnataka.gov.in** ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ ಸಂ	ಟೆಂಡರ್ ಪ್ರಕಟಣೆ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	KMF/2025-26/ IND1918	ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟವು ಚೈನ್ನೈನಲ್ಲಿ ವಿವಿಧ ಮಾದರಿಯ ಹಾಲಿನ ಹಾಗೂ ಮೊಸರಿನ ಪ್ಯಾಕೆಟ್‌ಗಳನ್ನು ಕೋ ಪ್ಯಾಕಿಂಗ್ ಮಾಡುವ ಬಗ್ಗೆ. (ಕೋ ಪ್ಯಾಕಿಂಗ್ ಶುಲ್ಕದಲ್ಲಿ ಸಂಸ್ಕರಣಾ, ಪಾಶ್ಚರೈಜಿಂಗ್, ಸ್ಟ್ಯಾಂಡರ್ಡೈಜಿಂಗ್,ಕ್ಲಾರಿಫೈಯಿಂಗ್, ಹೋಮೋಜಿನೈಜೇಷನ್,ಪ್ಯಾಕಿಂಗ್, ರೆಫ್ರಿಜರೇಷನ್ ಹಾಗೂ ರವಾನೆ ಒಳಗೊಂಡಂತೆ).	29.01.2026 ಸಂಜೆ 05.00 ಗಂಟೆಯವರೆಗೆ
2	KMF/2025-26/ IND1919	ಒಕ್ಕೂಟಕ್ಕೆ ಅಗತ್ಯವಿರುವ ಮೇವಿನ ಜೋಳ ಹಾಗೂ ಮುಸುಕಿನ ಜೋಳವನ್ನು ಖರೀದಿಸುವ ಬಗ್ಗೆ.	29.01.2026 ಸಂಜೆ 05.00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗವನ್ನು (6366430821,9482231739) ಸಂಪರ್ಕಿಸಬಹುದಾಗಿದೆ.

ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,



ಸಂಕ್ರಾಂತಿ ಮುನ್ನಾ ದಿನ ಜಿಲ್ಲೆಗೆ ವರುಣನ ಸಿಂಚನ




ಮಡಿಕೇರಿ ಮತ್ತು ನಾಪೋಕ್ಲುವಿನಲ್ಲಿ ಸಂಕ್ರಾಂತಿಯ ಕೊಡುಗೆಯಾಗಿ ವರುಣನ ವರುಷದ ಮೊದಲ ಆಗಮನವಾಗಿದೆ.

ಮಡಿಕೇರಿ, ಜ.14–ಮಕರ ಸಂಕ್ರಾಂತಿ ಮುನ್ನಾ ದಿನ ಜಿಲ್ಲೆಯ ವಿವಿಧ ಭಾಗಗಳಿಗೆ ವರ್ಷದ ಮೊದಲ ವರುಣನ ಪಾದಾರ್ಪಣೆಯಾಗಿದೆ. ಮಡಿಕೇರಿ ನಗರ, ಗಾಳಿಬೀಡು, ಕಾಲೂರು, ಭಾಗಮಂಡಲ, ಅಯ್ಯಂಗೇರಿ, ಮೂರ್ನಾಡು, ಪೊನ್ನಂಪೇಟೆ ತಾಲೂಕಿನ ಹುದಿಕೇರಿ, ಬಿರುನಾಣಿ ನಾಪೋಕ್ಲು ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಹಲವು ಗ್ರಾಮಗಳಲ್ಲಿ ಸಾಧಾರಣ ಮಳೆಯಾಗಿದೆ.

ಅಕಾಲಿಕವಾಗಿ ಸುರಿದ ಮಳೆಯಿಂದ ಕಾಫಿ ಬೆಳೆಗಾರರಲ್ಲಿ ಆತಂಕ ಸೃಷ್ಟಿಯಾಗಿದೆ. ಇದೀಗ ಕಾಫಿ ಕೊಯ್ಲು ಕಾರ್ಯ ಆರಂಭ ಕಂಡಿದ್ದು, ಮಳೆ ಸುರಿದಲ್ಲಿ ಈಗಾಗಲೇ ಹಣ್ಣಾಗಿರುವ ಕಾಫಿ ಉದುರುವ, ಹಾಗೂ ಕೊಯ್ಲಿಗೂ ಮುನ್ನವೇ ಗಿಡಗಳಲ್ಲಿ ಹೂವುಗಳು ಅರಳುವ ಆತಂಕವಿದೆ. ಮತ್ತೊಂದೆಡೆ ಈಗಾಗಲೇ ಕುಯಿಲು ಮಾಡಿರುವ ಕಾಫಿ ಮೋಡ ಕವಿದ ವಾತಾವರಣದ ನಡುವೆ ಕಣಗಳಲ್ಲಿ ಒಣಗುತ್ತಿದ್ದು, ಈಗ ಅದಕ್ಕೂ ಕಂಟಕವಾಗುತ್ತಿದೆ. ಮಳೆಯಿಂದ ಗಿಡಗಳಲ್ಲಿ ಮೊಗ್ಗುಗಳು ಮೂಡಲು ಪ್ರಾರಂಭವಾದರೆ ಕಾಫಿ ಕುಯ್ಲು ಕಾರ್ಯವನ್ನು ಸಂಪೂರ್ಣವಾಗಿ ಕೈ ಬಿಡಬೇಕಾಗುತ್ತದೆ. ಈ ಹಂತದಲ್ಲಿ ಹಣ್ಣಾಗಿರುವ ಕಾಫಿ ನೆಲಕ್ಕುದುರಿ ನಷ್ಟ ಸಂಭವಿಸುವ ಎಲ್ಲಾ ಸಾಧ್ಯತೆಗಳಿದ್ದು, ಇದು ಬೆಳೆಗಾರರಿಗೆ ನುಂಗಲಾರದ ತುತ್ತಾಗಿ ಪರಿಣಮಿಸುತ್ತದೆ. ಮತ್ತೊಂದೆಡೆ ಭತ್ತದ ಕಟಾವು ಕಾರ್ಯವೂ ನಡೆಯುತ್ತಿದ್ದು, ಗದ್ದೆಗಳಲ್ಲಿ ಬಿಡಲಾಗಿರುವ ಭತ್ತದ ತೆನೆಗಳಿಗೂ ಹಾನಿಯಾಗುವ ಆತಂಕ ಕೃಷಿಕರದ್ದಾಗಿದೆ.

ನಾಪೋಕ್ಲುನಲ್ಲೂ ವರ್ಷಾಧಾರೆ

ಸ್ಥಳೀಯ ಪಟ್ಟಣ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ಬುಧವಾರ ಮಳೆ ಸುರಿದು ಜನಜೀವನ ಅಸ್ತವ್ಯಸ್ತಗೊಂಡಿತ್ತು.

ಪಟ್ಟಣದಲ್ಲಿ ಸುಮಾರು 45 ಮಿಮಿ ಮಳೆಯಾಗಿದ್ದು ಬೇತು, ಹಳೆ ತಾಲೂಕು, ಅಜ್ಜಿ ಮುಟ್ಟ ಕೊಟ್ಟ ಮುಡಿ, ಹೊದ್ದೂರು, ಬಲಮುರಿ ವ್ಯಾಪ್ತಿಗಳಲ್ಲಿ ಮಳೆ ಸುರಿದ ಪರಿಣಾಮ ಬೆಳೆಗಾರರು ಆತಂಕಕ್ಕೊಳಗಾಗಿದ್ದಾರೆ.

ನಾಪೋಕ್ಲು ವ್ಯಾಪ್ತಿಯಲ್ಲಿ ದಿನವಿಡೀ ಮೋಡ ಕವಿದ ವಾತಾವರಣವಿದ್ದು ಮಂಗಳವಾರ ರಾತ್ರಿ ನಾಪೋಕ್ಲು ಚೈಯಂಡಾಣೆ, ಕಕ್ಕಬೆ, ಬಲ್ಲಮಾವಟ್ಟಿ, ಅಯ್ಯಂಗೇರಿ, ಎಮ್ಮೆಮಾಡು, ಹೊದ್ದೂರು, ಕೊಟ್ಟಮುಡಿ ವ್ಯಾಪ್ತಿಯ ಗ್ರಾಮಗಳಲ್ಲಿ ಅಲ್ಲಲ್ಲಿ ಪ್ರಥಮ ವರ್ಷಧಾರೆಯಾಗಿದೆ.

ಕಟ್ಟಡಗಳ ನೆಲಸಮಕ್ಕೆ ಅನಗತ್ಯ ವೆಚ್ಚ: ಆರೋಪ

ವಿರಾಜಪೇಟೆ, ಜ.14–ಪಟ್ಟಣದಲ್ಲಿ ವಾಹನಗಳ ಸಂಖ್ಯೆ ಹೆಚ್ಚುತ್ತಿದ್ದರೂ ಪುರಸಭೆ ಆಡಳಿತದಲ್ಲಿರುವ ಕಾಂಗ್ರೆಸ್ ಸದಸ್ಯರು ಯಾವುದೇ ಕ್ರಮ ಕೈಗೊಳ್ಳದೆ ಇಂದು ರಸ್ತೆ ಬದಿ ವಾಸ ಮಾಡುವ ಕಟ್ಟಡವನ್ನು ಕೆಡವಲು ಹೊರಟಿದ್ದಾರೆ ಎಂದು ಮುಖ್ಯ ರಸ್ತೆ ನಿವಾಸಿ ಡಾ.ಇ.ರಾ.ದುರ್ಗಾ ಪ್ರಸಾದ್ ಆರೋಪಿಸಿದ್ದಾರೆ. ಲೋಕೋಪಯೋಗಿ ಇಲಾಖೆಯು ಪುರಸಭೆ ವ್ಯಾಪ್ತಿಯ ಮುಖ್ಯ ರಸ್ತೆ ಅಗಲಿಕರಣ ಕಾಮಗಾರಿ ಕೈಗೊಂಡು ರಸ್ತೆ ಬದಿ ಕಟ್ಟಡ ಮತ್ತು ಅಂಗಡಿ ಮಳಿಗೆಗಳನ್ನು ಕಟ್ಟುವವರಿಗೆ ಪರವಾನಗಿ ನೀಡುವ ಸಂದರ್ಭ ತಳ ಭಾಗದಲ್ಲಿ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಬೇಕೆಂಬುದನ್ನು ಈಗ ಪುರಸಭೆ ಅಧಿಕಾರಿಗಳು ಹೇಳುತ್ತಿರುವುದು ಶೋಚನೀಯ ಎಂದು ಸುದ್ದಿಗೋಷ್ಠಿಯಲ್ಲಿ ದೂರಿದ್ದಾರೆ.

ಸ್ವಚ್ಛ ಭಾರತ್ ಮಿಷನ್ 2.0 ಯೋಜನೆಯಡಿ 2.76 ಎಂ.ಎಲ್.ಡಿ. ಸಾಮರ್ಥ್ಯದ ತ್ಯಾಜ್ಯ ನೀರು ಘಟಕವನ್ನು ನಿರ್ಮಿಸಲು ಪುರಸಭೆಗೆ ಯೋಜನೆಯೊಂದು ಮಂಜೂರಾಗಿತ್ತು. ಇದರ ಪ್ರಕಾರ 2.76 ಎಂಎಲ್‌ಡಿ ಸಾಮರ್ಥ್ಯದ ತ್ಯಾಜ್ಯ ನೀರು ಘಟಕವನ್ನು ನಿರ್ಮಿಸಲು 3 ಎಕರೆ ಖಾಸಗಿ ಜಮೀನು ಖರೀದಿಸಲು ಸರಕಾರದ ಆದೇಶದಂತೆ ಕೊಟ್ಟೋಳಿ ಗ್ರಾಮದಲ್ಲಿ ಎಕರೆಗೆ 27 ಲಕ್ಷದಂತೆ ಒಟ್ಟು 2.98 ಎಕರೆ ಖಾಸಗಿ ಜಮೀನನ್ನು ಖರೀದಿಸಲು 2025ರ ಜು. 3ರಂದು ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ನಡೆದ ದರ ನಿರ್ಧರಣಾ ಸಮಿತಿ ಸಭೆಯಲ್ಲಿ ನಿರ್ಧರಿಸಿತ್ತು. ಆದರೆ ಕೊಟ್ಟೋಳಿ ಗ್ರಾಮದಲ್ಲಿ ಈ ರೀತಿಯ ಘಟಕ ಬಂದರೆ ಅದರಿಂದ ಪರಿಸರಕ್ಕೆ ಹಾನಿಯಾಗುವುದು ಮತ್ತು ಸುತ್ತಮುತ್ತ ವಾಸಿಸುತ್ತಿರುವ ನಿವಾಸಿಗಳ ಆರೋಗ್ಯಕ್ಕೆ ಹಾಗೂ ಕೃಷಿಗೆ ತೊಂದರೆ ಉಂಟಾಗುವುದೆಂದು ಗ್ರಾಮಸ್ಥರು ಆಕ್ಷೇಪಗಳನ್ನು ಸಲ್ಲಿಸಿದ್ದರು. ಆದ್ದರಿಂದ ಈ ಯೋಜನೆಯು ಹಾಗೆಯೇ ಬಾಕಿ ಉಳಿದಿದೆ ಎಂದು ತಿಳಿಸಿದರು. ಇಲ್ಲಿನ ನಿವಾಸಿಗಳು ಸರಕಾರಕ್ಕೆ ತೆರಿಗೆಯಾಗಿ ಕೊಟ್ಟಿರುವುದನ್ನು ಲೂಟಿ ಮಾಡುತ್ತಿರುವ ಕಾಂಗ್ರೆಸ್ಸಿಗರು ರಸ್ತೆ ಬದಿ ಇರುವ ನಿವಾಸಿಗಳನ್ನು ಹೆದರಿಸಿ ಜಾಗಬಿಟ್ಟು ಕೊಡುವಂತೆ ಒತ್ತಾಯಿಸುವುದು ಸರಿಯಲ್ಲ, ಮುಖಂಡರೆಂದು ಹೇಳಿಕೊಳ್ಳುವ ಇವರು ಮೊದಲು ತಮಗಿದ್ದ ಹಾಗೂ ಅನಂತರ ಇವರ ಹೆಸರಿನಲ್ಲಿರುವ ಸಂಪತ್ತಿನ ಬಗ್ಗೆ ಮೊದಲು ತನಿಖೆಯಾಗಲಿ ಎಂದು ಆಗ್ರಹಿಸಿದರು.

ಮುಖ್ಯ ರಸ್ತೆ ಬದಿ ನಿವಾಸಿ ನೆಲ್ಲಮಕ್ಕಡ ಗಣಪತಿ ಮಾತನಾಡಿ, ಕೆಲವು ಕಾಂಗ್ರೆಸ್ಸಿಗರು ನಮ್ಮ ಜಾಗವನ್ನು ಬಿಟ್ಟುಕೊಡುವಂತೆ ಒತ್ತಾಯ ಮಾಡುತ್ತಿದ್ದಾರೆ. ಆದರೆ ಯಾವುದೇ ಪರಿಹಾರ ಸಿಗದಿದ್ದಾಗ ಜಾಗವನ್ನು ಹೇಗೆ ಬಿಟ್ಟುಕೊಡುವುದು. ಅಂದು ಶಾಸಕರು ಹೇಳಿದಂತೆ ರಸ್ತೆ ಬದಿ ಇರುವ ನಿವಾಸಿಗಳು ಸ್ವ ಇಚ್ಛೆಯಿಂದ ಜಾಗ ಬಿಟ್ಟು ಕೊಟ್ಟರೆ ಮಾತ್ರ, ಇಲ್ಲ ಬಲಾತ್ಕಾರ ಮಾಡುವುದು ಬೇಡ ಎಂದು ಹೇಳಿದ್ದರೂ ಇಂದು ಜನರನ್ನು ಒಕ್ಕಲೆಬ್ಬಿಸುತ್ತಿದ್ದಾರೆ ಎಂದು ಅವರು ದೂರಿದರು.

ಹಿರಿಯ ಶಿಕ್ಷಣ ತಜ್ಞ ಕೂತಂಡ ಪಿ.ಉತ್ತಪ್ಪ ನಿಧನ



ಮಡಿಕೇರಿ,ಜ.14–ಕೊಡಗಿನ ಸ್ವಾತಂತ್ರ ಚಳುವಳಿಯ ಪ್ರಥಮ ಹೋರಾಟ ಗಾರ್ತಿ ಹಾಗೂ ಮೊದಲ ಕೊಡವ ಕಾದಂಬರಿಕಾರರಾಗಿದ್ದ ದಿವಂಗತ ಕೂತಂಡ ಪಾರ್ವತಿ ಅವರ ಪುತ್ರ ಹಿರಿಯ ಶಿಕ್ಷಣ ತಜ್ಞ, ಕೂತಂಡ ಪಿ.ಉತ್ತಪ್ಪ (90) ಅವರು ಬುಧವಾರ ನಿಧನರಾಗಿದ್ದಾರೆ.

ಸಿ.ಸಿ. ಕಾಫಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾಗಿ, ಕೊಡಗು ಪ್ಲಾಂಟರ್ಸ್ ಅಸೋಸಿಯೇಷನ್, ಕೊಡವ ವಿದ್ಯಾ ನಿಧಿ, ಭಾರತೀಯ ವಿದ್ಯಾ ಭವನ ಸೇರಿದಂತೆ ಅನೇಕ ಸಂಘ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಿದ್ದ ಕೆ.ಪಿ.ಉತ್ತಪ್ಪ, ಕೊಡಗಿನ ಹಿರಿಯ ಕಾಫಿ ಬೆಳೆಗಾರರಾಗಿಯೂ ಗುರುತಿಸಿಕೊಂಡಿದ್ದರು.

ಪಾಲಿಬೆಟ್ಟದಲ್ಲಿ ನೆಲೆಸಿದ್ದ ಉತ್ತಪ್ಪ ಅವರು ನಿನ್ನೆ ದಿಢೀರ್ ಆಗಿ ಅಸ್ವಸ್ಥಗೊಂಡಿದ್ದರು. ಬಳಿಕ ಅವರನ್ನು ಚಿಕಿತ್ಸೆಗಾಗಿ ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೆ ಮಧ್ಯಾಹ್ನ ನಿಧನರಾಗಿದ್ದಾರೆ. ಮೃತರು ಪತ್ನಿ ವಾಣಿ, ಇಬ್ಬರು ಪುತ್ರರು ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯ ಕ್ರಿಯೆ ಗುರುವಾರ ಮೃತರ ಸ್ವಗ್ರಾಮ ಪಾಲಿಬೆಟ್ಟದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕುಡಿದ ಮತ್ತಲ್ಲಿ ತಂದೆ ಹತ್ಯೆ: ಶವ ಸುಟ್ಟು ಹಾಕಿ ಸಾಕ್ಷ್ಯ ನಾಶ ಆರೋಪ

ಮಡಿಕೇರಿ, ಜ.14–ಕುಡಿದ ಮತ್ತಿನಲ್ಲಿ ನಡೆದ ಗಲಾಟೆಯಲ್ಲಿ ಪಶ್ಚಿಮ ಬಂಗಾಳ ಮೂಲದ ಕಾರ್ಮಿಕನೋರ್ವ ತನ್ನ ತಂದೆಯನ್ನೇ ಹೊಡೆದು ಕೊಂದಿದ್ದು, ತಾವು ವಾಸವಿದ್ದ ಲೈನ್ ಮನೆಯ ಮಾಲೀಕ ಮತ್ತು ಇತರ ಕಾರ್ಮಿಕರು ಪ್ರಕರಣ ಮುಚ್ಚಿ ಹಾಕುವ ಸಲುವಾಗಿ ಮೃತದೇಹವನ್ನು ಸುಟ್ಟು ಹಾಕಿರುವ ಘಟನೆ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ತಡವಾಗಿ ಬೆಳಕಿಗೆ ಬಂದಿದೆ.

ಮರಗೋಡು ಕಟ್ಟೆಮಾಡು ನಿವಾಸಿ ಕೆ.ಕೆ. ಚೇತನ್ ಎಂಬವರು ಜ.13ರಂದು ನೀಡಿದ ದೂರನ್ನು ಆಧರಿಸಿ ಗ್ರಾಮಾಂತರ ಪೊಲೀಸರು ಕೊಲೆ ಆರೋಪಿ ಪ್ರಶಾಂತ್ ಎಂಬಾತನನ್ನು ವಶಕ್ಕೆ ಪಡೆದಿದ್ದಾರೆ. ಮೃತ ದೇಹವನ್ನು ಸುಟ್ಟು ಹಾಕಿರುವುದು ಮತ್ತು ಸಾಕ್ಷ್ಯ ನಾಶಕ್ಕೆ ಯತ್ನಿಸಿದ ಇತರ ಆರೋಪಿಗಳ ವಿರುದ್ಧವೂ ತನಿಖೆ ಮುಂದುವರೆದಿದೆ.

ಪ್ರಕರಣ ಹಿನ್ನೆಲೆ: ಗ್ರಾಮಾಂತರ ಠಾಣಾ ವ್ಯಾಪ್ತಿ ನಿವಾಸಿ ಕೆ.ಕೆ.ಚೇತನ್ ಎಂಬವರು ಕಟ್ಟೆಮಾಡು ಗ್ರಾಮದಲ್ಲಿ 9 ಎಕರೆ ಕಾಫಿ ತೋಟ ಹೊಂದಿದ್ದು, ಕಾಫಿ ಕುಯಿಲು ಮಾಡಿ ಪಕ್ಕದಲ್ಲೇ ಇರುವ ಕಣದಲ್ಲಿ ಒಣಗಲು ಹಾಕಿದ್ದರು. ಜ.11ರಂದು ರಾತ್ರಿ 8.30 ಗಂಟೆಗೆ ಕಣದಲ್ಲಿರುವ ಕಾಫಿ ನೋಡಲು ತೆರಳಿದ್ದ ಸಂದರ್ಭ ಅಲ್ಲಿನ ನಿವಾಸಿ ದೇವಯ್ಯ ಎಂಬವರ ಲೈನ್ ಮನೆಯಲ್ಲಿ ಗಲಾಟೆ ಮಾಡುತ್ತಿರುವುದು ಕಂಡು ಬಂದಿತು. ಮದ್ಯ ಸೇವಿಸಿ ಗಲಾಟೆ ನಡೆಯುತ್ತಿರುವುದನ್ನು ಅರಿತ ಚೇತನ್ ಬಳಿಕ ತಮ್ಮ ಮನೆಗೆ ಮರಳಿದ್ದರು. ಈ ಗಲಾಟೆಯಲ್ಲಿ ಕಾರ್ಮಿಕ ಪ್ರಶಾಂತ್ ತನ್ನ ತಂದೆ ಬೂರಾ ಎಂಬಾತನನ್ನು ದೊಣ್ಣೆಯಿಂದ ಹೊಡೆದು ಕೊಂದಿದ್ದಾನೆ. ಪ್ರಕರಣವನ್ನು ಮುಚ್ಚಿ ಹಾಕುವ ಸಲುವಾಗಿ ಇತರ ಕಾರ್ಮಿಕರ ಸಹಾಯ ಪಡೆದು ಮೃತ ದೇಹವನ್ನು ವಾಹನವೊಂದರಲ್ಲಿ ಬೇರೆಡೆಗೆ ಸಾಗಿಸಿ ಸುಟ್ಟು ಹಾಕಿದ್ದಾರೆ. ಈ ವಿಚಾರವನ್ನು ತೋಟದ ಲೈನ್ ಮನೆಯಲ್ಲಿ ವಾಸವಿರುವ ಕಾರ್ಮಿಕ ಮಹಿಳೆಯೊಬ್ಬರು ತಮ್ಮ ಮಾಲೀಕರಿಗೆ ತಿಳಿಸಿದ್ದಾರೆ. ಕೊಲೆ ಆರೋಪಿ ಪ್ರಶಾಂತ್, ಮೃತದೇಹ ಸಾಗಿಸಿ ಸುಟ್ಟು ಹಾಕಿರುವ ದೇವಯ್ಯ ಮತ್ತು ಅವರ ಪತ್ನಿ ಭಾರತಿ ಹಾಗೂ ಇತರ ಕಾರ್ಮಿಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಲೈನ್ ಮನೆಯನ್ನು ಸೀಲ್ ಮಾಡಿದ್ದಾರೆ.

ಸೇತುವೆ ದುರಸ್ತಿಗೆ ಆಗ್ರಹಿಸಿ

ಶಂಭೂನಹಳ್ಳಿ ಗ್ರಾಮಸ್ಥರಿಂದ ರಸ್ತೆ ತಡೆ



ಸೇತುವೆ ದುರಸ್ತಿಗೆ ಆಗ್ರಹಿಸಿ ಶಂಭೂನಹಳ್ಳಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಪಾಂಡವಪುರ, ಜ.14 (ಆರ್‌ಕೆ)– ಕುಸಿದು ಬಿದ್ದಿರುವ ಸೇತುವೆ ದುರಸ್ತಿಗೊಳಿಸುವಂತೆ ಆಗ್ರಹಿಸಿ ತಾಲೂಕಿನ ಕಸಬಾ ಹೋಬಳಿ ಶಂಭೂನಹಳ್ಳಿ ಗ್ರಾಮಸ್ಥರು ಬುಧವಾರ ರಸ್ತೆ ತಡೆ ನಡೆಸಿದರು.

ಕಳೆದ 3 ತಿಂಗಳ ಹಿಂದೆ ಪಾಂಡವಪುರ ಮತ್ತು ಕೆ.ಬೆಟ್ಟಹಳ್ಳಿ ನಡುವೆ ಶಂಭೂನಹಳ್ಳಿ ಗ್ರಾಮದ ಬಳಿ ರಸ್ತೆಗೆ ಅಡ್ಡಲಾಗಿ ನಿರ್ಮಿಸಿರುವ ಸಂಪರ್ಕ ಸೇತುವೆ ಕುಸಿದಿರುವುದರಿಂದ ಆ ಮಾರ್ಗದಲ್ಲಿ ವಾಹನ ಸಂಚಾರಕ್ಕೆ ತೀವ್ರ ತೊಂದರೆ ಉಂಟಾಗಿದೆ. ಸೇತುವೆ ದುರಸ್ತಿಗೊಳಿಸುವಂತೆ ಹಲವು ಬಾರಿ ಮನವಿ ಮಾಡಿದರೂ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಕ್ರಮವಹಿಸಿಲ್ಲ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಕುಸಿದಿರುವ ಸೇತುವೆ ಬಳಿ ಅಪಾಯ ಸಂಭವಿಸಿದರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳೇ ಹೊಣೆಗಾರರಾಗಬೇಕಾಗುತ್ತದೆ. ತಕ್ಷಣ ಕಾಮಗಾರಿ ಕೈಗೊಂಡು ರಸ್ತೆ ಸಂಪರ್ಕ ಕಲ್ಪಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದರು. ವಿಷಯ ತಿಳಿದು ಸ್ಥಳಾಕ್ಕಾಗಮಿಸಿದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು, ಈಗಾಗಲೇ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಸಂಕ್ರಾಂತಿ ನಂತರ ಕೆಲಸ ಆರಂಭಿಸಲಾಗುವುದೆಂದು ಭರವಸೆ ನೀಡಿದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಧರಣಿ ಕೈಬಿಟ್ಟರು.

ವಿಜೃಂಭಣೆಯ ಶ್ರೀ ತ್ಯಾಗರಾಜರ ಆರಾಧನಾ ಮಹೋತ್ಸವ



ಕಾರ್ಯಕ್ರಮವನ್ನು ಶಾಸಕ ದರ್ಶನ್ ಪುಟ್ಟಣ್ಣಯ್ಯ ಉದ್ಘಾಟಿಸಿದರು.

ಪಾಂಡವಪುರ, ಜ.14– ಸವಿತ ಸಮಾಜದಿಂದ ಪಟ್ಟಣದ ಟಿಎಪಿಸಿಎಂಎಸ್ ರೈತ ಸಭಾಂಗಣದಲ್ಲಿ 4ನೇ ವರ್ಷದ ಸದ್ಗುರು ಶ್ರೀತ್ಯಾಗರಾಜರ ಆರಾಧನಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಮಹೋತ್ಸವದ ಅಂಗವಾಗಿ ಸವಿತ ಸಮುದಾಯದ ಮುಖಂಡರು ಪಟ್ಟಣದ ಸುಬ್ರಹ್ಮಣ್ಯ ದೇವಸ್ಥಾನ ಬಳಿಯ ಸವಿತ ಸಮಾಜದ ರಾಮಮಂದಿರದ ಬಳಿಯಿಂದ ಶ್ರೀತ್ಯಾಗರಾಜರ ಭಾವಚಿತ್ರವನ್ನು ವಾದ್ಯಗೋಷ್ಠಿ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಬಳಿಕ ಟಿಎಪಿಸಿಎಂಎಸ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮಕ್ಕೆ ಶ್ರೀತ್ಯಾಗರಾಜರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು ಚಾಲನೆ ನೀಡಿದರು.

ಈ ವೇಳೆ ಮೈಸೂರಿನ ಸವಿಗಾನ ಸಂಗೀತ ಶಾಲೆ ವಿದೂಷಿ ಗಾಯಿತ್ರಿ ಸತ್ಯನಾರಾಯಣ ಶಿಷ್ಯ ವೃಂದ ಹಾಗೂ ಶ್ರೀಹರೀಶ್ ಪಾಂಡವ ತಂಡ ಶ್ರೀತ್ಯಾಗರಾಜರ ಪಂಚರತ್ನ ಕೃತಿಗಳ ಗೋಷ್ಠಿ ಗಾಯನ ನಡೆಸಿದರು. ಬಳಿಕ ವಿಶೇಷ ನಾದಸ್ವರ ಕಲಾವಿದರಾದ ಎನ್. ರಾಜೇಶ್, ಎನ್.ಮಂಜು, ಡೋಲ್ ವಿದ್ವಾನ ಕಲಾವಿದರಾದ ಬಿ.ಆರ್.ವೆಂಕ ಟೇಶ್, ಕೆ. ಅಜಯ್ ಕುಮಾರ್, ಚಂದನ್ ಕುಮಾರ್ ಆರ್.ತಂಡದಿಂದ ನಾದಸ್ವರ ನಡೆಸಲಾಯಿತು. ಬಳಿಕ ಸಮುದಾಯದ ಎಲ್ಲಾ ಮುಖಂಡರಿಗೂ ಅಭಿನಂದನೆ ಸಲ್ಲಿಸಿದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ಸವಿತ ಸಮುದಾಯದ ಮುಖಂಡರು ಪ್ರತಿ ವರ್ಷ ಶ್ರೀತ್ಯಾಗರಾಜರ ಆರಾಧನಾ ಮಹೋತ್ಸವವನ್ನು ನಡೆಸುವ ಮೂಲಕ ಸಂಸ್ಕೃತಿಯನ್ನು ಕಟ್ಟಿ ಬೆಳೆಸುವ ಕೆಲಸ ಮಾಡುತ್ತಿದ್ದಾರೆ. ಪಟ್ಟಣದಲ್ಲಿ ಶ್ರೀರಾಮ ಮಂದಿರ ನಿರ್ಮಾಣ ಮತ್ತು ಅದರ ಮೇಲೆ ಸಂಗೀತ ಮತ್ತು ವಾದ್ಯ ಶಾಲೆ ನಡೆಸಲು ಕಟ್ಟಡ ನಿರ್ಮಿಸಿ ಕೊಡುವಂತೆ ಮನವಿ ಮಾಡಿದ್ದಾರೆ. ಸರ್ಕಾರದಿಂದ ಹಣ ಬಿಡುಗಡೆಯಾಗದ ಕಾರಣ ಸ್ವಲ್ಪ ತಡವಾಗಿದೆ. ಮುಂದಿನ ದಿನಗಳಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಇದೇ ವೇಳೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಮತ್ತು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಸವಿತ ಸಮುದಾಯದ ತಾಲೂಕು ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಮುಖಂಡರು ಹಾಜರಿದ್ದರು.

ಹುತಾತ್ಮ ವೀರ ಯೋಧನಿಗೆ ಗೌರವ ಸಲ್ಲಿಕೆ



ವೀರಯೋಧ ಮಾದೇಗೌಡರಿಗೆ ಡಿಸಿ ಗೌರವ ಸಲ್ಲಿಸಿದರು.

ಮಂಡ್ಯ, ಜ.14– ಕರ್ತವ್ಯದ ವೇಳೆ ಹೃದಯಾಘಾತದಿಂದ ಸಾವನ್ನಪ್ಪಿದ ವೀರಯೋಧ ಮಾದೇಗೌಡರಿಗೆ ನಗರದ ಜಿಲ್ಲಾ ಸಶಸ್ತ್ರ ಮೀಸಲು ಪಡೆ(ಡಿಎಆರ್) ಮೈದಾನದಲ್ಲಿ ಜಿಲ್ಲಾಡಳಿತದಿಂದ ಗೌರವ ಸಲ್ಲಿಸಲಾಯಿತು.

ನಗರದ ತಾವರೆಗೆರೆ ಗ್ರಾಮದ ನಿವಾಸಿ ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಯೋಧ ಎಂ.ಬಿ.ಮಾದೇಗೌಡ(44) ಸಾವನ್ನಪ್ಪಿದವರು. ಇವರು 2000ರಲ್ಲಿ ಮೈಸೂರಿನಲ್ಲಿ ನಡೆದ ಸೇನಾ ನೇಮಕಾತಿ ರ‍್ಯಾಲಿ ವೇಳೆ ಆಯ್ಕೆಯಾಗಿ 25 ವರ್ಷಗಳ ಕಾಲ ದೇಶದ ವಿವಿಧೆಡೆ ಸೇವೆ ಸಲ್ಲಿಸಿದ್ದರು. ಪ್ರಸ್ತುತ ಮಹಾರಾಷ್ಟ್ರ ರಾಜ್ಯದ ಚಾಕೋರು ಜಿಲ್ಲೆಯ ಲಾತೂರ್‌ನ ಬಿಎಸ್‌ಎಫ್ ತರಬೇತಿ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ಮಾದೇಗೌಡರು ಹೃದಯಾಘಾತದಿಂದ ಸಾವನ್ನಪ್ಪಿದ್ದರು.

ಮಂಡ್ಯಕ್ಕೆ ಆಗಮಿಸಿದ ಮೃತ ಯೋಧ ಮಾದೇಗೌಡರ ಪಾರ್ಥಿವ ಶರೀರವನ್ನು ನಗರದ ಜಿಲ್ಲಾ ಸಶಸ್ತ್ರ ಮೀಸಲು ಪಡೆ (ಡಿಎಆರ್) ಮೈದಾನದಲ್ಲಿರಿಸಿ ಗಾಳಿಯಲ್ಲಿ 3 ಸುತ್ತು ಗುಂಡು ಹಾರಿಸುವ ಮೂಲಕ ಹುತಾತ್ಮ ಯೋಧನಿಗೆ ಗೌರವ ಸಲ್ಲಿಸಲಾಯಿತು.

ಈ ವೇಳೆ ಯೋಧನ ಪಾರ್ಥಿವ ಶರೀರಕ್ಕೆ ಶಾಸಕ ರವಿಕುಮಾರ್, ಜಿಲ್ಲಾಧಿಕಾರಿ ಡಾ.ಕುಮಾರ ಮತ್ತು ಜಿಲ್ಲಾ ಪೊಲೀಸ್ ಅಧೀಕ್ಷಕಿ ಶೋಭಾರಾಣಿ ಪುಷ್ಪಗುಚ್ಛ ಇರಿಸಿ ಅಂತಿಮ ನಮನ ಸಲ್ಲಿಸಿದರು. ಬಳಿಕ ಮೃತ ದೇಹವನ್ನು ಕುಟುಂಬಕ್ಕೆ ಹಸ್ತಾಂತರಿಸಲಾಯಿತು.

ಜಿಲ್ಲಾಡಳಿತದಿಂದ ಗೌರವ ಸಲ್ಲಿಸಿದ ಬಳಿಕ ಮೃತ ಯೋಧನ ಕುಟುಂಬಕ್ಕೆ ಶಾಸಕ ಗಣಿಗ ರವಿಕುಮಾರ್, ಡಿಸಿ ಡಾ.ಕುಮಾರ, ಎಸ್ಪಿ ಶೋಭಾರಾಣಿ ಸಾಂತ್ವನ ಹೇಳಿದರು. ಮಧ್ಯಾಹ್ನದ ಬಳಿಕ ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ ನಡೆಯಿತು.

ಪ್ರತಿ ಗ್ರಾಮದಲ್ಲೂ ರಾಯಣ್ಣ ಪ್ರತಿಮೆ ನಿರ್ಮಾಣಕ್ಕೆ ಒತ್ತಾಯ



ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ನಿಖಿಲ್ ಶಂಕರ್ ದೇಣಿಗೆ ನೀಡಿದರು.

ಮಳವಳ್ಳಿ, ಜ.14– ತಾಲೂಕಿನಾದ್ಯಂತ ಪ್ರತಿ ಗ್ರಾಮದಲ್ಲೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಪ್ರತಿಮೆ ನಿರ್ಮಿಸುವಂತೆ ಯೂತ್ ಕಾಂಗ್ರೆಸ್ ರಾಜ್ಯ ಉಪಾಧ್ಯಕ್ಷ ನಿಖಿಲ್ ಶಂಕರ್ ಒತ್ತಾಯಿಸಿದರು.

ತಾಲೂಕಿನ ಚನ್ನಪಿಳ್ಳೆಕೊಪ್ಪಲು ಗೇಟ್ ಬಳಿ ಸಂಗೊಳ್ಳಿ ರಾಯಣ್ಣ ಯುವ ಘರ್ಜನೆ ವತಿಯಿಂದ ನಿರ್ಮಿಸುತ್ತಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವ ಘರ್ಜನೆ ಪುತ್ಥಳಿಗೆ ಒಂದು ಲಕ್ಷ ರೂ. ದೇಣಿಗೆ ನೀಡಿ ಮಾತನಾಡಿದ ಅವರು, ಸಂಗೊಳ್ಳಿ ರಾಯಣ್ಣನವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದು, ನ್ಯಾಯ, ನೀತಿ, ಧರ್ಮ ಮತ್ತು ಸ್ವಾಭಿಮಾನಕ್ಕೆ ಮಾದರಿಯಾಗಿದ್ದಾರೆ ಎಂದರು.

ರಾಜ್ಯಾದ್ಯಂತ ಸಂಗೊಳ್ಳಿ ರಾಯಣ್ಣನವರ ಪ್ರತಿಮೆ ನಿರ್ಮಿಸುವುದರಿಂದ ಅವರ ಆದರ್ಶಗಳನ್ನು ಪಾಲಿಸಲು ಅನುಕೂಲವಾಗುತ್ತದೆ. ಯುವಕರು ಸಂಗೊಳ್ಳಿ ರಾಯಣ್ಣನವರ ಜೀವನ ಚರಿತ್ರೆ ಓದುವ ಮೂಲಕ ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ಈ ವೇಳೆ ಸಂಗೊಳ್ಳಿ ರಾಯಣ್ಣ ಯುವ ಘರ್ಜನೆ ಅಧ್ಯಕ್ಷ ಮಹದೇವ, ಮುಖಂಡರಾದ ಸಿದ್ದೇಗೌಡ, ಡೈರಿ ಮಹದೇವ, ಶಿವಣ್ಣ, ಜೋಗಿ ಮಹದೇವ, ಪ್ರಕಾಶ, ನವೀನ್, ಶಿವಕುಮಾರ, ಮಹೇಶ, ಪ್ರವೀಣ, ಬಸವಣ್ಣ, ಶ್ರೀಕಾಂತ್, ಚನ್ನಯ್ಯ ಇದ್ದರು.

ಚಿರತೆ ಕಳೇಬರ ಪತ್ತೆ: ವಿಷಪ್ರಾಶನ ಶಂಕೆ



ಚಾಮರಾಜನಗರ, ಜ.14– ತಾಲೂಕಿನ ಹೊಮ್ಮ ಹಾಗೂ ಬಸವರಾಜಪುರ ಗ್ರಾಮದ ಹೊರವಲಯದ ಜಮೀನೊಂದರಲ್ಲಿ ಚಿರತೆ ಕಳೇಬರ ಪತ್ತೆಯಾಗಿದ್ದು, ಸಾಕಷ್ಟು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ.

ಚಿರತೆ ಕಳೇಬರ ಗಮನಿಸಿದ ಗ್ರಾಮಸ್ಥರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ವಿಚಾರ ತಿಳಿದು ಸ್ಥಳಕ್ಕಾಗಮಿಸಿದ ಅಧಿಕಾರಿಗಳು ಪರಿಶೀಲಿಸಿದರು.

ಅಂದಾಜು 3 ರಿಂದ 4 ವರ್ಷದ ಚಿರತೆ ಮೂರ‍್ನಾಲ್ಕು ದಿನಗಳ ಹಿಂದೆಯೇ ಮೃತಪಟ್ಟಿದ್ದು ಕೊಳೆತ ಸ್ಥಿತಿಯಲ್ಲಿ ಕಳೇಬರ ಪತ್ತೆಯಾಗಿದೆ. ಇದು ಸ್ವಾಭಾವಿಕವಾಗಿ ಸಾವನ್ನಪ್ಪಿದೆಯೇ ಅಥವಾ ವಿಷಪ್ರಾಶನ ಮಾಡಲಾಗಿದೆಯೇ ಎಂಬುದರ ಬಗ್ಗೆ ಅನುಮಾನ ವ್ಯಕ್ತವಾಗಿದ್ದು, ಅಧಿಕಾರಿಗಳು ಈ ನಿಟ್ಟಿನಲ್ಲಿ ಪರಿಶೀಲನೆ ನಡೆಸುತ್ತಿದ್ದಾರೆ.

ವರ್ಷದಿಂದ ಹಾವಳಿ ನೀಡುತ್ತಿದ್ದ ಚಿರತೆ: ಕಳೆದ ಒಂದು ವರ್ಷದಿಂದ ಹೊಮ್ಮ, ಬಸವರಾಜಪುರ ಗ್ರಾಮ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಈ ಚಿರತೆ ಆಗಾಗ್ಗೆ ಕಾಣಿಸಿಕೊಂಡು ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿತ್ತು. ಇತ್ತೀಚೆಗೆ ಮೇಕೆ ಹಾಗೂ ಹಸುವಿನ ಮೇಲೆ ದಾಳಿ ನಡೆಸಿ ಕೊಂದು ಹಾಕಿ, ಈ ಭಾಗದ ಜನರಲ್ಲಿ ಆತಂಕ ಮೂಡಿಸಿತ್ತು.

ಕರುವಿನ ಕಳೇಬರ ಪತ್ತೆ: ಪ್ರಸ್ತುತ ಚಿರತೆ ಕಳೇಬರ ಸಮೀಪವೇ ಕರುವೊಂದರ ಕಳೇಬರ ಪತ್ತೆಯಾಗಿದ್ದು, ಕರುವಿನ ದೇಹದ ಅರ್ಧದಷ್ಟು ಭಾಗವನ್ನು ಚಿರತೆ ತಿಂದಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಹೀಗಾಗಿ ಅಧಿಕಾರಿಗಳು ಕರುವಿನ ಹಾಗೂ ಚಿರತೆಯ ಕಳೇಬರ ಪರೀಕ್ಷೆಗೆ ಒಳಪಡಿಸಿದ್ದಾರೆ. ಚಿರತೆ ಮರಣೋತ್ತರ ಪರೀಕ್ಷೆ ನಂತರ ನಿಖರ ಕಾರಣ ತಿಳಿದು ಬರಲಿದೆ.

ಬಿಆರ್‌ಟಿಯ ಭೂಮಿ, ಭಾನು ಎಂಬ ಶ್ವಾನಗಳನ್ನು ಕರೆಸಿಕೊಂಡು ಸ್ಥಳ ಮಹಜರು ನಡೆಸಲಾಗುತ್ತಿದ್ದು, ಸ್ಥಳಕ್ಕೆ ಎಸಿಎಫ್ ಮಂಜುನಾಥ್, ಆರ್‌ಎಫ್‌ಓ ಶಶಿಧರ್, ಪಶುವೈದ್ಯ ದರ್ಶನ್ ಸೇರಿದಂತೆ ಬಿಆರ್‌ಟಿ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಜಿಲ್ಲಾದ್ಯಂತ ಕಳೆಗಟ್ಟಿದ ಮಕರ ಸಂಕ್ರಾಂತಿ ಸಂಭ್ರಮ

ಬೆಲೆ ಏರಿಕೆ ನಡುವೆ ಜನತೆ ಹಬ್ಬಕ್ಕೆ ಸಿದ್ಧತೆ



ಚಾಮರಾಜನಗರ, ಜ.14– ಸುಗ್ಗಿ ಹಬ್ಬ ಮಕರ ಸಂಕ್ರಾಂತಿ ಸಂಭ್ರಮ ಜಿಲ್ಲಾದ್ಯಂತ ಕಳೆಗಟ್ಟಿದ್ದು, ದರ ಏರಿಕೆ ನಡುವೆಯೇ ಜನರು ಸಂಕ್ರಾಂತಿ ಹಬ್ಬವನ್ನು ಸಂಭ್ರಮ, ಸಡಗರದಿಂದ ಆಚರಿಸಲು ಸಿದ್ಧತೆ ಕೈಗೊಂಡಿದ್ದಾರೆ.

ಹಿಂದೂಗಳ ಪವಿತ್ರ ಹಾಗೂ ವರ್ಷದ ಮೊದಲ ಹಬ್ಬ ಮಕರ ಸಂಕ್ರಾಂತಿ. ಸೂರ್ಯ ತನ್ನ ಪಥವನ್ನು ಬದಲಿಸುವ ಈ ದಿನವನ್ನು ದೇಶಾದ್ಯಂತ ವಿವಿಧ ಹೆಸರು, ಆಚರಣೆ, ಸಂಪ್ರದಾಯಗಳಲ್ಲಿ ಆಚರಿಸಲಾಗುತ್ತದೆ. ಹೀಗಾಗಿ ಅಗತ್ಯ ವಸ್ತುಗಳ ಖರೀದಿಯಲ್ಲಿ ಜಿಲ್ಲೆಯ ಜನರು ಉತ್ಸಾಹದಿಂದ ತೊಡಗಿದ್ದರು.

ನಗರದ ಚಿಕ್ಕ ಅಂಗಡಿ, ದೊಡ್ಡ ಅಂಗಡಿ ಬೀದಿಯಲ್ಲಿ ಎಳ್ಳು, ಬೆಲ್ಲ, ಕಬ್ಬಿನ ಜಲ್ಲೆ, ಸಕ್ಕರೆ ಅಚ್ಚು ಮಾರಾಟ ನಡೆಯುತ್ತಿದ್ದು, ತಳ್ಳುವ ಗಾಡಿಗಳಲ್ಲೂ ವ್ಯಾಪಾರಿಗಳು ಸಂಕ್ರಾಂತಿ ಹಬ್ಬಕ್ಕೆ ಅಗತ್ಯವಿರುವ ಸಾಮಗ್ರಿ ಮಾರಾಟ ಮಾಡುತ್ತಿದ್ದಾರೆ.

ಮಾರುಕಟ್ಟೆಯಲ್ಲಿ ಅಗತ್ಯ ವಸ್ತುಗಳ ಬೆಲೆ ಹೆಚ್ಚಳವಾಗಿದ್ದು, ನಾಗರಿಕರು ಹಬ್ಬದ ವಸ್ತುಗಳನ್ನು ಖರೀದಿಸಲು ಹೆಚ್ಚು ಉತ್ಸಾಹ ತೋರುತ್ತಿಲ್ಲ. ಸಕ್ಕರೆ ಅಚ್ಚು, ಎಳ್ಳು, ಕಡಲೆ ಹಾಗೂ ಅಚ್ಚು ಬೆಲ್ಲದ ಧಾರಣೆ ಕಳೆದ ವರ್ಷದಷ್ಟೇ ಇದ್ದರೂ ವ್ಯಾಪಾರ ಮಾತ್ರ ಬಹುಪಾಲು ಕಡಿಮೆಯಾಗಿದೆ ಎಂದು ವ್ಯಾಪಾರಿ ಬಸವಣ್ಣ ಬೇಸರ ವ್ಯಕ್ತಪಡಿಸಿದರು.

ಮಾರುಕಟ್ಟೆಯಲ್ಲಿ ಒಂದು ಕೆಜಿ ಸಕ್ಕರೆ ಅಚ್ಚಿಗೆ 100 ರಿಂದ 150 ರೂ., ಒಂದು ಕೆಜಿ ಪ್ಯಾಕೆಟ್ ಎಳ್ಳಿಗೆ 180 ರಿಂದ 240ರೂ., ಕಡಲೆ ಕೆಜಿಗೆ 140ರೂ., ಎಳ್ಳು–ಬೆಲ್ಲ ಮಿಶ್ರಣದ ಕೆಜಿ ಪ್ಯಾಕೆಟ್‌ಗೆ 150ರಿಂದ 200ರೂ., ಪೆಪ್ಪರ್‌ಮೆಂಟ್‌ಗೆ 100 ರೂ., ಅಚ್ಚು ಬೆಲ್ಲ 50ರಿಂದ 10ರೂ. ಮಗೂ ಮಾರಾಟವಾಗುತ್ತಿದೆ.

ಸಂಕ್ರಾಂತಿಯಲ್ಲಿ ಕರಿಕಬ್ಬಿಗೆ ಹೆಚ್ಚಿನ ಬೇಡಿಕೆ ಇದೆ. ಜಿಲ್ಲೆಯಲ್ಲಿ ಈ ಕಬ್ಬು ಬೆಳೆ ಯುವ ಪ್ರಮಾಣ ಕಡಿಮೆ. ಹೀಗಾಗಿ ವ್ಯಾಪಾರಿಗಳು ತಮಿಳುನಾಡಿನಿಂದ ಕರಿಕಬ್ಬು ತರಿಸಿಕೊಂಡು ಮಾರಾಟ ಮಾಡುತ್ತಿದ್ದಾರೆ. ಈ ಕಬ್ಬಿನ ಒಂದು ಜಲ್ಲೆಗೆ 30ರಿಂದ 40ರೂ. ಧಾರಣೆ ಇದೆ. ಸ್ಥಳೀಯವಾಗಿ ಬೆಳೆದಿರುವ ಕಬ್ಬಿಗೆ 20 ರಿಂದ 25 ಬೆಲೆ ಇದೆ.

ಹೂ–ಹಣ್ಣು ದುಬಾರಿ: ಹಬ್ಬದ ಪರಿಣಾಮ ಹೂ, ಹಣ್ಣುಗಳ ಬೆಲೆ ಏರಿಕೆಯಾಗಿದೆ. ಜಿಲ್ಲೆಯಲ್ಲಿ ಸ್ಥಳೀಯವಾಗಿ ಹೂ ಬೆಳೆಯುವ ರೈತರು ಹೊರ ಜಿಲ್ಲೆ ಹಾಗೂ ರಾಜ್ಯಕ್ಕೆ ಮಾರಾಟ ಮಾಡುವುದರಿಂದ ಹಬ್ಬದ ವೇಳೆ ಬೆಲೆ ಏರಿಕೆಯಾಗಿದೆ ಎಂದು ಹೂವಿನ ವ್ಯಾಪಾರಿ ಮಂಜು ತಿಳಿಸಿದರು.


ಪ್ರಸ್ತುತ ಮಾರುಕಟ್ಟೆಯಲ್ಲಿ ಚೆಂಡು ಹೂ 20ರೂ., ಕಾಕಡ 80ರೂ., ಕನಕಾಂಬರ 100ರೂ., ಗುಲಾಬಿ ಒಂದಕ್ಕೆ 10 ರಿಂದ 20ರೂ. ಹಾಗೂ ಹೂವಿನ ಹಾರ 50 ರಿಂದ 300ರೂ.ವರೆಗೂ ಮಾರಾಟವಾಗುತ್ತಿದೆ. ಏಲಕ್ಕಿ ಬಾಳೆಹಣ್ಣು ಕೆ.ಜಿ.ಗೆ 60ರಿಂದ 80ರೂ., ಪಚ್ಚಬಾಳೆ ಹಣ್ಣಿಗೆ 30ರಿಂದ 40ರೂ. ಧಾರಣೆ ಇದೆ. ಈ ಬಾರಿ ಅಗತ್ಯ ವಸ್ತುಗಳ ಬೆಲೆ ಏರಿಕೆಯ ನಡುವೆಯೂ ನಾಗರಿಕರು ಹಬ್ಬದ ಸಾಮಗ್ರಿಗಳನ್ನು ಕೊಳ್ಳುವ ಮೂಲಕ ಸುಗ್ಗಿ ಹಬ್ಬವನ್ನು ಸ್ವಾಗತಿಸುವ ಸಂಭ್ರಮಕ್ಕೆ ಅಣಿಯಾಗುತ್ತಿರುವುದು ಕಂಡು ಬಂದಿದೆ.

ಅರ್ಜಿ ಆಹ್ವಾನ

ಚಾಮರಾಜನಗರ, ಜ.14– ಗುಂಡ್ಲುಪೇಟೆಯ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ ಹಾಗೂ ಕೊಳ್ಳೇಗಾಲದ ಮುರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ 2026–27ನೇ ಶೈಕ್ಷಣಿಕ ಸಾಲಿನಲ್ಲಿ 6ನೇ ತರಗತಿ ಪ್ರವೇಶಕ್ಕಾಗಿ ವಿದ್ಯಾರ್ಥಿ ಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ, ಪ.ಜಾತಿ, ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಅರ್ಹ ವಿದ್ಯಾರ್ಥಿಗಳು ಸೇವಾ ಸಿಂಧು ಪೋರ್ಟಲ್ https://sevasindhuservices.karnataka.gov.in ಮೂಲಕ ಫೆ.10ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದ್ದಾರೆ.

ಮೂಲಭೂತ ಸೌಕರ್ಯ ಕಲ್ಪಿಸುವುದು ನಮ್ಮ ಹೊಣೆ

ಪುರಸಭಾ ಮುಖ್ಯಾಧಿಕಾರಿ ಎಸ್.ಶರವಣ



ಕಾರ್ಯಕ್ರಮದಲ್ಲಿ ಪುರಸಭಾ ಮುಖ್ಯಾಧಿಕಾರಿ ಎಸ್.ಶರವಣ ಮಾತನಾಡಿದರು.

ಗುಂಡ್ಲುಪೇಟೆ, ಜ.14(ಸೋಮ್. ಜಿ)– ಮೂಲಭೂತ ಸೌಕರ್ಯ ಕಲ್ಪಿಸುವುದು ನಮ್ಮ ಹೊಣೆ ಎಂದು ಪುರಸಭಾ ಮುಖ್ಯಾಧಿಕಾರಿ ಎಸ್.ಶರವಣ ತಿಳಿಸಿದರು.

ಪಟ್ಟಣದ ಮಹದೇವ ಪ್ರಸಾದ್ ನಗರದಲ್ಲಿ ಆಯೋಜಿಸಿದ್ದ ಕಾಫಿ ವಿತ್ ಚೀಫ್ ಆಫೀಸರ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂತಹ ವಿನೂತನ ಕಾರ್ಯಕ್ರಮವನ್ನು ಪುರಸಭೆ ಹಮ್ಮಿಕೊಂಡಿದ್ದು, ಪಟ್ಟಣ ಜನತೆಯ ಹಿತ ಕಾಯುವುದು ಹಾಗೂ ಉತ್ತಮ ಮೂಲ ಸೌಕರ್ಯ ಕಲ್ಪಿಸುವುದು ನಮ್ಮ ಹೊಣೆಗಾರಿಕೆಯಾಗಿದೆ. ಇದನ್ನು ಅರಿತು ಉತ್ತಮ ರೀತಿ ಪುರಸಭೆ ನಿಮ್ಮೊಂದಿಗೆ ಸ್ಪಂದಿಸಲಿದೆ. ಪಟ್ಟಣದ ಜನತೆಯೂ ಸಹ ಇದನ್ನರಿತು ಒಣ ಕಸ–ಹಸಿ ಕಸ ವಿಂಗಡನೆ ಮಾಡಿ ಕೊಡುವುದರೊಂದಿಗೆ ಹಾಗೂ ಪುರಸಭೆ ನಿಯಮಗಳನ್ನು ಪಾಲಿಸುವುದರೊಂದಿಗೆ ಸಹಕಾರ ನೀಡಬೇಕೆಂದು ಕೋರಿದರು.

ಮಹದೇವ ಪ್ರಸಾದ್ ನಗರದ ನಿವಾಸಿಗಳಿಂದ ಬೀದಿ ದೀಪ ಸ್ವಚ್ಛತೆ, ರಸ್ತೆ ಸೇರಿದಂತೆ ಹಲವು ಸಮಸ್ಯೆಗಳಿಗೆ ಸಂಬಂಧಪಟ್ಟ 40ಕ್ಕೂ ಹೆಚ್ಚು ದೂರುಗಳು ಬಂದವು. ಇವುಗಳನ್ನು ಶೀಘ್ರ ಬಗೆಹರಿಸಲಾಗುವುದು ಹಾಗೂ ಅನುದಾನವನ್ನು ಹೊಂದಿಸಿಕೊಂಡು ರಸ್ತೆ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗುವುದು ಎಂದರು.

ಈ ವೇಳೆ ಮಾಜಿ ಪುರಸಭಾ ಸದಸ್ಯ ರಾಜಗೋಪಾಲ್, ಪುರಸಭೆ ಇಂಜಿನಿಯರ್ ಮಂಜುನಾಥ್ ಮತ್ತು ಸಿಬ್ಬಂದಿ ವರ್ಗ ಹಾಜರಿದ್ದರು.

ಬಿಳಿಗಿರಿ ರಂಗನಾಥಸ್ವಾಮಿ ರಥೋತ್ಸವ ಹಿನ್ನೆಲೆ

ದ್ವಿಚಕ್ರ ವಾಹನ ಸಂಚಾರ ನಿರ್ಬಂಧಿಸಿ ಡಿಸಿ ಆದೇಶ

ಯಳಂದೂರು, ಜ.14– ತಾಲೂಕಿನ ಬಿಳಿಗಿರಿರಂಗನಬೆಟ್ಟದಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ಬಿಳಿಗಿರಿರಂಗನಾಥಸ್ವಾಮಿ ರಥೋತ್ಸವ ಹಾಗೂ ಚಿಕ್ಕ ಜಾತ್ರಾ ಮಹೋತ್ಸವ ನಡೆಯುವ ಹಿನ್ನಲೆಯಲ್ಲಿ ಬೆಟ್ಟಕ್ಕೆ ತಾಲೂಕಿನ ಗುಂಬಳ್ಳಿ ಮತ್ತು ಚಾಮರಾಜನಗರ ತಾಲೂಕಿನ ಹೊಂಡರಬಾಳು ಅರಣ್ಯ ಇಲಾಖೆ ಚೆಕ್‌ಪೋಸ್ಟ್‌ಗಳ ಮೂಲಕ ಸಾರ್ವಜನಿಕರು ದ್ವಿಚಕ್ರ ವಾಹನಗಳಲ್ಲಿ ತೆರಳುವುದನ್ನು ಜ.15 ರಿಂದ 16 ರವರೆಗೆ ತಾತ್ಕಾಲಿಕವಾಗಿ ನಿರ್ಬಂಧಿಸಿ ಜಿಲ್ಲಾಧಿಕಾರಿ ಶ್ರೀರೂಪ ಆದೇಶ ಹೊರಡಿಸಿದ್ದಾರೆ.

ಜಾತ್ರೆಗೆ ಲಕ್ಷಾಂತರ ಭಕ್ತರು ಆಗಮಿಸುವುದರಿಂದ ವಾಹನ ದಟ್ಟಣೆ ಹೆಚ್ಚಾಗಿ ಸಾರ್ವಜನಿಕ ಸಾರಿಗೆ ಸಂಚಾರಕ್ಕೆ ಅಡಚಣೆಯಾಗುವುದರಿಂದ ದ್ವಿಚಕ್ರ ವಾಹನ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ.

ಬಹುರೂಪಿ ರಂಗೋತ್ಸವದಲ್ಲಿ ರಂಗ ಪ್ರೇಮಿಗಳ ಕಲರವ ಮುಂದುವರಿಕೆ

ನಾಟಕ, ಚಿತ್ರೋತ್ಸವ, ಮಳಿಗೆಗಳ ನಾನಾ ವಸ್ತುಗಳ ಖರೀದಿ ಸಡಗರ



ಬೆಂಕಿ ಹಿಡಿದು ಸಾಹಸ ಪ್ರದರ್ಶನ ಮಾಡಿದ ಕಲಾವಿದೆ

ಮೈಸೂರು, ಜ.14(ವಿವಿಹೆಚ್)– ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಮೂರನೇ ದಿನವಾದ ಬುಧವಾರವೂ ರಂಗಾಸಕ್ತರಿಂದ ಕಳೆಗಟ್ಟಿತ್ತು. ರಂಗಾಯಣದ ಅಂಗಳದಲ್ಲಿ ಜನಪದ ಉತ್ಸವ ಎಲ್ಲರನ್ನು ಸೆಳೆಯುವಲ್ಲಿ ಯಶಸ್ವಿಯಾಯಿತು. ಸಂಜೆ ತಂಡೋಪತಂಡವಾಗಿ ರಂಗಾಯಣಕ್ಕೆ ಧಾವಿಸಿದ ಯುವ ಮನಸ್ಸುಗಳು, ಹಿರಿಯರು, ಕಲಾವಿದರು ವನರಂಗ, ಭೂಮಿ ಗೀತಾ, ಕಿರುರಂಗ ಮಂದಿರ, ಕಲಾಮಂದಿರದಲ್ಲಿ ನಾಟಕಗಳನ್ನು ವೀಕ್ಷಿಸಿ, ಹರ್ಷಚಿತ್ತರಾದರು.

ಪಟ್ಟಿಗೆ ಪಟ್ಟು, ಸವಾಲಿಗೆ ಸವಾಲ್ ಎಂದು ಕೇರಳದ ಸಮರ ಕಲೆಯಾದ 'ಕಳರಿಪಯಟ್ಟು' ನೋಡುಗರ ಎದೆ ಝಲ್ಲೆನ್ನುವಂತೆ ಮಾಡಿತು.

ಕಿಂದರಜೋಗಿ ಆವರಣದಲ್ಲಿ ನಡೆದ ಜನಪದ ಉತ್ಸವ ಮಹಿಳಾ ಮಣಿಗಳ ಸಾಹಸ ಪ್ರದರ್ಶನ ಹಾಗೂ ಸಮರ ಕಲೆಯು ನೋಡುಗರ ಪುಳಕಿತಗೊಳಿಸಿದವು. ಏಟಿಗೆ ಎದಿರೇಟು ನೀಡುತ್ತಾ, ಕತ್ತಿ ಹಿಡಿದು ಎದುರಾಳಿಯ ಮಣಿಸುವುದು, ಚೂಪಾದ ಬರ್ಜಿ, ದೊಣ್ಣೆ ವರಸೆ, ಮುಷ್ಟಿಯುದ್ಧ ಮಾಡುತ್ತಾ ಕಳರಿಯಪಟ್ಟು ವಿವಿಧ ಭಂಗಿ ಪ್ರದರ್ಶನ ಮಾಡುವ ಮೂಲಕ ಜಾನಪದ ಉತ್ಸವಕ್ಕೆ ಮತ್ತಷ್ಟು ರಂಗು ನೀಡಿದರು.

ಡಾ.ವೇಣುಗೋಪಾಲ್ ಮಾರ್ಗದರ್ಶನದಲ್ಲಿ ಅನಾವರಣಗೊಳಿಸಿದ ಕೇರಳದ ಕಲಾವಿದರು, ಯೋಗಾಸನ, ಸಮರ ಕಲೆ ಪ್ರದರ್ಶನ ಜೊತೆಗೆ ಬೆಂಕಿ ಹಿಡಿದು ಸಾಹಸ ಪ್ರದರ್ಶನ ಮಾಡಿ ಪ್ರೇಕ್ಷಕರ ದಂಗುಬಡಿಸಿದರು. ಈ ಸಾಹಸ ಪ್ರದರ್ಶನದಲ್ಲಿ ಭಾಗವಹಿಸಿದ ಮಹಿಳಾ ಪಟುಗಳು ಎಲ್ಲರ ಹುಬ್ಬೇರುವಂತೆ ಮಾಡಿದರು. ಅವರ ಅಮೋಘ ಪ್ರದರ್ಶನಕ್ಕೆ ಮನಸೋತ ಮಹಿಳಾ ಪ್ರೇಕ್ಷಕರು ಶಿಳ್ಳೆ ಚಪ್ಪಾಳೆಗಳ ಮೂಲಕ ಹುರಿದುಂಬಿಸಿದರು.

ಇದಾದ ಬಳಿಕ ಚಾಮರಾಜನಗರದ ಬಸವರಾಜು ಮತ್ತು ತಂಡದಿಂದ ಚಾಮರಾಜನಗರದ ಬಿಳಿಗಿರಿರಂಗನ ಬೆಟ್ಟದ ಹಾಡಿಯ ಜನರ 'ಗೋರುಕನ ನೃತ್ಯ' ಪ್ರದರ್ಶಿಸಿ ಸೈ ಎನಿಸಿಕೊಂಡರು.

ಇದರೊಂದಿಗೆ ವನರಂಗದಲ್ಲಿ ಮುಂಬೈನ ತಮಾಷ ಥಿಯೇಟರ್ ತಂಡದಿಂದ ಹಿಂದಿ ಮತ್ತು ಇಂಗ್ಲಿಷ್ ಭಾಷೆಯ 'ಸೇಮ್ ಸೇಮ್ ಬಟ್ ಡಿಫರೆಂಟ್', ಕಿರುರಂಗ ಮಂದಿರದಲ್ಲಿ ಚಾಮರಾಜನಗರದ ರಂಗವಾಹಿನಿ ತಂಡದಿಂದ ಕನ್ನಡದ 'ಬೆಲ್ಲದ ದೋಣಿ', ಕಲಾಮಂದಿರದಲ್ಲಿ ತೆಕ್ಕಟ್ಟೆ ಧಮನ ತಂಡದಿಂದ 'ಸೂರ್ಯ ಚಂದ್ರ', ಭೂಮಿಗೀತದಲ್ಲಿ ಮಣಿಪುರ್‌ನ ಕಲಾಕ್ಷೇತ್ರ ತಂಡದಿಂದ ಮಣಿಪುರಿ ಭಾಷೆಯ 'ಪಿ ಥದೊಯ್' ನಾಟಕವನ್ನು ಪ್ರಸ್ತುತ ಪಡಿಸಲಾಯಿತು.



ಕಳರಿಪಯಟ್ಟು ಕಲೆ ಪ್ರದರ್ಶನ ಮಾಡಿದ ಕೇರಳದ ಕಲಾವಿದರು.

ಬಹುರೂಪಿ ಚಲನಚಿತ್ರೋತ್ಸವದಲ್ಲಿ ರಂಗಾಯಣದ ಶ್ರೀರಂಗ ರಂಗಮಂದಿರದಲ್ಲಿ ಸಾಮಾಜಿಕ ಮೌಲ್ಯ ಬಿತ್ತುವ ಚಿತ್ರಗಳು ಜನಮನಗಳಿಸಿದವು. ಹಿಂದಿ ಭಾಷೆಯ 'ಅಭಿವನ್ ಪಾಂಡೆ', 'ಜೈ ಭೀಮ್ ಕಾಮ್ರೇಡ್–2', ಕನ್ನಡದ 'ಕಾಳ್ಜಿಡಿ', ಚಿತ್ರಗಳು ಪ್ರದರ್ಶನಗೊಳ್ಳುವ ಮೂಲಕ ಎಲ್ಲರ ಮನಗೆದ್ದವು.

ಬಹುರೂಪಿಗೆ ಬಂದ ಮಕ್ಕಳು: ಬುಧವಾರ ಬಹುರೂಪಿ ರಂಗಾಯಣಕ್ಕೆ ಮೈಸೂರಿನ ಪಡುವಾರಹಳ್ಳಿಯ ವಿನಾಯಕ ನಗರದ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳು ಭೇಟಿ ಕೊಟ್ಟು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜೀವನ ಪಾಠ ಕಲಿತರು. ರಂಗ ಭಾವಡಿ, ಛಾಯಚಿತ್ರ ಪ್ರದರ್ಶನ, ಆಹಾರ, ಕರಕುಶಲ ಮಳಿಗೆಗಳಿಗೆ ಭೇಟಿ ನೀಡಿ ಆನಂದಿಸಿದರು.

ಬ್ರಾಂಡೆಡ್ ಎಕ್ಸ್‌ಪೋ, ಶೂಸ್ ಮಾರಾಟ ವಿಸ್ತರಣೆ



ಮೈಸೂರು: ಸಂಕ್ರಾಂತಿ ಹಬ್ಬದ ಪ್ರಯುಕ್ತ ಮೈಸೂರಿನ ಕುವೆಂಪುನಗರದ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಮತ್ತು ಫುಟ್‌ವೇರ್‌ಗಳ ಮಾರಾಟ ಆಯೋಜಿಸಲಾಗಿದ್ದು, ಭಾರೀ ರಿಯಾಯಿತಿ ದರದಲ್ಲಿ ಪುರುಷರ, ಮಹಿಳೆಯರ ಬ್ರಾಂಡೆಡ್ ಉಡುಪುಗಳು, ಶೂಗಳು, ಪಾದರಕ್ಷೆಗಳು ದೊರೆಯುತ್ತವೆ. ಅಲ್ಲದೇ ಗೃಹೋಪಯೋಗಿ ವಸ್ತುಗಳು ಲಭ್ಯವಿದ್ದು, ಹೆಚ್ಚಿನ ಜನಸಂದಣಿ ಹಿನ್ನೆಲೆಯಲ್ಲಿ ಮಾರಾಟವನ್ನು ಜ.20 ರವರೆಗೆ ವಿಸ್ತರಿಸಲಾಗಿದೆ.

ವಿವಿಧ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ

ಮೈಸೂರು,ಜ.14(ಪಿಎಂ)–ಸ್ವಚ್ಛ ಸರ್ವೇಕ್ಷಣ್ 2025–26ರ ಆರೋಗ್ಯಕರ ಸ್ಪರ್ಧೆ ಹಾಗೂ ನಾಗರಿಕರ ಪಾಲ್ಗೊಳ್ಳುವಿಕೆಗಾಗಿ ಮೈಸೂರು ಮಹಾನಗರ ಪಾಲಿಕೆಯು ನಗರಾದ್ಯಂತ ಸಮಗ್ರ ಪಾಲುದಾರರ ಸ್ವಚ್ಛತಾ ಅಭಿಯಾನ ನಡೆಸಲು ಮುಂದಾಗಿದೆ.

ಪಾಲಿಕೆಯಲ್ಲಿ ಇತ್ತೀಚೆಗೆ ನಡೆದ ಪಾಲುದಾರರ ಸಭೆಯಲ್ಲಿ ವಿವಿಧ ವಲಯಗಳಿಗೆ ಸಂಬಂಧಿಸಿದಂತೆ ಸ್ವಚ್ಛ ಅಭಿಯಾನದ ಅಧಿಕೃತ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಲಾಯಿತು. 'ಸ್ವಚ್ಛ ಮೈಸೂರು, ನನ್ನಿಂದಲೇ ಆರಂಭ' ಎಂಬ ಘೋಷವಾಕ್ಯದೊಂದಿಗೆ ಸ್ವಚ್ಛತಾ ಅಭಿಯಾನಗಳಿಗೆ ಚಾಲನೆ ನೀಡಲಾಯಿತು. ಆ ಮೂಲಕ ಸ್ವಚ್ಛ ಇಂಟರ್ನ್‌ಶಿಪ್, ಸ್ವಚ್ಛ ಕ್ವಿಜ್ ಮತ್ತು ಸ್ವಚ್ಛತೆ ಕುರಿತ ಚರ್ಚೆ, ಸ್ವಚ್ಛ ಶಾಲೆ, ಸ್ವಚ್ಛ ಮಾರುಕಟ್ಟೆ ಸಂಘ, ಸ್ವಚ್ಛ ಸರ್ಕಾರಿ ಕಚೇರಿ, ಸ್ವಚ್ಛ ಹೋಟೆಲ್, ಸ್ವಚ್ಛ ವಾಣಿಜ್ಯ ಮಳಿಗೆ ವಲಯ, ಸ್ವಚ್ಛ ಆಟೋ–ಟಾಂಗಾ ನಿಲ್ದಾಣ, ಸ್ವಚ್ಛ ಆಸ್ಪತ್ರೆ, ಸ್ವಚ್ಛ ಆರ್‌ಡಬ್ಲ್ಯೂಎ, ಸ್ವಚ್ಛ ಸಾರಿಗೆ ಕೇಂದ್ರ ಎಂಬ ಅಭಿಯಾನಗಳನ್ನು ಅಧಿಕೃತವಾಗಿ ಪ್ರಾರಂಭಿಸಲಾಯಿತು.



ಸಭೆಯಲ್ಲಿ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ವಿವಿಧ ಕ್ಷೇತ್ರದ ಪಾಲುದಾರರು ಪಾಲ್ಗೊಂಡಿದ್ದರು.

ಡೇರಿಲ್ ಮಿಚೆಲ್ ಶತಕ; ಭಾರತ ವಿರುದ್ಧ ಕಿವೀಸ್‌ಗೆ 7 ವಿಕೆಟ್ ಜಯ



ಶತಕದ ಸಂಭ್ರಮದಲ್ಲಿ ಕಿವೀಸ್ ಬ್ಯಾಟರ್ ಡೆರಿಲ್ ಮಿಚೆಲ್

ರಾಜ್‌ಕೋಟ್, ಜ.14(ವಿವಿಹೆಚ್)– ಕಿವೀಸ್ ಆಲ್‌ರೌಂಡರ್ ಡೇರಿಯಲ್ ಮಿಚೆಲ್ ಅವರ ಅಜೇಯ ಶತಕದಾಟದ ಬಲದಿಂದ ಪ್ರವಾಸಿ ನ್ಯೂಜಿಲೆಂಡ್, ಅತಿಥೇಯ ಭಾರತ ತಂಡವನ್ನು 7 ವಿಕೆಟ್‌ಗಳಿಂದ ಮಣಿಸಿತು. ಆ ಮೂಲಕ ಮೂರು ಏಕದಿನ ಸರಣಿಯಲ್ಲಿ (1–1) ಸಮಬಲ ಸಾಧಿಸಿದೆ.

ಇಲ್ಲಿನ ನಿರಂಜನ್ ಶಾ ಕ್ರೀಡಾಂಗಣದಲ್ಲಿ ನಡೆದ ಭಾರತ ಮತ್ತು ನ್ಯೂಜಿಲೆಂಡ್ ನಡುವಣ 2ನೇ ಏಕದಿನ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಭಾರತ ಕೆ.ಎಲ್.ರಾಹುಲ್ ಶತಕದ ಬಲದಿಂದ ನಿಗದಿತ 50 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 284 ರನ್ ಗಳಿಸಿತು. ಈ ಮೊತ್ತ ಬೆನ್ನತ್ತಿದ ಕಿವೀಸ್ 47.3 ಓವರ್‌ಗಳಲ್ಲಿ ಕೇವಲ 3 ವಿಕೆಟ್ ಕಳೆದುಕೊಂಡು 286 ರನ್ ಗಳಿಸಿ ಗೆದ್ದು ಬೀಗಿತು.

ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡಕ್ಕೆ ನಾಯಕ ಶುಭ್‌ಮನ್ ಗಿಲ್ ಹಾಗೂ ಕನ್ನಡಿಗ ಕೆ.ಎಲ್.ರಾಹುಲ್ ಆಸರೆಯಾದರು. ಈ ಇಬ್ಬರ ಹೊರತಾಗಿ ಉಳಿದವರೆಲ್ಲರೂ ವಿಫಲರಾಗಿದ್ದು, ತಂಡದ ಬ್ಯಾಟಿಂಗ್ ವೈಫಲ್ಯಕ್ಕೆ ಕಾರಣವಾಯಿತು.

ಕೆ.ಎಲ್. ರಾಹುಲ್ 92 ಎಸೆತಗಳಲ್ಲಿ 11 ಬೌಂಡರಿ ಮತ್ತು ಒಂದು ಸಿಕ್ಸರ್ ಸಹಿತ ಅಜೇಯ 112 ರನ್ ಬಾರಿಸಿದರು. ನಾಯಕ ಗಿಲ್ ಕೂಡ 56 ರನ್ ಬಾರಿಸಿದ್ದೆ ಅಧಿಕ ಮೊತ್ತವಾಗಿತ್ತು. ಉಳಿದಂತೆ ರೋಹಿತ್ ಶರ್ಮಾ 24, ವಿರಾಟ್ ಕೊಹ್ಲಿ 23, ನಿತೀಶ್ ಕುಮಾರ್ ರೆಡ್ಡಿ 20, ಶ್ರೇಯಸ್ ಅಯ್ಯರ್ 8 ರವೀಂದ್ರ ಜಡೇಜಾ 27, ಹರ್ಷಿತ್ ರಾಣಾ 2, ಸಿರಾಜ್ ಅಜೇಯ 2 ರನ್ ಗಳಿಸಿದರು. ನ್ಯೂಜಿಲೆಂಡ್ ಪರ, ಕ್ರಿಸ್ ಕ್ಲಾರ್ಕ್ ಪ್ರಮುಖ 3 ವಿಕೆಟ್ ಪಡೆದರೆ, ಕೈಲ್ ಜೇಮಿಸನ್, ಜಕಾರಿ ಫೋಕ್ಸ್, ಜೇಡನ್ ಲಿನಾಕ್ಸ್ ಮತ್ತು ಮೈಕೆಲ್ ಬ್ರೇಸ್‌ವೆಲ್ ತಲಾ ಒಂದೊಂದು ವಿಕೆಟ್ ಕಿತ್ತು ಸಂಭ್ರಮಿಸಿದರು.

ಭಾರತ ನೀಡಿದ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಕಿವೀಸ್‌ಗೆ ಡೇರಿಲ್ ಮಿಚೆಲ್ ಹಾಗೂ ವಿಲ್ ಯಂಗ್ ಆಸರೆಯಾದರು. ಈ ಜೋಡಿ 152 ಎಸೆತಗಳಲ್ಲಿ 162 ರನ್‌ಗಳ ಜೊತೆಯಾಟ ನೀಡಿ ಭಾರತಕ್ಕೆ ಆಘಾತ ನೀಡಿದರು. 98 ಎಸೆತಗಳಲ್ಲಿ 87 ರನ್ ಗಳಿಸಿ ವಿಲ್ ಯಂಗ್ ಔಟಾದರೆ, ಅಜೇಯರಾಗಿ ಉಳಿದು ಶತಕ ಬಾರಿಸಿದ ಡೇರಿಲ್ ಮಿಚೆಲ್ 117 ಎಸೆತಗಳಲ್ಲಿ 11 ಬೌಂಡರಿ, 2 ಸಿಕ್ಸರ್ ಸಹಿತ 131 ರನ್ ಬಾರಿಸಿ ತಂಡಕ್ಕೆ ಗೆಲುವು ತಂದುಕೊಟ್ಟರು. ಇವರಿಗೆ ಸಾಥ್ ನೀಡಿದ ಗ್ಲೇನ್ ಫಿಲಿಪ್ಸ್ 25 ಎಸೆತಗಳಲ್ಲಿ 32 ರನ್ ಗಳಿಸಿ ಅಜೇಯರಾಗಿ ಉಳಿದರು.

ಟೀಂ ಇಂಡಿಯಾ ಪರ ಹರ್ಷಿತ್ ರಾಣಾ, ಪ್ರಸಿದ್ಧ್ ಕೃಷ್ಣ ಹಾಗೂ ಕುಲ್ದೀಪ್ ಯಾದವ್ ತಲಾ ಒಂದೊಂದು ವಿಕೆಟ್ ಪಡೆದರು.

ಉತ್ತಮ ಬ್ಯಾಟಿಂಗ್ ಪ್ರದರ್ಶನ ತೋರಿದ ಡೇರಿಲ್ ಮಿಚೆಲ್ ಪಂದ್ಯಶ್ರೇಷ್ಠ ಪಡೆದರು.

ಚುಂಚನಕಟ್ಟೆಯಲ್ಲಿ ವೈಭವದ ಸೀತಾ ಕಲ್ಯಾಣ




ಚುಂಚನಕಟ್ಟೆ: ಜನವರಿ 16ರಂದು ನಡೆಯುವ ಇತಿಹಾಸ ಪ್ರಸಿದ್ಧ ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಕೋದಂಡ ರಾಮನ ಬ್ರಹ್ಮ ರಥೋತ್ಸವದ ಅಂಗವಾಗಿ ಚುಂಚನಕಟ್ಟೆಯಲ್ಲಿ ಮಂಗಳವಾರ ರಾತ್ರಿ ಸೀತಾ ಕಲ್ಯಾಣ ವೈಭವದಿಂದ ನಡೆಯಿತು.

ಶ್ರೀರಾಮ ದೇವಾಲಯದ ಹೊರ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪುರೋಹಿತರು ಮತ್ತು ಅರ್ಚಕರ ಮಂತ್ರ ಘೋಷಗಳೊಂದಿಗೆ ಸೀತಾ ಕಲ್ಯಾಣ ಮಹೋತ್ಸವವನ್ನು ಕಣ್ಣುಂಬಿಕೊಂಡ ನೆರೆದಿದ್ದ ಸಾವಿರಾರು ಭಕ್ತರು ಪುಳಕಗೊಂಡರು.

ಸಂಜೆ 7ರಿಂದಲೇ ಆರಂಭಗೊಂಡ ಮದುವೆ ಕಾರ್ಯಕ್ರಮಗಳು ಸಾರ್ವಜನಿಕ ಮದುವೆಗಳು ನಡೆಯುವಂತೆ ದೇವಾಯಲದಿಂದ ಶ್ರೀ ರಾಮದೇವರನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಕಾಶಿಯಾತ್ರೆಯಿಂದ ಕರೆತಂದು ಮನದುಂಬಿಸಿಕೊಳ್ಳುವ ಕಾರ್ಯವನ್ನು ಶಾಸಕ ಡಿ.ರವಿಶಂಕರ್, ಪತ್ನಿ ಸುನಿತಾ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮೇಗೌಡ, ಪತ್ನಿ ಈರಮ್ಮ ಕುಟುಂಬಸ್ಥರು ನಡೆಸಿಕೊಟ್ಟರು

ನಂತರ ದೇವಾಲಯದ ಹೊರ ಅವರಣಲ್ಲಿ ಹಾಕಲಾಗಿದ್ದ ದೀಪಾಲಂಕಾರದಿಂದ ಕಂಗೊಳಿಸುತ್ತಿದ್ದ ಬೃಹತ್ ಮದುವೆ ಮಂಟಪಕ್ಕೆ ಕರೆತಂದು ಪೂಜಾ ವಿಧಿ ವಿಧಿವಿಧಾನಗಳನ್ನು ಮಂತ್ರಾಕ್ಷತೆಯ ಮೂಲಕ ಪ್ರಧಾನ ಅರ್ಚಕರು ತಮ್ಮ ತಂಡದೊಂದಿಗೆ ಮಂತ್ರ ಪಠಣಗಳ ಮೂಲಕ ಕಲ್ಯಾಣೋತ್ಸವಕ್ಕೆ ಚಾಲನೆ ನೀಡಿದರು. ದೇವಾಲಯದ ಆಗಮಿಕರಾದ ವಿಜಯ್ ಕುಮಾರ್ ಅವರ ನೇತೃತದ ತಂಡ ಸುಮಾರು 2 ಗಂಟೆ ಕಾಲ ವಿಶೇಷ ಪೂಜೆಗಳನ್ನು ಸಲ್ಲಿಸಿ ವಧುವರರಿಗೆ ಹಾರ ಬದಲಿಸಿ ನಂತರ ಸೀತಾ ಮಾತೆಗೆ ತಾಳಿ ಹಾಕಿ ಸೀತಾ ಕಲ್ಯಾಣವನ್ನು ನೇರವೇರಿಸಿದಾಗ ನೆರೆದಿದ್ದ ಭಕ್ತರು ಚಪ್ಪಾಳೆ ತಟ್ಟಿ ಜಯಘೋಷ ಮೊಳಗಿಸಿದರು.

ಸುತ್ತೂರು ಜಾತ್ರೆ ಪ್ರಚಾರ ರಥಕ್ಕೆ ಸ್ವಾಗತ



ಮಲ್ಲನ ಮೂಲೆ ಕಂಬಳೀಶ್ವರ ಮಠದಲ್ಲಿ ಸುತ್ತೂರು ಜಾತ್ರಾ ಮಹೋತ್ಸವದ ಪ್ರಚಾರ ರಥವನ್ನು ಸ್ವಾಗತಿಸಲಾಯಿತು.

ನಂಜನಗೂಡು: ಸುತ್ತೂರು ಮಠವು ಧಾರ್ಮಿಕ, ಶೈಕ್ಷಣಿಕ, ಆರೋಗ್ಯ ಕ್ಷೇತ್ರಗಳಲ್ಲಿ ಸರ್ಕಾರಕ್ಕೆ ಸಮನಾಗಿ ಸೇವೆ ಸಲ್ಲಿಸುವುದರ ಜೊತೆಗೆ ಜಾತ್ರಾ ಮಹೋತ್ಸವದ ಮೂಲಕ ಜನರಲ್ಲಿ ಜನಜಾಗೃತಿ ಮೂಡಿಸುವ ಯಾತ್ರೆಯಾಗಿದೆ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಎಸ್.ಎಂ. ಕೆಂಪಣ್ಣ ಹೇಳಿದರು.

ತಾಲೂಕಿನ ಮಲ್ಲನ ಮೂಲೆ ಕಂಬಳೀಶ್ವರ ಮಠದಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರಿ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಪ್ರಚಾರ ರಥವನ್ನು ಸ್ವಾಗತಿಸಿ ಮಾತನಾಡಿದರು.

ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವ ಯೋಗಿಗಳವರ ಜಾತ್ರಾ ಮಹೋತ್ಸವದ ಮೂಲಕ ಕೃಷಿ ಕ್ಷೇತ್ರದ ಆಧುನಿಕ ತಂತ್ರಜ್ಞಾನದ ಆವಿಷ್ಕಾರದ ಬಗ್ಗೆ ರೈತರಿಗೆ ಮಾರ್ಗದರ್ಶನ ಮತ್ತು ದೇಶಿಯ ಕಲೆಗಳಿಗೆ ಉತ್ತೇಜನ, ಆರೋಗ್ಯ ತಪಾಸಣೆ ಶಿಬಿರ, ವಸ್ತು ಪ್ರದರ್ಶನದ ಮೂಲಕ ಜನರಲ್ಲಿ ಆರೋಗ್ಯದ ಅರಿವು ಹಾಗೂ ದೇಶೀಯ ದನಗಳ ತಳಿಯನ್ನು ಸಂರಕ್ಷಿಸುವ ಕೆಲಸ ನಡೆಯಲಿದೆ. ಆದ್ದರಿಂದ ಈ ಬಾರಿಯ ಜಾತ್ರಾ ಮಹೋತ್ಸವಕ್ಕೆ ನಂಜನಗೂಡು ತಾಲೂಕಿನ ಎಲ್ಲಾ ಸಮುದಾಯದ ಜನರು ಭಾಗವಹಿಸಿ ಜಾತ್ರಾ ಮಹೋತ್ಸವವನ್ನು ಯಶಸ್ವಿಗೊಳಿಸಬೇಕು ಎಂದು ಅವರು ಮನವಿ ಮಾಡಿದರು.

ಪ್ರಚಾರ ರಥಕ್ಕೆ ಮಲ್ಲನ ಮೂಲೆ ಪೀಠಾಧ್ಯಕ್ಷ ಇಮ್ಮಡಿ ಸಿದ್ದಲಿಂಗ ಸ್ವಾಮಿ ಈಡುಗಾಯಿ ಹೊಡೆಯುವ ಮೂಲಕ ಚಾಲನೆ ನೀಡಿದರು. ಇದೇ ಸಂದರ್ಭದಲ್ಲಿ ವೀರಶೈವ ಮಹಾಸಭಾದ ಖಜಾಂಚಿ ಮಡಹಳ್ಳಿ ನಟರಾಜು, ಯುವ ಅಧ್ಯಕ್ಷ ಮಲ್ಕುಂಡಿ ಮಹಾದೇವಸ್ವಾಮಿ, ದೇಬೂರು ಅಶೋಕ್, ನಂಜುಂಡಸ್ವಾಮಿ ಬೊಮ್ಮಾಯಿ, ದಳಪತಿ ಮಹದೇವಪ್ಪ, ಸುಬ್ಬಣ್ಣ, ಗಂಗಾಧರ್, ಬಸವರಾಜು, ಸೋಮಶೇಖರ್, ಮಹೇಶ್, ರಾಜು, ಮಹಿಳಾ ಅಧ್ಯಕ್ಷೆ ನಂದಿನಿ, ಕೋಮಲಾ, ಶಶಿಕಲಾ, ನವೀನ್, ಜೆಎಸ್‌ಎಸ್ ಕಾಲೇಜು ಪ್ರಾಂಶುಪಾಲರಾದ ಹೊನ್ನೇಗೌಡ ಇದ್ದರು.

ಜ.18, ಸರಗೂರಲ್ಲಿ ಗುರುವಂದನಾ ಕಾರ್ಯಕ್ರಮ



ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡುತ್ತಿರುವ ಹಳೆಯ ವಿದ್ಯಾರ್ಥಿಗಳು.

ಸರಗೂರು: ಪಟ್ಟಣದ ಸರಕಾರಿ ಪ್ರೌಢ ಶಾಲೆಯಲ್ಲಿ 1988ರಿಂದ 90ರವರೆಗೆ ಓದಿದ ಹಳೆಯ ವಿದ್ಯಾರ್ಥಿಗಳ ಸಮೂಹದಿಂದ ಜ.18ರಂದು ಸರಕಾರಿ ಕಿರಿಯ, ಹಿರಿಯ, ಪ್ರೌಢಶಾಲೆ ಶಿಕ್ಷಕರು, ಪಿಯು ಉಪನ್ಯಾಸಕರಿಗೆ ಗುರುವಂದನಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಪಿ.ರವಿ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಟ್ಟಣದ ಜ್ಯೂನಿಯರ್ ಕಾಲೇಜು ಪ್ರೌಢಶಾಲೆ ಆವರಣದಲ್ಲಿ ಅಂದು ಬೆಳಗ್ಗೆ 10.30ಕ್ಕೆ ನಡೆಯಲಿರುವ ಗುರುವಂದನಾ ಕಾರ್ಯಕ್ರಮದ ಸಾನ್ನಿಧ್ಯವನ್ನು ಬಿಡಗಲು ಪಡುವಲು ವಿರಕ್ತಮಠದ ಮಹದೇವಸ್ವಾಮಿ ವಹಿಸಲಿದ್ದು, 22 ಶಿಕ್ಷಕ ಗುರುಗಳಿಗೆ ಅಭಿನಂದನೆ, ನೆನಪಿನ ಕಾಣಿಕೆ ನೀಡಲಾಗುವುದು ಎಂದರು.

35 ವರ್ಷಗಳ ಹಳೆಯ ವಿದ್ಯಾರ್ಥಿಗಳ ಸಮೂಹ ಸಮಾನ ಮಾನಸ್ಕರು ಒಂದಾಗಿ ಪೂರ್ವಭಾವಿ ಸಭೆ ನಡೆಸಿ, ಈಗಾಗಲೇ ಚರ್ಚಿಸಿದ್ದೇವೆ. ಶಿಕ್ಷಣದಿಂದ ಎಲ್ಲವೂ ಸಾಧ್ಯ ಎಂಬುದು ಸಾಬೀತಾಗಿದ್ದು, ಶಿಕ್ಷಣದಿಂದ ಎಲ್ಲ ರಂಗದಲ್ಲೂ ಇದ್ದೇವೆ. ಹೀಗಾಗಿ ನಮಗೆ ಶಿಕ್ಷಣ ಕಲಿಸಿದ ಗುರುಗಳಿಗೆ ವಂದನೆ ಸಲ್ಲಿಸಲು ಗುರುವಂದನಾ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಚರಿಸಲು ಹಳೆ ವಿದ್ಯಾರ್ಥಿಗಳ ಸಹಕಾರ ಅಗತ್ಯವಾಗಿದೆ ಎಂದು ಅವರು ಮನವಿ ಮಾಡಿದರು.

ವೈದ್ಯಾಧಿಕಾರಿ ಡಾ.ಸೋಮಣ್ಣ ಮಾತನಾಡಿ, ನಮ್ಮೊಡನೆ ಎಸ್‌ಎಸ್‌ಎಲ್‌ಸಿ ಓದಿದ ಸ್ನೇಹಿತರು ವಿವಿಧ ಕ್ಷೇತ್ರದಲ್ಲಿದ್ದು, ಅವರನ್ನು ಒಂದೆಡೆ ಸೇರಿಸುವ ಸಲುವಾಗಿ ಈ ಕಾರ್ಯಕ್ರಮ ರೂಪಿಸಲಾಗಿದೆ. ಎಲ್ಲರೂ ಕಾರ್ಯಕ್ರಮದಲ್ಲಿ ಕುಟುಂಬ ಸಮೇತರಾಗಿ ಭಾಗವಹಿಸಿ, ಯಶಸ್ವಿಗೆ ಸಹಕರಿಸಬೇಕು. ಗುರುಗಳಿಗೆ ವಂದನೆ ಸಲ್ಲಿಸಬೇಕು ಎಂದರು.

ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ಕಲಿಕಾ ಹಬ್ಬ



ಕಲಿಕಾ ಹಬ್ಬವನ್ನು ಗ್ರಾಪಂ ಉಪಾಧ್ಯಕ್ಷ ಹೆಮ್ಮಿಗೆ ಸೋಮಣ್ಣ ಉದ್ಘಾಟಿಸಿದರು.

ತಿ.ನರಸೀಪುರ, ಜ.14– ಮಕ್ಕಳಿಗೆ ಪ್ರಶ್ನೆ ಮಾಡುವ, ವೈಜ್ಞಾನಿಕ ಮನೋಭಾವ ವೃದ್ಧಿಯ ಜತೆಗೆ ಭಾವೈಕ್ಯತೆ ಮೂಡಿಸುವ ಉದ್ದೇಶದಿಂದ ಕಲಿಕಾ ಹಬ್ಬ ಆಯೋಜಿಸಲಾಗಿದ್ದು, ಮಕ್ಕಳು ಇದರ ಪೂರ್ಣ ಲಾಭ ಪಡೆಯಬೇಕು ಎಂದು ಗ್ರಾಪಂ ಉಪಾಧ್ಯಕ್ಷ ಹೆಮ್ಮಿಗೆ ಸೋಮಣ್ಣ ತಿಳಿಸಿದರು.

ತಾಲೂಕಿನ ಹೆಮ್ಮಿಗೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಎಸಿಬಿ ಹುಂಡಿ ಕ್ಲಸ್ಟರ್‌ನ ಎಫ್‌ಎಲ್‌ಎನ್ ಕಲಿಕಾ ಹಬ್ಬ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಕ್ಲಸ್ಟರ್ ಮಟ್ಟದ ಕಲಿಕಾ ಹಬ್ಬ , ಕಲಿಕೆ ನಿರಂತರ. ಇದು ವೃತ್ತಿ, ಜ್ಞಾನ ಸೇರಿದಂತೆ ಮಾನವನ ಸರ್ವತೋಮುಖ ಬೆಳವಣಿಗೆಗೆ ಸಹಕಾರಿ. ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಶಿಕ್ಷಣದ ಜತೆಗೆ ಇನ್ನಿತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ನಿರಂತರವಾಗಿ ಕಲಿಯುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಶಿವಮೂರ್ತಿ ಮಾತನಾಡಿ, ಕಲಿಕಾ ಹಬ್ಬವು ಎಫ್‌ಎಲ್‌ಎನ್ ಮಕ್ಕಳ ಕಲಿಕೆಯನ್ನು ಹೊರ ಚೆಲ್ಲಲು ಒಂದು ಉತ್ತಮವಾದ ಅವಕಾಶವಾಗಿದೆ. ಮಕ್ಕಳ ಸಾಂಸ್ಕೃತಿಕ ಚಟುವಟಿಕೆಗಳಿಗೆ ಒಂದು ವೇದಿಕೆಯಾಗಿದೆ ಎಂದರು

ಇಸಿಓ ಬಸವರಾಜ್, ಬಿಆರ್‌ಪಿ ಮಹದೇವಸ್ವಾಮಿ, ಸಿಆರ್‌ಪಿ ಚೆಲುವರಾಜ್, ತಾಲೂಕು ಪಂಚಾಯಿತಿ ಮಾಜಿ ಸ್ಥಾಯಿ ಸಮಿತಿ ಅಧ್ಯಕ್ಷ ಕುಕ್ಕೂರು ಗಣೇಶ್, ಸದಸ್ಯ ನರಸಿಂಹ ಮಾದನಾಯಕ, ಡೈರಿ ಅಧ್ಯಕ್ಷ ಎಚ್.ವಿ.ಶೇಷಾದ್ರಿ, ಸಿಇಒ ಬಸವರಾಜ ಸಿಆರ್‌ಪಿ ಚೆಲುವರಾಜು ಹಾಗೂ ತಾಲೂಕು ಶಿಕ್ಷಕರ ಸಂಘದ ಉಪಾಧ್ಯಕ್ಷ ಹಾಗೂ ಮುಖ್ಯ ಶಿಕ್ಷಕ ತಲಕಾಡು ಟಿ.ಎನ್.ನಾಗೇಂದ್ರ, ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ಎಚ್.ಟಿ. ವರದರಾಜು, ಗ್ರಾಪಂ ಸದಸ್ಯ ಹೊನ್ನನಾಯಕ, ಯಜಮಾನ ಚಿನ್ನಸ್ವಾಮಿ, ಡಿ.ಮಹದೇವ್, ಕೇಶವಮೂರ್ತಿ, ರಾಮ ಚಂದ್ರ, ಕಾವ್ಯ,ಚಾಮ ನಾಯಕ ಶಾಲೆಯ ಶಿಕ್ಷಕರಾದ ಹರೀಶ್ ಮಾದೇಶ್ ಶ್ರೀಧರ್ ಶಾಂತಲಾ ನಳಿನಿ ಗೀತಾ ಸೌಮ್ಯಶ್ರೀ ಶಿಲ್ಪ ಕುಮಾರಿ ಸವಿತಾ ಹಾಗೂ ಸಿಬಿ ಹುಂಡಿ ಕ್ಲಸ್ಟರ್ ಎಲ್ಲಾ ಶಿಕ್ಷಕರು, ಸೇರಿದಂತೆ ಗ್ರಾಮದ ಮುಖಂಡರು ಮತ್ತು ಪೋಷ ಕರು ಭಾಗವಹಿಸಿದ್ದರು.

> ಪಟ್ಟಣದ ವಿದ್ಯಾರ್ಥಿಗಳಿಗಿಂತಲೂ ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳು ಹೆಚ್ಚು ಪ್ರತಿಭಾನ್ವಿತರಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಪೋಷಕರು ಖಾಸಗಿ ಕಾಲೇಜು ಮತ್ತು ವಿದ್ಯಾ ಸಂಸ್ಥೆಗಳ ಕಡೆ ಮುಖ ಮಾಡುತ್ತಿದ್ದಾರೆ. ಆದರೆ ಈ ಕಾಲೇಜು ತಾಲೂಕಿನಲ್ಲಿ ಉತ್ತಮ ಫಲಿತಾಂಶ ನೀಡಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಒಳ್ಳೆಯ ಶಿಕ್ಷಣ ನೀಡುವ ಮೂಲಕ ಜಿಲ್ಲೆಯಲ್ಲಿ ಹೆಸರು ಪಡೆದಿದೆ. ಇಲ್ಲಿನ ಶಿಕ್ಷಕರು ಉತ್ತಮ ಫಲಿತಾಂಶ ತರುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ.
> –ಎಚ್.ವಿ.ಶೇಷಾದ್ರಿ, ಡೈರಿ ಅಧ್ಯಕ್ಷ

ಸಂಕ್ರಾಂತಿ ಸಂಭ್ರಮಾಚರಣೆ



ಭೇರ್ಯ ಸಮೀಪದ ಸುಗ್ಗನಹಳ್ಳಿ ಗ್ರಾಮದ ಹಾಸನ–ಮೈಸೂರು ಹೆದ್ದಾರಿಯ ಪಕ್ಕದಲ್ಲಿರುವ ವಿಜೇತ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಸಂಕ್ರಾಂತಿ ಸಂಭ್ರಮಾಚರಣೆ ಮಾಡಲಾಯಿತು.

ಪ್ರಶಾಂತ್ ಕುಮಾರ್ ಗಂಗೊಳ್ಳಿ ಅವರಿಗೆ ಸ್ವರ್ಣಭೂಮಿ ಅಚೀವರ್ಸ್ ಅವಾರ್ಡ್



ಹೆಚ್.ಡಿ.ಕೋಟೆ: ಪಟ್ಟಣದ ಪ್ರಶಾಂತ್ ಕುಮಾರ್ ಗಂಗೊಳ್ಳಿ ಅವರಿಗೆ ಸ್ವರ್ಣಭೂಮಿ ಅಚೀವರ್ಸ್ ಅವಾರ್ಡ್ ಲಭಿಸಿದೆ.

ಮೈಸೂರಿನ ಜಿಲ್ಲಾ ಸಾಹಿತ್ಯ ಭವನದಲ್ಲಿ ಸ್ವರ್ಣ ಭೂಮಿ ಫೌಂಡೇಶನ್, ಕರ್ನಾಟಕ ರೋಟರಿ ಕ್ಲಬ್–ಕೋಲಾರ ಜಿಲ್ಲೆ, ಕನ್ನಡ ಸಾಹಿತ್ಯ ಪರಿಷತ್ ಮೈಸೂರು ಜಿಲ್ಲೆ ವತಿಯಿಂದ ನಡೆದ ಕನ್ನಡ ಹಬ್ಬ 2026ನೇ ಕಾರ್ಯಕ್ರಮದಲ್ಲಿ ಹೆಚ್.ಡಿ.ಕೋಟೆ ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಶುಶ್ರೂಷಕರಾಗಿ ಕೆಲಸ ನಿರ್ವಹಿಸುತ್ತಿರುವ ಪ್ರಶಾಂತ್ ಕುಮಾರ್ ಗಂಗೊಳ್ಳಿ ಅವರ ಸಮಾಜ ಸೇವೆ, ಕನ್ನಡ ನಾಡು ನುಡಿ, ಜಲ, ಸಂಸ್ಕೃತಿ, ಶಿಕ್ಷಣ ಕಲೆ, ಸಾಹಿತ್ಯ ಸೇರಿದಂತೆ ಸಾಮಾಜಿಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವುದನ್ನು ಪರಿಗಣಿಸಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.



ಹೆಚ್.ಡಿ.ಕೋಟೆಯ ಚಾಮುಂಡೇಶ್ವರಿ ದೇವಸ್ಥಾನದ ನಿರ್ಮಾಣಕ್ಕೆ ರಾಜಸ್ಥಾನಿ ಸಮಾಜದ ವತಿಯಿಂದ 3,03,100 ರೂ. ಗಳನ್ನು ದೇಣಿಗೆಯಾಗಿ ನೀಡಲಾಯಿತು. ಚಾಮುಂಡೇಶ್ವರಿ ದೇವಾಲಯದ ಸಮಿತಿ ಅಧ್ಯಕ್ಷ ನಟರಾಜು, ನಾಗಣ್ಣ, ವೀರಪ್ಪ, ಕನ್ಯಾಲಾಲ್, ಅಮೃತ್, ಪಪ್ಪು, ರತನ್ ಲಾಲ್, ನಾರಾಯಣ್ ಲಾಲ್, ಅಪುರಾಮ್, ಪಿಯಾರಾಮ್ ಇದ್ದರು.

ಬಸವರಾಜ್ ನಿಧನ



ಮಲ್ಕುಂಡಿ: ಸಮೀಪದ ಹುರ ಗ್ರಾಮದ ನಿವಾಸಿ ಗ್ರಂಥಾಲಯದ ನಿಲಯ ಪಾಲಕ ಬಸವರಾಜ್ (56) ಅನಾರೋಗ್ಯದಿಂದ ಬುಧವಾರ ಮಧ್ಯಾಹ್ನ ಮೈಸೂರಿನ ಆಸ್ಪತ್ರೆಯೊಂದರಲ್ಲಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ಸ್ವಗ್ರಾಮವಾದ ಹುರದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

ನಂಜುಂಡಸ್ವಾಮಿ



ಮೂಗೂರು: ಗ್ರಾಮದ ಅಂಗಡಿ ಬೀದಿಯ ನಿವಾಸಿ ಶ್ರೀ ನಂಜುಂಡೇಶ್ವರ ರೈಸ್ ಮಿಲ್ ಮಾಲೀಕರಾದ ಎಂ.ಎನ್. ನಂಜುಂಡಸ್ವಾಮಿ (ನಂಜಪ್ಪ) ಅನಾರೋಗ್ಯದಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ಮುಂಜಾನೆ ನಿಧನ ಹೊಂದಿದರು. ಅವರಿಗೆ 59 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮೂಗೂರಿನ ಜಮೀನಿನಲ್ಲಿ ಬುಧವಾರ ನಡೆಯಿತು.

ಐದನೇ ಪುಟದಿಂದ

ಭೂಮಿ ಅಕ್ರಮ ಮಂಜೂರು: ಐವರ ಬಂಧನ

ಲೋಕಾಯುಕ್ತ ಎಸ್ಪಿ ಸುರೇಶ್‌ಬಾಬು ನೇತೃತ್ವದ ತನಿಖಾ ತಂಡವನ್ನು ರಚಿಸಿ, ಮೈಸೂರು, ಚಾಮರಾಜನಗರ ಹಾಗೂ ಮಡಿಕೇರಿ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳನ್ನು ತಂಡಕ್ಕೆ ನಿಯೋಜಿಸಿದ್ದರು.

ಕಂಡ ಕಂಡವರಿಗೆ ಸರ್ಕಾರಿ ಸ್ವತ್ತು ಮಂಜೂರು: ಎಲ್ ಅಂಡ್ ಡಿ ಶಾಖೆಯ ದ್ವಿತೀಯ ದರ್ಜೆ ಸಹಾಯಕ ಸತೀಶ್, ನಾಗಮಂಗಲ ಟಿ.ಬಿ.ಬಡಾವಣೆಯ ಯಶವಂತ, ಮೈಸೂರಿನ ಪತ್ರ ಬರಹಗಾರ ಚಿನ್ನಸ್ವಾಮಿ ಹಾಗೂ ಈ ಹಿಂದೆ ನಾಗಮಂಗಲ ತಾಲೂಕು ಕಚೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ವಿಜಯಕುಮಾರ್ ಹಾಗೂ ಯೋಗೇಶ್ ಅವರು ಸೇರಿಕೊಂಡು 2020ರಿಂದ ಇಲ್ಲಿವರೆಗೆ ಸರ್ಕಾರಿ ಜಮೀನು ಹಾಗೂ ಗೋಮಾಳ ಮಂಜೂರು ಮಾಡಲು ತಾಲೂಕು ಕಚೇರಿ ಅಭಿಲೇಖಾಲಯ ಮತ್ತು ಎಲ್ ಅಂಡ್ ಡಿ ಶಾಖೆಯ ದಾಖಲಾತಿಗಳೊಂದಿಗೆ ಸೇರಿಸುತ್ತಿರುವುದಾಗಿ ಆರೋಪಿಗಳು ತಿಳಿಸಿದ್ದು, ಅಲ್ಲದೇ ಕಾರ್‌ನಲ್ಲಿದ್ದ ದಾಖಲಾತಿಗಳನ್ನು ರೆಕಾರ್ಡ್ ರೂಂಗೆ ಸೇರಿಸಲು ತನ್ನ ಬಳಿಯೇ ಇಟ್ಟುಕೊಂಡಿರುವುದಾಗಿ ನಿಜ ಸಂಗತಿ ಒಪ್ಪಿಕೊಂಡಿದ್ದಾರೆ.

ದಾಳಿ ವೇಳೆ ಲೋಕಾಯುಕ್ತ ಅಧಿಕಾರಿಗಳು ದಾಖಲಾತಿಗಳನ್ನು ಪರಿಶೀಲಿಸಿದಾಗ ಹಲವು ಸ್ಫೋಟಕ ವಿಚಾರಗಳು ಬಯಲಿಗೆ ಬಂದಿವೆ. ಎಲ್ ಅಂಡ್ ಡಿ ಶಾಖೆ (ದರಖಾಸ್ತು ವಿಭಾಗ) ಹಾಗೂ ರೆಕಾರ್ಡ್ ರೂಂಗಳನ್ನು ಶೋಧಿಸಿದಾಗ ಸಾಗುವಳಿ ವಿತರಣಾ ವಹಿಯಲ್ಲಿ ಹಲವು ಹೊಸ ಫಲಾನುಭವಿಗಳ ಹೆಸರನ್ನು ಸೇರ್ಪಡೆ ಮಾಡಿ, ಹಳೆಯ ಫಲಾನುಭವಿಗಳ ಹೆಸರು ಅಳಿಸಿರುವುದು, ಮತ್ತೆ ಕೆಲವೆಡೆ ತಿದ್ದಿರುವುದು ಕಂಡು ಬಂದಿದೆ.

ದಾಖಲಾತಿ ತಿದ್ದಿ ಅಕ್ರಮ: ನಾಗಮಂಗಲ ತಾಲೂಕಿನ ದೇವಲಾಪುರ, ಬೆಳ್ಳೂರು, ಹೋಬಳಿಯ ಹೆಚ್.ಎನ್.ಕಾವಲು, ಚಿಕ್ಕಜಟಕ, ಮಲ್ಲಸಂದ್ರ, ದೊಂದೆಮಾದಹಳ್ಳಿ, ಕಾಡೇನಹಳ್ಳಿ, ಹಂಚಿಪುರ, ಗದ್ದೆಬೂವನಹಳ್ಳಿ ಸೇರಿದಂತೆ ಇತರೆ ಗ್ರಾಮಗಳ ಸರ್ವೆ ನಂಬರ್‌ಗಳಾದ 123, 124, 51, 65, 35 ಸೇರಿ ಹಲವು ಸರ್ವೆ ನಂಬರ್‌ಗಳಲ್ಲಿ ಹೊಸ ಹೆಸರು ನಮೂದಿಸಿ ತಿದ್ದು ಪಡಿ ಮಾಡಿರುವುದನ್ನು ಲೋಕಾಯುಕ್ತ ತನಿಖಾಧಿಕಾರಿಗಳು ತನಿಖೆ ವೇಳೆ ಬಯಲು ಮಾಡಿದ್ದಾರೆ. ಅಲ್ಲದೇ ಸುಮಾರು 200 ಕೋಟಿ ಮೌಲ್ಯದ 320 ಎಕರೆಯ ಸರ್ಕಾರಿ ಗೋಮಾಳ, ಜಮೀನಿಗೆ ನಕಲಿ ದಾಖಲಾತಿ ಸೃಷ್ಟಿಸಿ, ಸರ್ಕಾರಿ ದಾಖಲಾತಿಗಳನ್ನು ತಿದ್ದಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

ಬಗರ್ ಹುಕುಂ ಸಮಿತಿಯಲ್ಲಿ ಕಾನೂನಾತ್ಮಕವಾಗಿ ಒಬ್ಬ ವ್ಯಕ್ತಿ ಅಥವಾ ಕುಟುಂಬಕ್ಕೆ ಗರಿಷ್ಠ 4.38 ಎಕರೆ ಜಮೀನು ಸಕ್ರಮ ಮಾಡಲು ಅವಕಾಶವಿದೆ. ಆದರೆ ಇವರು ನಸೀಂ ಕೋಂ ಪ್ರಕೃತ್ ಖಾನ್ ಎಂಬಾತನ ಹೆಸರಿಗೆ 9.27 ಎಕರೆ ಜಮೀನನ್ನು ಮಂಜೂರು ಮಾಡಿದ್ದಾರೆ. ಅಲ್ಲದೆ ಖಲೀಂ ಮುಲ್ಲಾ ಬಿನ್ ಅಹಮ್ಮದ್ ಹುಸೇನ್ ಎಂಬಾತ ಹೆಸರಿಗೆ 11.23 ಎಕರೆ ಜಮೀನನ್ನು ಅಕ್ರಮವಾಗಿ ಮಂಜೂರು ಮಾಡಿರುವುದು ಸ್ಪಷ್ಟವಾಗಿ ಕಂಡು ಬಂದಿದೆ. ಆದರೆ ತಾಲೂಕು ಕಚೇರಿಯ ರೆಕಾರ್ಡ್ ರೂಂನಲ್ಲಿನ ಸಾಗುವಳಿ ವಿತರಣಾ ವಹಿಯಲ್ಲಿರುವಂತೆ ಹೊಸ ಫಲಾನುಭವಿಗಳ ಹೆಸರನ್ನು ಸೇರಿಸಿರುವ ಹಾಗೂ ತಿದ್ದಿರುವ ದಾಖಲಾತಿಗಳು ಲೋಕಾಯುಕ್ತರಿಗೆ ದೊರೆತಿಲ್ಲ.

ಸರ್ಕಾರಿ ಅಧಿಕಾರಿಗಳು, ನೌಕರರು ಹಾಗೂ ಖಾಸಗಿ ವ್ಯಕ್ತಿಗಳು ಸೇರಿಕೊಂಡು ನಕಲಿ ದಾಖಲಾತಿ ಸೃಷ್ಟಿಸಿ 200 ಕೋಟಿ ಮೌಲ್ಯದ ಸರ್ಕಾರಿ ಭೂಮಿ ಕಬಳಿಸಿರುವ ಆರೋಪದ ಮೇಲೆ ಭಾರತೀಯ ದಂಡ ಸಂಹಿತೆ ಕಲಂ 61(2), 318(4), 335, 336(3), 340(2), 303(2), 316(5) ಅಡಿಯಲ್ಲಿ ನಾಗಮಂಗಲ ಟೌನ್ ಪೊಲೀಸ್ ಠಾಣೆಯಲ್ಲಿ ಬಿಎನ್ ಎಸ್ 2023 ರೀತ್ಯಾ ಕ್ರಿಮಿನಲ್ ಕೇಸ್ ದಾಖಲಿಸಲಾಗಿದೆ. ಈ ಸಂಬಂಧ ಆರೋಪಿಗಳನ್ನು ನಾಗಮಂಗಲ ಟೌನ್ ಪೊಲೀಸರು ಬಂಧಿಸಿ ವಿಚಾರಣೆಗೊಳಪಡಿಸಿದ್ದಾರೆ.

‘ಕೈ’ ಮುಖಂಡನ ವಿರುದ್ಧ ಪೌರಾಯುಕ್ತೆ ದೂರು

ಉಲ್ಲೇಖಿಸಿದ್ದು, ರಕ್ಷಣೆ ನೀಡುವಂತೆ ಪೊಲೀಸರಿಗೆ ಮನವಿ ಮಾಡಿದ್ದಾರೆ.

ದೂರಿನಲ್ಲಿ ಏನಿದೆ: ಶಿಡ್ಲಘಟ್ಟದ ಕಾಂಗ್ರೆಸ್ ಪಕ್ಷದ ಪರಾಜಿತ ಅಭ್ಯರ್ಥಿ ರಾಜೀವ್ ಗೌಡ ಅವರು ಯಾವುದೇ ಅನುಮತಿ ಇಲ್ಲದೇ ಅನಧಿಕೃತವಾಗಿ ಅವರ ಭಾವಚಿತ್ರವುಳ್ಳ ಫ್ಲೆಕ್ಸ್‌ಗಳನ್ನ ನಗರದಾದ್ಯಂತ ಅಳವಡಿಸಿದ್ದರು. ನಗರದ ಕೋಟೆ ವೃತ್ತದಲ್ಲಿ ಸಂಚಾರಕ್ಕೆ ಅಡ್ಡಲಾಗಿ ಬ್ಯಾನರ್‌ಗಳನ್ನ ಅಳವಡಿಸಲಾಗಿತ್ತು. ಈ ಬ್ಯಾನರ್ ವಾಹನಗಳಿಗೆ ತಾಕಿ ಕೆಳಗೆ ಬಿದ್ದಿದೆ. ಈ ಹಿನ್ನೆಲೆ ಆರೋಗ್ಯ ನಿರೀಕ್ಷಕರಾದ ಕೃಷ್ಣಮೂರ್ತಿ ಅವರಿಂದ ಬ್ಯಾನರ್ ತೆರವುಗೊಳಿಸಿ ಕಚೇರಿಯಲ್ಲಿ ಇರಿಸಲಾಗಿತ್ತು.

ಈ ವಿಷಯ ತಿಳಿದ ರಾಜೀವ್ ಗೌಡ ಅವರು ನನಗೆ ದೂರವಾಣಿ ಕರೆ ಮಾಡಿ ಮಾತನಾಡಿದರು. ನನ್ನನ್ನ ಒಂದು ಹೆಣ್ಣು ಅಂತಲೂ ನೋಡದೇ ಏಕವಚನದಲ್ಲಿ ಸಂಬೋದಿಸಿ ಕೂಡಲೇ ತೆಗೆದುಹಾಕಿರುವ ಬ್ಯಾನರನ್ನ ಮರು ಸ್ಥಾಪಿಸಬೇಕು. ಇಲ್ಲವಾದಲ್ಲಿ ನಿನ್ನ ಕಚೇರಿಗೆ ಬಂದು ಬೆಂಕಿ ಇಟ್ಟು ಸುಟ್ಟು ಹಾಕ್ತೀನಿ ಮತ್ತು ಸಾರ್ವಜನಿಕರನ್ನ ನಿನ್ನ ವಿರುದ್ಧ ಎತ್ತಿ ಕಟ್ಟಿ ಚಪ್ಪಲಿಯಿಂದ ಹೊಡೆಸುವುದಾಗಿ ಜೊತೆಗೆ ಈ ತಾಲೂಕಿನಿಂದ ನಿನ್ನನ್ನ ಒದ್ದು ಓಡಿಸುವುದಾಗಿ ಅಸಭ್ಯ ಪದಗಳನ್ನು ಬಳಸಿ ತೇಜೋವದೇ ಮಾಡಿದ್ದಾರೆ. ಜೊತೆಗೆ ನಾನು ಶಿಡ್ಲಘಟ್ಟ ನಗರಸಭೆ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ನನ್ನ ಕರ್ತವ್ಯಕ್ಕೂ ಅಡ್ಡಿಪಡಿ ಸಿದ್ದಾರೆ. ಇದರಿಂದ ನನಗೆ ನನ್ನ ಮಾನಹಾನಿ ಯಾಗಿದೆ, ನನ್ನ ಕುಟುಂಬಕ್ಕೂ ಆಘಾತ ವಾಗಿದೆ. ನನ್ನ ಸಿಬ್ಬಂದಿ ಕೂಡ ಕೆಲಸ ಮಾಡೋ ದಕ್ಕೆ ಮಾನಸಿಕ ಧೈರ್ಯ ಕಳೆದುಕೊಂಡಿದ್ದಾರೆ. ಕೇಂದ್ರ ಸ್ಥಾನದಲ್ಲಿ ನಾನು ಒಬ್ಬಳೇ ಇರೋದ್ರಿಂದ ಮುಂದೆ ಆಗುವ ಆಗು–ಹೋಗುಗಳಿಗೆ ರಾಜೀವ್ ಗೌಡ ಅವರೇ ನೇರ ಹೊಣೆಗಾರರಾಗುತ್ತಾರೆ. ಆದ್ದರಿಂದ ಅವರ ವಿರುದ್ಧ ಬಿಎನ್‌ಎಸ್ ಸೆಕ್ಷನ್ 79, 132, 352, 199, 54 ಅಡಿ ಪ್ರಕರಣ ದಾಖಲಿಸಿ ಕ್ರಮ ಜರುಗಿಸಬೇಕು, ಅಲ್ಲದೇ ನನ್ನ ಮತ್ತು ನನ್ನ ಸಿಬ್ಬಂದಿಗೂ ಸೂಕ್ತ ರಕ್ಷಣೆ ನೀಡಬೇಕು ಎಂದು ದೂರಿನಲ್ಲಿ ಮನವಿ ಮಾಡಿದ್ದಾರೆ.

ವೀಡಿಯೋ ಮೂಲಕ ಕ್ಷಮೆಯಾಚನೆ: ಅಮೃತಗೌಡ ಅವರಿಗೆ ಬೆದರಿಕೆ ಹಾಕಿದ ಪ್ರಕರಣ ಬಾರೀ ಕೋಲಾಹಲವನ್ನುಂಟು ಮಾಡಿರುವುದರಿಂದ ಕಾಂಗ್ರೆಸ್ ಮುಖಂಡ ರಾಜೀವ್‌ಗೌಡ ವೀಡಿಯೋ ಮೂಲಕ ಕ್ಷಮೆ ಯಾಚಿಸಿದ್ದಾರೆ.

ಅವರು ಏಕಾಏಕಿ ನನ್ನ ಬ್ಯಾನರ್ ತೆಗೆಸಿದ್ದರು. ಇದನ್ನು ಪ್ರಶ್ನೆ ಮಾಡಲು ಅವರಿಗೆ ಕರೆ ಮಾಡಿದ್ದೆ. ಈ ವೇಳೆ ಮಾತಿಗೆ ಮಾತು ಬೆಳೆದು ಆ ರೀತಿ ಬೈದಿದ್ದೇನೆ ಹೊರತು ಯಾವುದೇ ಉದ್ದೇಶವನ್ನಿಟ್ಟುಕೊಂಡು ಅವರನ್ನು ನಿಂದಿಸಲಿಲ್ಲ. ಅವರನ್ನು ಈ ಮೂಲಕ ಕ್ಷಮೆ ಯಾಚಿಸಿತ್ತೇನೆ ಎಂದು ತಿಳಿಸಿದರು.

ಡಿಕೆಶಿ ದಿಲ್‌ಖುಷ್

ಮಾರ್ಮಿಕ ಸಂದೇಶ ಹಾಕಿದ್ದಾರೆ. ಶಿವಕುಮಾರ್ ಅವರಿಗೂ ಮುನ್ನ ಮುಖ್ಯಮಂತ್ರಿ ಜೊತೆಗಿನ ಸಮಾಲೋಚನೆ ವೇಳೆ, ಸಂಪುಟ ಪುನರ್ ರಚನೆಗೆ ಅವಕಾಶ ನೀಡಬೇಕೆಂಬ ಪ್ರಸ್ತಾವನೆಯನ್ನು ರಾಹುಲ್ ಮುಂದಿಟ್ಟಿದ್ದಲ್ಲದೆ, ಪಕ್ಷದ ಯಾವ ಶಾಸಕರಿಗೂ ಅಧಿಕಾರ ಹಸ್ತಾಂತರದಲ್ಲಿ ಆಸಕ್ತಿ ಇಲ್ಲ ಎಂದಿದ್ದಾರೆ. ಸಿದ್ದರಾಮಯ್ಯ ಮಾತು ಆಲಿಸಿದ ರಾಹುಲ್, ಸಂಪುಟ ಪುನರ್ ರಚನೆ ಕುರಿತು ತಕ್ಷಣದ ನಿರ್ಧಾರ ಬೇಡ, ಸ್ವಲ್ಪ ಸಮಯ ಕಾಯಿರಿ, ದೆಹಲಿಯಲ್ಲಿ ಚರ್ಚೆ ಮಾಡೋಣ ಎಂದು ತಿಳಿಸಿದ್ದಾರೆ. ಇಬ್ಬರೊಂದಿಗೂ ಪ್ರತ್ಯೇಕವಾಗಿ ಮಾತನಾಡಿದ ನಂತರ ರಾಹುಲ್ ಒಟ್ಟಿಗೆ ಕರೆದು, ದೆಹಲಿಗೆ ಆಹ್ವಾನಿಸುತ್ತೇನೆ, ಅಲ್ಲಿ ಮಾತನಾಡೋಣ ಎಂದು ವಿಷಯಕ್ಕೆ ತೆರೆ ಎಳೆದು ಪ್ರಯಾಣ ಬೆಳೆಸಿದ್ದಾರೆ. ರಾಹುಲ್ ಭರವಸೆಯಿಂದ ಪುಳಕಿತರಾದಂತಿರುವ ಶಿವಕುಮಾರ್ ಇಂದು ನಡೆದ ವಿಶೇಷ ಸಂಪುಟ ಸಭೆಗೂ ಮುನ್ನ ಕೆಲವು ಸಚಿವರು ಮತ್ತು ಶಾಸಕರನ್ನು ಸಂಪರ್ಕಿಸಿ, ಮೈಸೂರು ವಿಮಾನ ನಿಲ್ದಾಣದಲ್ಲಿನ ರಾಜ್ಯ ರಾಜಕೀಯ ಬೆಳವಣಿಗೆ ಬಗ್ಗೆ ಸೂಕ್ಷ್ಮವಾಗಿ ಮಾಹಿತಿ ನೀಡಿದ್ದಾರೆ.

ಗ್ರಾಮಸ್ಥರ ತೀವ್ರ ವಿರೋಧ

ಇದಕ್ಕೆ ತಡೆಯೊಡ್ಡಲೇಬೇಕು ಎಂದು ಗ್ರಾಮದ ಮುಖಂಡರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಗ್ರಾಪಂ ಮಾಜಿ ಅಧ್ಯಕ್ಷ ಕೆ.ಭರತ್, ಉಪಾಧ್ಯಕ್ಷ ರವಿ, ಸದಸ್ಯೆ ಅಂಬಿಕಾ, ಗ್ರಾಮಸ್ಥರು ಹಾಗೂ ಭಕ್ತರು ಈ ವೇಳೆ ಹಾಜರಿದ್ದರು.

ನೋಟಿಸ್ ಜಾರಿ, ಫೆ.13ಕ್ಕೆ ಮುಂದಿನ ವಿಚಾರಣೆ: ಚಾಮುಂಡಿ ಬೆಟ್ಟದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೈಕೋರ್ಟ್, ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಹೈಕೋರ್ಟ್ ಬುಧವಾರ ನೋಟಿಸ್ ಜಾರಿ ಮಾಡಿದೆ. ಅಲ್ಲದೆ, ಮುಂದಿನ ವಿಚಾರಣೆಯನ್ನು ಫೆಬ್ರವರಿ 13ಕ್ಕೆ ನಿಗದಿಪಡಿಸಿದೆ. ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಕೋರ್ಟ್, ಪ್ರಾಧಿಕಾರದ ರಚನೆ ಮತ್ತು ಕಾಮಗಾರಿಗಳ ಬಗ್ಗೆ ವಿವರಣೆ ಕೇಳಿದೆ.


ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆಯ ಸಿಂಧುತ್ವ ಸಂಬಂಧವೂ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ.ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯಪೀಠ ವಿಚಾರಣೆ ನಡೆಸಿತು. ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಸಾಯಿ ದೀಪಕ್, ದೇವಾಲಯದ ಆಸ್ತಿ ಮಾಲೀಕತ್ವ ವಿವಾದವು ವಿಭಾಗೀಯ ಪೀಠದ ಮುಂದೆ ಬಾಕಿ ಇದೆ. ಅದರ ನಡುವೆಯೇ ಸರ್ಕಾರ ಶಾಸನದ ಮೂಲಕ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರವನ್ನು ಅಸ್ತಿತ್ವಕ್ಕೆ ತಂದಿದೆ. ಜೊತೆಗೆ ದೇವಾಲಯದ ಆವರಣದಲ್ಲಿ ಶಾಶ್ವತ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳುತ್ತಿದೆ ಎಂದರು.

ಇದಕ್ಕೆ ರಾಜ್ಯ ಸರ್ಕಾರದ ಪರ ಉತ್ತರಿಸಿದ ಹೆಚ್ಚುವರಿ ಅಡ್ವೋಕೇಟ್ ಜನರಲ್ ದೇವದಾಸ್, ಕೇಂದ್ರಸರ್ಕಾರದ ಪ್ರಸಾದ್ ಯೋಜನೆಯಡಿ ಚಾಮುಂಡಿಬೆಟ್ಟದಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ದೇವಾಲಯದ ಆವರಣದಲ್ಲಿ ಯಾವುದೇ ಶಾಶ್ವತ ಕಾಮಗಾರಿ ನಡೆಸುವುದಿಲ್ಲ. ಬದಲಿಗೆ ಭಕ್ತರಿಗೆ ತಂಗುದಾಣ ಮಾತ್ರ ನಿರ್ಮಿಸಲಾಗುತ್ತಿದೆ ಎಂದು ವಿವರಿಸಿದರು. ಇವರ ಹೇಳಿಕೆ ದಾಖಲಿಸಿದ ಕೋರ್ಟ್, ವಿಚಾರಣೆಯನ್ನು ಫೆ.13ಕ್ಕೆ ಮುಂದೂಡಿತು.

ವಿಬಿ–ಜಿ–ರಾಮ್–ಜಿ ಕಾಯಿದೆ ಬಗ್ಗೆ ಚರ್ಚೆಗೆ ಜ.22ರಿಂದ 31ರವರೆಗೆ ವಿಧಾನ ಮಂಡಲ ವಿಶೇಷ ಅಧಿವೇಶನ

ಆರಂಭದ ದಿನ ರಾಜ್ಯಪಾಲರಿಂದ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ

ಬೆಂಗಳೂರು, ಜ.14(ಕೆಎಂಶಿ)– ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನೂತನ ‘ವಿಕಸಿತ ಭಾರತ್–ಗ್ಯಾರಂಟಿ ಫಾರ್ ರೋಜ್ಗಾರ್ ಅಂಡ್–ಆಜೀವಿಕಾ ಮಿಷನ್–ಗ್ರಾಮೀಣ’ (ವಿಬಿ–ಜಿ–ರಾಮ್–ಜಿ) ಕಾಯಿದೆ ಕುರಿತು ಚರ್ಚಿಸಲು ವಿಧಾನಮಂಡಲದ ವಿಶೇಷ ಅಧಿವೇಶನ ಕರೆಯಲು ರಾಜ್ಯ ಸಚಿವ ಸಂಪುಟ ಇಂದಿಲ್ಲಿ ತೀರ್ಮಾನಿಸಿದೆ.



ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ.ಪಾಟೀಲ್, ಜನವರಿ 22ರಿಂದ 31ರವರೆಗೆ ಐದು ದಿನ ಕಲಾಪ ನಡೆಸಲು ತೀರ್ಮಾನಿಸಲಾಗಿದೆ.

ವರ್ಷದ ಮೊದಲ ಅಧಿವೇಶನ ಇದಾಗಿರುವುದರಿಂದ ಜನವರಿ 22ರಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ವಿಧಾನ ಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಲಿದ್ದಾರೆ. ನಂತರ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಜೊತೆಗೆ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನೂತನ ವಿಬಿ–ಜಿ–ರಾಮ್–ಜಿ ಕಾಯಿದೆ ಬಗ್ಗೆಯೂ ವಿಸ್ತೃತ ಚರ್ಚೆ ನಡೆಯಲಿದೆ ಎಂದರು.

ನೂತನ ಕಾಯಿದೆ ಬೀರಿರುವ ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳ ಕುರಿತು ಸಾರ್ವಜನಕರಲ್ಲಿ ಅರಿವು ಮತ್ತು ಜಾಗೃತಿ ಮೂಡಿಸಲು ವಿಧಾನಮಂಡಲದ ಅಧಿವೇಶನದಲ್ಲಿ ವಿಶೇಷ ಚರ್ಚೆ ನಡೆಸಿ, ಕಾಯಿದೆ ಬಗ್ಗೆ ನಿರ್ಣಯ ಕೈಗೊಳ್ಳಲು ಸಭೆ ನಿರ್ಧರಿಸಿತು.

ಜನ ಮತ್ತು ರಾಜ್ಯದ ಹಿತ ಕಾಪಾಡಲು ಸರ್ಕಾರ ಸೂಕ್ತ ಹೆಜ್ಜೆ ಇಡಲಿದೆ, ಒಕ್ಕೂಟ ವ್ಯವಸ್ಥೆಯಲ್ಲಿ ನಮ್ಮ ಜನರ ಹಕ್ಕು ಕಿತ್ತುಕೊಳ್ಳುವ ಸಂದರ್ಭದಲ್ಲಿ ಸರ್ಕಾರ ಕೈಕಟ್ಟಿ ಕೂರಲು ಸಾಧ್ಯವಿಲ್ಲ ಎನ್ನುವ ಮೂಲಕ ಈ ವಿಷಯದಲ್ಲಿ ಕೇಂದ್ರದೊಂದಿಗೆ ಸಂಘರ್ಷಕ್ಕೆ ಹಿಂಜರಿಯುವುದಿಲ್ಲ.

ಜನರಲ್ಲಿ ಅರಿವು ಮತ್ತು ಜಾಗೃತಿ ಮೂಡಿಸಿ ಕೇಂದ್ರದ ಮೇಲೆ ಒತ್ತಡ ಹೇರಲು ಹಾಗೂ ಮನರೇಗಾ ಪುನರ್ ಸ್ಥಾಪನೆಗೆ ಒತ್ತಾಯಿಸಲು ನಿರ್ಣಯ ಕೈಗೊಳ್ಳಲಾಗುವುದು. ಗ್ರಾಮೀಣ ಭಾಗದಲ್ಲಿ ಆಸ್ತಿ ವೃದ್ಧಿ ಹಾಗೂ ಮೂಲಸೌಕರ್ಯ ಕಾಮಗಾರಿಗಳ ಹಕ್ಕನ್ನು ಹೊಸ ಕಾಯಿದೆ ಮೊಟಕುಗೊಳಿಸಿದೆ ಎಂದರು.

ಪ್ರತ್ಯೇಕ ಪ್ರಕರಣ: ಇಬ್ಬರು ಸಾವು

ಮೈಸೂರು, ಜ.14– ಪ್ರತ್ಯೇಕ ಪ್ರಕರಣಗಳಲ್ಲಿ ಇಬ್ಬರು ದುರಂತ ಸಾವಿಗೀಡಾದ ಘಟನೆ ಮೈಸೂರು ಜಿಲ್ಲೆಯಲ್ಲಿ ನಡೆದಿದೆ.

ಆಯತಪ್ಪಿ ಬಿದ್ದು ಸಾವು: ಬೈಕ್‌ನಿಂದ ಆಯತಪ್ಪಿ ಬಿದ್ದು ವ್ಯಕ್ತಿಯೊಬ್ಬರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಭಾನುವಾರ ಸಂಜೆ ಬೆಳವಾಡಿಯಲ್ಲಿ ನಡೆದಿದೆ. ಮೂಲತಃ ಮಧ್ಯಪ್ರದೇಶ ಮೂಲದ, ಮೈಸೂರಿನ ಲಿಂಗದೇವರ ಕೊಪ್ಪಲಿನಲ್ಲಿ ವಾಸವಿದ್ದ ರವಿಕಾಂತ್ ಸಾವನ್ನಪ್ಪಿದವರು. ಖಾಸಗಿ ಕಂಪನಿ ಉದ್ಯೋಗಿಯಾಗಿದ್ದ ರವಿಕಾಂತ್ ಭಾನುವಾರ ಸಂಜೆ ಕ್ರಿಕೆಟ್ ಆಡಲು ಬೆಳವಾಡಿಯ ಆಟದ ಮೈದಾನಕ್ಕೆ ತೆರಳಿದ್ದರು. ಬಳಿಕ ಬೈಕ್‌ನಲ್ಲಿ ಮನೆಗೆ ಬರುತ್ತಿದ್ದ ವೇಳೆ ಆಯತಪ್ಪಿ ಬಿದ್ದು ತೀವ್ರವಾಗಿ ಗಾಯಗೊಂಡಿದ್ದಾರೆ. ಈ ವೇಳೆ ಸ್ಥಳದಲ್ಲಿದ್ದ ಸಾರ್ವಜನಿಕರು ತಕ್ಷಣ ಅವರನ್ನು ಖಾಸಗಿ ಆಸ್ಪತ್ರೆಗೆ ಕರೆದೊಯ್ದರು. ಈ ಸಂದರ್ಭ ರವಿಕಾಂತ್ ಅವರನ್ನು ಪರೀಕ್ಷಿಸಿದ ವೈದ್ಯರು ಸಾವನ್ನಪ್ಪಿರುವುದನ್ನು ಖಚಿತಪಡಿಸಿದರು. ಈ ಸಂಬಂಧ ಇಲವಾಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಾದಚಾರಿ ಸಾವು: ಟೆಂಪೋ ಟ್ರಾವೆಲರ್(ಟಿಟಿ) ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿಯೊಬ್ಬ ಸಾವನ್ನಪ್ಪಿರುವ ಘಟನೆ ಕಡಕೊಳದಲ್ಲಿ ಮಂಗಳವಾರ ರಾತ್ರಿ ನಡೆದಿದೆ.

ನಂಜನಗೂಡು ತಾಲೂಕಿನ ಕಡಕೊಳ ಗ್ರಾಮದ ನಿವಾಸಿ ನಂಜನಾಯಕ ಸಾವನ್ನಪ್ಪಿದವರು. ಇವರು ಮಂಗಳವಾರ ರಾತ್ರಿ ಬ್ರೆಡ್ ತರಲು ಬೇಕರಿಗೆ ಹೋಗುತ್ತಿದ್ದ ವೇಳೆ ನಂಜನಗೂಡು ಕಡೆಯಿಂದ ಬಂದ ಟೆಂಪೋ ಟ್ರಾವೆಲರ್ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರವಾಗಿ ಗಾಯಗೊಂಡ ಅವರನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ದರಾದರೂ ಆ ವೇಳೆಗಾಗಲೇ ನಂಜನಾಯಕ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಮೈಸೂರು ಗ್ರಾಮಾಂತರ ಠಾಣೆ ಪೊಲೀಸರು ಪರಿ ಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಅಕ್ರಮ ಪಡಿತರ ಅಕ್ಕಿ ಸಾಗಣೆ: ಇಬ್ಬರ ಬಂಧನ

ಮೈಸೂರು, ಜ.14– ಅಕ್ರಮವಾಗಿ ಪಡಿತರ ಅಕ್ಕಿ ಸಾಗಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಆಲನಹಳ್ಳಿ ಠಾಣಾ ಪೊಲೀಸರು ಬಂಧಿಸಿದ್ದಾರೆ.

ಮಂಡ್ಯ ಜಿಲ್ಲೆ ಅಂಕನಹಳ್ಳಿ ಗ್ರಾಮದ ನಿವಾಸಿಗಳಾದ ನಿಖಿಲ್ ಹಾಗೂ ಮಹೇಂದ್ರ ಬಂಧಿತ ಆರೋಪಿಗಳು. ಅಕ್ರಮವಾಗಿ ಪಡಿತರ ಅಕ್ಕಿ ಸಾಗಿಸುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು ಆರೋಪಿಗಳನ್ನು ಬಂಧಿಸಿ, ಅವರಿಂದ 617 ಕೆಜಿ ಅಕ್ಕಿ ವಶಕ್ಕೆ ಪಡೆದಿದ್ದಾರೆ. ಈ ಸಂಬಂಧ ಆಲನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಬರಿಮಲೆಯಲ್ಲಿ ಬೆಳಗಿದ ‘ಮಕರ ಜ್ಯೋತಿ’: ಕಣ್ತುಂಬಿಕೊಂಡ ಅಯ್ಯಪ್ಪನ ಭಕ್ತರು

ತಿರುವನಂತಪುರಂ, ಜ.14– ವರ್ಷದ ಮೊದಲ ಹಬ್ಬವಾದ ಮಕರ ಸಂಕ್ರಾಂತಿಯಂದು ಜ್ಯೋತಿ ರೂಪದಲ್ಲಿ ಭಕ್ತರಿಗೆ ಅಯ್ಯಪ್ಪನ ದರ್ಶನವಾಯಿತು. ಸಂಕ್ರಾಂತಿಯಂದು ಕೇರಳದ ಶಬರಿಮಲೆಯಲ್ಲಿ ಉದ್ಭವಿಸುವ ಮಕರ ಜ್ಯೋತಿಯನ್ನು (ಮಕರ ವಿಳಕ್ಕು) ಲಕ್ಷಾಂತರ ಭಕ್ತರು ಕಣ್ತುಂಬಿಕೊಂಡರು.

ಐತಿಹಾಸಿಕ ಶಬರಿಮಲೆ ದೇಗುಲದಲ್ಲಿ ಮಕರ ಜ್ಯೋತಿ ಕಣ್ತುಂಬಿಕೊಳ್ಳಲು ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತಸಾಗರ ನೆರೆದಿತ್ತು. ಸಂಜೆ 6:43 ರಿಂದ 6:46ರ ಸುಮಾರಿಗೆ ಅಯ್ಯಪ್ಪ ದೇಗುಲದ ಎದುರಿನ ಪೊನ್ನಂ ಬಲಮೇಡುವಿನಲ್ಲಿ ಜ್ಯೋತಿ ದರ್ಶನವಾಯಿತು. ಈ ವೇಳೆ ಅಯ್ಯಪ್ಪನ ಭಕ್ತಿಗೀತೆ ಗುಣಗಾನ ಮಾಡುತ್ತಾ ಭಕ್ತರು ಜ್ಯೋತಿ ಕಣ್ತುಂಬಿಕೊಂಡರು.

ಶಬರಿಮಲೆ ಅಯ್ಯಪ್ಪನ ದೇಗುಲದಲ್ಲಿ ಬುಧವಾರ ಸಂಕ್ರಾಂತಿ ಪ್ರಯುಕ್ತ ವಿಶೇಷ ಪೂಜೆ–ಪುನಸ್ಕಾರಗಳು ನಡೆದವು. ಪಂದಳ ರಾಜಮನೆತನದಿಂದ ಆಭರಣಗಳನ್ನು ತಂದು ಅಯ್ಯಪ್ಪಸ್ವಾಮಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ಮಹಾಮಂಗಳಾರತಿ ವೇಳೆಗೆ ಜ್ಯೋತಿರೂಪದಲ್ಲಿ ಅಯ್ಯಪ್ಪನ ದರ್ಶನವಾಯಿತು.

ಇರುಮುಡಿ ಹೊತ್ತು ಸಾಗಿದ ಶಿವಣ್ಣ: ಸಂಕ್ರಮಣ ಸಡಗರದ ನಡುವೆ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಶ್ರೀಕ್ಷೇತ್ರ ಬೆಜ್ಜವಳ್ಳಿ ಅಯ್ಯಪ್ಪ ಸ್ವಾಮಿ ದೇವಾಲಯವು ಭಕ್ತರ ದಂಡಿನಿಂದ ಕಂಗೊಳಿಸಿತು. ಈ ಪವಿತ್ರ ಸ್ಥಳದಲ್ಲಿ ಈ ಬಾರಿ ವಿಶೇಷ ಆಕರ್ಷಣೆ! ಸ್ಯಾಂಡಲ್‌ವುಡ್ ನಟ ಶಿವರಾಜ್ ಕುಮಾರ್. ಇಲ್ಲಿ ಮಾಲೆ ಧರಿಸಿ ಇರುಮುಡಿ ಹೊತ್ತು ದೇವಾಲಯಕ್ಕೆ ಆಗಮಿಸಿದರು.

ಮೈಸೂರಲ್ಲಿ ವಿನೂತನ ಸಂಚಾರಿ ನಿಯಮ ಜಾಗೃತಿ

ಹೆಲ್ಮೆಟ್ ಧರಿಸದ ದ್ವಿಚಕ್ರ ವಾಹನ ಸವಾರರಿಗೆ ಪಾಶ ಹಾಕಿದ ಯಮ!

- ದಂಡ ಪಾವತಿ ಬದಲು ಸಂಕ್ರಾಂತಿ ಎಳ್ಳು, ಬೆಲ್ಲ
- ಹೆಲ್ಮೆಟ್ ಚಿಕ್ಕದು, ಪ್ರಾಣ ದೊಡ್ಡದು; ಮನವರಿಕೆ
- ವಾಹನ ಸವಾರರಿಂದ ಹೆಲ್ಮೆಟ್‌ಧಾರಣೆ ಪ್ರತಿಜ್ಞೆ
- ಜಾಗೃತಿ ಅಭಿಯಾನಕ್ಕೆ ನಟ, ನಟಿಯರು ಸಾಥ್



ಗಂಧದ ಗುಡಿ ಫೌಂಡೇಷನ್ ಆಯೋಜಿಸಿದ್ದ ಸಂಚಾರ ನಿಯಮ ಜಾಗೃತಿ ಕಾರ್ಯಕ್ರಮದಲ್ಲಿ ಹೆಲ್ಮೆಟ್ ಧರಿಸದ ದ್ವಿಚಕ್ರ ವಾಹನ ಸವಾರನ ಹಿಂದೆ ಯಮ ವೇಷಧಾರಿ ಕುಳಿತು ಹೆಲ್ಮೆಟ್ ಧರಿಸದಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ ಎಂದು ಜಾಗೃತಿ ಮೂಡಿಸಿದರು.

ಮೈಸೂರು, ಜ.14(ಬಿಎಲ್‌ಯು)– ಹೆಲ್ಮೆಟ್ ಧರಿಸದ ದ್ವಿಚಕ್ರ ವಾಹನ ಸವಾರರಿಗೆ ಯಮ ಪಾಶ ಹಾಕುವ ಎಚ್ಚರಿಕಾ ವಿನೂತನ ಸಂಚಾರ ಜಾಗೃತಿ ಕಾರ್ಯಕ್ರಮ ಮೈಸೂರಿನಲ್ಲಿ ಇಂದು ನಡೆಯಿತು.

ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ ಅಂಗವಾಗಿ ಗಂಧದ ಗುಡಿ ಫೌಂಡೇಷನ್ ಆಯೋಜಿಸಿದ್ದ ವಿನೂತನ ಸಂಚಾರಿ ನಿಯಮ ಜಾಗೃತಿ ಕಾರ್ಯಕ್ರಮಕ್ಕೆ ಡಿಸಿಪಿ ಎಸ್.ಸುಂದರ್‌ರಾಜ್, ನಗರದ ಕೆ.ಆರ್.ವೃತ್ತದ ಸಿಗ್ನಲ್‌ನಲ್ಲಿ ಸಂಚಾರಿ ಪೊಲೀಸರೊಡನೆ ನಿಂತಿದ್ದ ಯಮನ ವೇಷಧಾರಿ ಹೆಲ್ಮೆಟ್ ಧರಿಸದ ದ್ವಿಚಕ್ರ ವಾಹನ ಸವಾರರ ಹಿಂದೆ ಹೋಗಿ ಕೂರುತ್ತಿದ್ದರು. ಆ ವೇಳೆ ಸವಾರರ ಕುತ್ತಿಗೆಗೆ ಯಮ ಪಾಶ ಹಾಕಿ, ಹೆಲ್ಮೆಟ್ ಧರಿಸದಿದ್ದರೆ ನೇರವಾಗಿ ನನ್ನ ಪಾದ ಸೇರುತ್ತೀಯಾ... ಎಂದು ಎಚ್ಚರಿಸುತ್ತಿದ್ದರು.

ಸಂಚಾರಿ ಪೊಲೀಸರನ್ನು ನೋಡುತ್ತಿದ್ದಂತೆ ಹೆಲ್ಮೆಟ್ ಧರಿಸದ ಕೆಲವು ದ್ವಿಚಕ್ರ ವಾಹನ ಸವಾರರು ದಂಡ ಕಟ್ಟಬೇಕಾಗುತ್ತದೆ ಎಂದು ಹೆದರಿ ವಾಹನವನ್ನು ಹಿಂದಕ್ಕೆ ತಿರುಗಿಸಿಕೊಂಡು ಪರಾರಿಯಾಗುತ್ತಿದ್ದರು.

ಸಂಚಾರಿ ಪೊಲೀಸರ ಕೈಗೆ ಸಿಕ್ಕಿ ಬಿದ್ದಾಗ ದ್ವಿಚಕ್ರ ವಾಹನ ಸವಾರರು ದಂಡ ಪಾವತಿ ಮಾಡಲು ಜೇಬಿಗೆ ಕೈ ಹಾಕುತ್ತಿದ್ದರು. ಆ ವೇಳೆ ಸಂಚಾರಿ ಪೊಲೀಸರು ಹೆಲ್ಮೆಟ್ ಧರಿಸದ ದ್ವಿಚಕ್ರ ವಾಹನ ಸವಾರನಿಗೆ ಗುಲಾಬಿ ಹಾಗೂ ಎಳ್ಳು, ಬೆಲ್ಲ ನೀಡಿ ಹೆಲ್ಮೆಟ್ ಧರಿಸದ ತಪ್ಪು ಮತ್ತೊಮ್ಮೆ ಮಾಡದಂತೆ ತಿಳಿ ಹೇಳುತ್ತಿದ್ದರು.

> **“ಅಪಘಾತದ ವೇಳೆ ಹೆಲ್ಮೆಟ್ ಧರಿಸಿದಾಗ ಪ್ರಾಣ ಉಳಿದ ಬಹಳಷ್ಟು ಉದಾಹರಣೆಗಳಿವೆ. ಹೀಗಾಗಿ ಹೆಲ್ಮೆಟ್ ಧರಿಸುವ ಬಗ್ಗೆ ನಿರ್ಲಕ್ಷ್ಯತೆ ತೋರಿಸಬಾರದು. ಒಂದು ಕುಟುಂಬದಲ್ಲಿ ದುಡಿಯುವ ವ್ಯಕ್ತಿ ಆರೋಗ್ಯದ ಮೇಲೆ ಅವರ ಇಡೀ ಕುಟುಂಬದ ಭವಿಷ್ಯ ನಿಂತಿರುತ್ತದೆ. ದುಡಿಯುವ ವ್ಯಕ್ತಿ ಪ್ರಾಣ ಕಳೆದುಕೊಂಡರೆ ಅವರ ಇಡೀ ಕುಟುಂಬ ಬೀದಿಗೆ ಬರುತ್ತದೆ. ಈ ವಿಚಾರವನ್ನು ಪ್ರತಿಯೊಬ್ಬ ವಾಹನ ಸವಾರರು ಮನಸ್ಸಿನಲ್ಲಿಟ್ಟು ಕೊಂಡು ಎಚ್ಚರ ವಹಿಸಬೇಕು. ಚಾಲನೆಯಲ್ಲಿ ನಿರ್ಲಕ್ಷ್ಯ ತೋರಿದರೆ ಅಪಾಯ ಕಟ್ಟಿಟ್ಟಬುತ್ತಿ.**
> **–ಸುಂದರ್‌ರಾಜ್, ಡಿಸಿಪಿ**

ತಮ್ಮ ತಪ್ಪು ಅರಿತ ದ್ವಿಚಕ್ರ ವಾಹನ ಸವಾರರು ಇನ್ನು ಮುಂದೆ ಕಡ್ಡಾಯವಾಗಿ ಹೆಲ್ಮೆಟ್ ಧರಿಸುತ್ತೇನೆ ಎಂದು ಪ್ರತಿಜ್ಞೆ ಮಾಡಿ ನಿರ್ಗಮಿಸುತ್ತಿದ್ದರು. ಸಂಚಾರ ನಿಯಮವನ್ನು ಕಡ್ಡಾಯವಾಗಿ ಪಾಲಿಸಿರಿ, ಹೆಲ್ಮೆಟ್ ಧರಿಸದೆ ಇರುವುದು, ಓವರ್ ಟೇಕ್ ಮಾಡುವುದು, ಸಿಗ್ನಲ್ ಜಂಪ್ ಮಾಡುವುದು, ಒನ್ ವೇನಲ್ಲಿ ಸಂಚರಿಸುವುದು ಸೇರಿದಂತೆ ಇತರೆ ಸಂಚಾರ ನಿಯಮ ಉಲ್ಲಂಘಿಸಬಾರದು. ವಾಹನ ಚಾಲನೆ ಮಾಡುವಾಗ ಯಾವುದೇ ಕಾರಣಕ್ಕೂ ಮೊಬೈಲ್ ಬಳಸದಿರಿ, ಸುರಕ್ಷಿತ ವಾಹನ ಚಾಲನೆ ಮಾಡಿ, ವಾಹನದ ವಿಮೆ, ಲೈಸೆನ್ಸ್ ಸೇರಿದಂತೆ ಇತರೆ ದಾಖಲಾತಿಗಳನ್ನು ಹೊಂದಬೇಕು ಎಂದು ಇದೇ ವೇಳೆ ವಾಹನ ಸವಾರರಿಗೆ ತಿಳಿ ಹೇಳಲಾಯಿತು.

ಈ ವೇಳೆ ಮಾತನಾಡಿದ ಡಿಸಿಪಿ ಸುಂದರ್‌ರಾಜ್, ರಸ್ತೆ ಸುರಕ್ಷತಾ ನಿಯಮಗಳನ್ನು ಪಾಲಿಸುವ ನಡಾವಳಿಗಳನ್ನು ಪ್ರತಿಯೊಬ್ಬರು ಅನುಸರಿಸಬೇಕು. ದ್ವಿಚಕ್ರ ವಾಹನ ಸವಾರ ಹಾಗೂ ಹಿಂಬದಿ ಕುಳಿತಿರುವವರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು. ಹೆಲ್ಮೆಟ್ ಚಿಕ್ಕದು, ಪ್ರಾಣ ದೊಡ್ಡದು ಎಂಬ ಸತ್ಯ ಅರಿಯಬೇಕು ಎಂದು ಕಿವಿಮಾತು ಹೇಳಿದರು.

ಸಂಚಾರ ನಿಯಮದ ಬಗ್ಗೆ ಮಾಹಿತಿ ಹಾಗೂ ತಿಳುವಳಿಕೆ ಇದ್ದರೂ ಅದನ್ನು ಬಹಳಷ್ಟು ಮಂದಿ ಪಾಲಿಸುತ್ತಿಲ್ಲ. ಅಪಘಾತ ತಪ್ಪಿಸಲು ಚಾಲಕರ ಮನಸ್ಥಿತಿ ಬದಲಾಗಬೇಕು. ಸಂಚಾರ ನಿಯಮ ಪಾಲಿಸಬೇಕು ಎಂದು ಸಂಚಾರ ವಿಭಾಗದ ಎಸಿಪಿ ಶಿವಶಂಕರ್ ಕೂಡ ಸಲಹೆ ನೀಡಿದರು. ದೇವರಾಜ ಸಂಚಾರಿ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ವಿ.ಡಿ.ಮಮತಾ, ಚಿತ್ರನಟ ಸಿದ್ದು ಮೂಲಿಮನಿ, ನಟಿ ರಕ್ಷಿತಾ ಶೆಟ್ಟಿ, ಗಂಧದ ಗುಡಿ ಫೌಂಡೇಷನ್ ರಾಜ್ಯಾಧ್ಯಕ್ಷ ಆರ್ಯನ್ ಸೇರಿದಂತೆ ಇನ್ನಿತರರು ಈ ಸಂದರ್ಭದಲ್ಲಿ ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಪರಾಶಕ್ತಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮನ ಶಂಕರ ವರಪ್ರಸಾದಗಾರು (ತೆ)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ತೇರಾ ಇಸ್ಕ್ ಮೈನ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಜಾ ಸಾಬ್ (ಕ)	2 ಪ್ರದರ್ಶನಗಳು
ರಾಜಕಮಲ್	
ಧುರಂದರ್ (ಹಿ)	4 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	4 ಪ್ರದರ್ಶನಗಳು
ಲಿಡೋ	
ಡೆವಿಲ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ರಾಜಾ ಸಾಬ್ (ಹಿಂ)	4 ಪ್ರದರ್ಶನಗಳು

ರೋಹನ್ ವಿ.ಗಂಗಡ್ಕರ್‌ಗೆ ಅಭಿನಂದನೆ...



ಇತ್ತೀಚೆಗೆ ನಡೆದ ರಾಷ್ಟ್ರಮಟ್ಟದ ಸಿಎಲ್‌ಎಟಿ (ಸಾಮಾನ್ಯ ಕಾನೂನು ಪ್ರವೇಶ ಪರೀಕ್ಷೆ) ಪರೀಕ್ಷೆಯಲ್ಲಿ ದೇಶಕ್ಕೆ 36ನೇ ಮತ್ತು ರಾಜ್ಯಕ್ಕೆ ಎರಡನೇ ಸ್ಥಾನ ಪಡೆದ ರೋಹನ್ ವಿ.ಗಂಗಡ್ಕರ್ ಅವರನ್ನು ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್ ಅಭಿನಂದಿಸಿದರು. ವಕೀಲರಾದ ಗಂಗಾಧರ್, ಪ್ರಕಾಶ್, ರಾಜೀವ್, ಸುಲೋಚನಾ, ಜಯಾಗೌಡ, ನಿತಿನ್, ಪ್ರಿಯದರ್ಶಿನಿ ಉಪಸ್ಥಿತರಿದ್ದರು. ರೋಹನ್ ಅವರು ಲಾಗೈಡ್ ಮಾಸ ಪತ್ರಿಕೆ ಸಂಪಾದಕರು ಮತ್ತು ಖ್ಯಾತ ಹಿರಿಯ ವಕೀಲರೂ ಆದ ಎಚ್.ಎನ್.ವೆಂಕಟೇಶ್ ಅವರ ಪುತ್ರ.

ಜ.30ಕ್ಕೆ ‘ಸೀಟ್ ಎಡ್ಜ್’ ತೆರೆಗೆ

ಮೈಸೂರು, ಜ.14(ಎಂಕೆ)– ಎನ್‌ಆರ್ ಸಿನಿಮಾ ಪ್ರೊಡಕ್ಷನ್ ನಿರ್ಮಾಣದ ಕಾಮಿಡಿ ಮತ್ತು ಹಾರರ್ ಥ್ರಿಲ್ಲರ್ ಕಥೆಯುಳ್ಳ ‘ಸೀಟ್ ಎಡ್ಜ್’ ಚಲನಚಿತ್ರ ಜ.30ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ ಎಂದು ನಾಯಕ ನಟ ಸಿದ್ದು ಮೂಲಿಮನಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚೇತನ್‌ಶೆಟ್ಟಿ ಅವರ ಚೊಚ್ಚಲ ನಿರ್ದೇಶನದಲ್ಲಿ ಮೈಸೂರು, ಶಿವಮೊಗ್ಗ, ಕುದುರೆಮುಖ ಸೇರಿದಂತೆ ಇನ್ನಿತರೆ ಪ್ರಸಿದ್ಧ ಪ್ರವಾಸಿ ತಾಣಗಳಲ್ಲಿ ಚಿತ್ರೀಕರಿಸಲಾಗಿದೆ. ಸಿನಿಮಾದಲ್ಲಿ 3 ಹಾಡುಗಳಿದ್ದು, ಮೈಸೂರು ಪ್ರತಿಭೆ ರವೀಕ್ಷಾ ಶೆಟ್ಟಿ ನಾಯಕಿಯಾಗಿ ನಟಿಸಿದ್ದಾರೆ ಎಂದರು.

ಗಿರಿಧರ ಟಿ.ವಸಂತಪುರ ಚಿತ್ರಕ್ಕೆ ಬಂಡವಾಳ ಹೂಡಿದ್ದು, ಕುಟುಂಬದ ಮನೆ ಮಂದಿಯೆಲ್ಲಾ ಕುಳಿತು ನೋಡಬಹುದಾದ ಮನರಂಜನೆಯ ಸಿನಿಮಾ ಇದಾಗಿದೆ. ಹಾಗೆಯೇ ಮೈಸೂರಿನ ಆರ್ಯನ್ ಗಂಧದ ಗುಡಿ ಚಿತ್ರದಲ್ಲಿ ಕಾಣಿಸಿಕೊಂಡಿದ್ದು, ಕನ್ನಡಾಭಿಮಾನಿಗಳು ಪ್ರೋತ್ಸಾಹಿಸಬೇಕು ಎಂದು ಮನವಿ ಮಾಡಿದರು.

ನಟಿ ರವೀಕ್ಷಾ ಶೆಟ್ಟಿ ಮಾತನಾಡಿ, ಇದೊಂದು ಉತ್ತಮ ಮನರಂಜನೆ ಚಿತ್ರ ನಾಡಿನ ಸಿನಿಮಾ ಪ್ರೇಕ್ಷಕರ ಸಹಕಾರ ಅಗತ್ಯ ಮುಂದಿನ ದಿನಗಳಲ್ಲಿಯೂ ಇನ್ನಷ್ಟು ಉತ್ತಮ ಚಿತ್ರಗಳು ಮೂಡಿಬರಲು ಪ್ರೋತ್ಸಾಹಿಸಬೇಕು ಎಂದು ಮನವಿ ಮಾಡಿದರು. ನಿರ್ದೇಶಕ ಚೇತನ್ ಶೆಟ್ಟಿ, ಕ್ಯಾಮರಾಮನ್ ದೀಪಕ್‌ಕುಮಾರ್, ನಟ ಆರ್ಯನ್ ಗಂಧದ ಗುಡಿ ಉಪಸ್ಥಿತರಿದ್ದರು.

ಮೈಸೂರು ಪಾಲಿಕೆ ನೌಕರರ ಸಂಘದಿಂದ ಪ್ರತಿಭಾ ಪುರಸ್ಕಾರ



ಮೈಸೂರು ಮಹಾನಗರಪಾಲಿಕೆ ನೌಕರರ ಸಂಘದ ವತಿಯಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು.

ಮೈಸೂರು, ಜ. 14–ಪೋಷಕರು ಯಾವುದೇ ನಿರೀಕ್ಷೆ ಮಾಡದೆ ತಮ್ಮ ವಿದ್ಯಾಭ್ಯಾಸಕ್ಕೆ ಬೆಂಬಲವಾಗಿ ನಿಲ್ಲುತ್ತಾರೆ ಎಂಬುದನ್ನು ವಿದ್ಯಾರ್ಥಿಗಳು ಮನಗಾಣಬೇಕು ಎಂದು ಮೈಸೂರು ಶೇಖ್ ತನ್ವೀರ್ ಆಸೀಫ್ ಕಿವಿಮಾತು ಹೇಳಿದರು.

ಮೈಸೂರು ಮಹಾನಗರ ಪಾಲಿಕೆ ನೌಕರರ ಸಂಘದ ವತಿಯಿಂದ ಪಾಲಿಕೆಯ ಶ್ರೀಜಯಚಾಮರಾಜ ಒಡೆಯರ್ ಸಭಾಂಗಣದಲ್ಲಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಕ್ಕಳ ಭವಿಷ್ಯ ರೂಪಿಸುವಲ್ಲಿ ಪೋಷಕರು ಪರಿಶ್ರಮ ಹೆಚ್ಚಿದೆ. ತಮಗೆ ಎಂತಹ ಕಷ್ಟವಿದ್ದರೂ ಮಕ್ಕಳಿಗಾಗಿ ಶ್ರಮಿಸುತ್ತಾರೆ ಎಂದರು.

ಪೋಷಕರ ನೋವು, ಸಮಸ್ಯೆಗಳನ್ನು ನೀವು ನಿತ್ಯ ನೋಡುತ್ತೀರಿ. ಉತ್ತಮ ಪ್ರಜೆಯಾಗಿ ಸಮಾಜದಲ್ಲಿ ಉನ್ನತ ಸ್ಥಾನಕ್ಕೇರುವ ಮೂಲಕ ತಂದೆ–ತಾಯಿಯ ಋಣ ತೀರಿಸಬೇಕು. ಪೋಷಕರ ಹೊರತಾಗಿ ಮತ್ಯಾರೂ ನಿಮ್ಮ ನೆರವಿಗೆ ಬರುವುದಿಲ್ಲ. ಈಗಿನಿಂದಲೇ ಸಂಕಲ್ಪ ಮಾಡಿ ಸಾಧನೆಯತ್ತ ಹೆಜ್ಜೆ ಹಾಕಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಪದವಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸಂಘದ ಸದಸ್ಯ 30ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಅಭಿನಂದಿಸಲಾಯಿತು. ವಲಯ ಅಧಿಕಾರಿಗಳಾದ ದಾಸೇಗೌಡ, ಸೋಮಶೇಖರ್, ಸಂಘದ ಅಧ್ಯಕ್ಷ ಎಸ್.ಯಶೋಧರ, ಉಪಾಧ್ಯಕ್ಷೆ ಕೆ.ಸುಮಂಗಳ, ಖಜಾಂಚಿ ನಸ್ರುಲ್ಲಾ, ನಿರ್ದೇಶಕರಾದ ಬಿ.ಪ್ರಸಾದ್, ಎಸ್.ಮೈತ್ರಿ, ಎನ್.ಮಂಜುನಾಥ್, ಹೆಚ್.ಎಂ.ಶಿವಪ್ರಸಾದ್, ವಿ.ರಾಜೇಶ್ವರಿ ಬಾಯಿ, ಎಂ.ಬಸವಣ್ಣ, ಡಿ.ಸುರೇಂದ್ರಕುಮಾರ್, ಕೆ.ವಿಶ್ವನಾಥ್, ಬಿ.ರಾಜು, ಕಾರ್ಯದರ್ಶಿ ಎನ್.ಶಿವಕುಮಾರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.


ಜ.17ರಂದು ಮೈಸೂರಿನ ಬಿವಿಬಿಯಲ್ಲಿ ಹರಿಚೇತನರ ಕಥಕ್ ನೃತ್ಯ ಪ್ರದರ್ಶನ



ಹರಿಚೇತನ



ನಿಧಿಕಾ



ಶಿರಿಶಾ



ವಾರುಣಿ



ಉದಿಶಾ



ಗೀತಾ ಶರಣ್


ಮೈಸೂರು, ಜ.14– ಮೈಸೂರಿನ ವಿಜಯನಗರ ಮೊದಲನೇ ಹಂತದಲ್ಲಿರುವ ಭಾರತೀಯ ವಿದ್ಯಾಭವನದ ತಾತಾಚಾರಿ ಸಭಾಂಗಣದಲ್ಲಿ ಜ.17 ರಂದು ಸಂಜೆ 6 ಗಂಟೆಗೆ ಬೆಂಗಳೂರಿನ ನೂಪುರ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ ವಿದ್ಯಾರ್ಥಿಗಳಾದ ಹರಿಚೇತನ, ನಿದಿಕಾ, ಸಿರಿಶಾ, ವಾರುಣಿ, ಉದಿಶಾ ಮತ್ತು ಗೀತಾ ಶರಣ್ ಅವರು ಕಥಕ್ ನೃತ್ಯವನ್ನು ಪ್ರಸ್ತುತಪಡಿಸಲಿದ್ದಾರೆ.

ಕಲಾವಿದರ ಪರಿಚಯ: ಬೆಂಗಳೂರಿನ ನೂಪುರ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್‌ನ ನಿರ್ದೇಶಕರಾದ ಪ್ರಸಿದ್ಧ ಕಥಕ್ ನೃತ್ಯ ದಂಪತಿ ಹರಿ ಮತ್ತು ಚೇತನಾ, ಸಾವಿರಕ್ಕೂ ಹೆಚ್ಚು ಪ್ರದರ್ಶನಗಳೊಂದಿಗೆ ವಿಶ್ವದಾದ್ಯಂತ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದ್ದಾರೆ. ಇಪೋ ರಾಜ, ದುಬೈನ ಶೇಖ್ ಮತ್ತು ಜೋರ್ಡಾನ್ ರಾಜಕುಮಾರಿ ಸೇರಿದಂತೆ ಹಲವು ರಾಜಮನೆತನದವರೂ ಈ ದಂಪತಿಯನ್ನು ಆಹ್ವಾನಿಸಿದ್ದಾರೆ. ಲಕ್ಸೆಂಬರ್ಗ್, ಜರ್ಮನಿ, ಶ್ರೀಲಂಕಾ, ಸ್ವಿಟ್ಜರ್ಲೆಂಡ್, ನೆದರ್ಲ್ಯಾಂಡ್ಸ್, ಇಂಡೋನೇಷ್ಯಾ, ಫ್ರಾನ್ಸ್, ಯುಕೆ, ಯುಎಸ್‌ಎ, ಸಿಂಗಾಪುರ್, ಮಲೇಷ್ಯಾ, ದುಬೈ, ದೋಹಾ, ಸೌದಿ ಅರೇಬಿಯಾ ಮತ್ತು ಕುವೈತ್ ಇನ್ನಿತರ ದೇಶಗಳಲ್ಲಿ ಪ್ರದರ್ಶನ ನೀಡಿದ್ದಾರೆ. ಹರಿ ಅವರು ಆರ್ಯಭಟ ಪ್ರಶಸ್ತಿ, ಕೆಂಪೇಗೌಡ ರಾಜ್ಯ ಪ್ರಶಸ್ತಿ, ಶ್ರೀಲಂಕಾದ ರಾಷ್ಟ್ರೀಯ ಶಾಂತಿ ಪ್ರಶಸ್ತಿ ಸೇರಿದಂತೆ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಪಾಲಿಕೆ ಮಾಜಿ ಸದಸ್ಯೆ ಭಾಗ್ಯ ಮಾದೇಶ್ ಹುಟ್ಟುಹಬ್ಬ



ಮೈಸೂರು ಮಹಾ ನಗರಪಾಲಿಕೆ ಮಾಜಿ ಸದಸ್ಯರಾದ ಭಾಗ್ಯ ಮಾದೇಶ್ ಅವರ ಹುಟ್ಟುಹಬ್ಬವನ್ನು ಬಡವರ ಬಂಧು ಅಭಿಮಾನಿಗಳ ಸಂಘದಿಂದ ಮಹಾಜನ ಪ್ರೌಢಶಾಲೆಯಲ್ಲಿ ಆಚರಿಸಲಾಯಿತು. ಈ ವೇಳೆ ಪಾಲಿಕೆ ಮಾಜಿ ಸದಸ್ಯೆ ಪ್ರೇಮಾ ಶಂಕರೇಗೌಡ, ಜಿ.ಪಂ ಮಾಜಿ ಸದಸ್ಯ ಮಾದೇಗೌಡ, ಸುಜಾತ, ರಮೇಶ್, ಪಾಪಣ್ಣ, ಗೋಪಿ, ವಿಂದ್ಯಾ ಇನ್ನಿತರರು ಉಪಸ್ಥಿತರಿದ್ದರು.



ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರು, ತಮ್ಮ ಯಶೋಧ ಕೃಷ್ಣ ಚಾರಿಟಬಲ್ ಟ್ರಸ್ಟ್ ವತಿಯಿಂದ ಹೊರತಂದಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಬುಧವಾರ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಕ್ಷೇತ್ರದ ಇಂದಿರಾ ಬ್ಲಾಕ್ ಅಧ್ಯಕ್ಷರಾದ ರವಿ ಮಂಚೇಗೌಡನಕೊಪ್ಪಲು, ಮಾಜಿ ಮೇಯರ್ ಮೋದಾಮಣಿ, ಮಾಜಿ ಕಾರ್ಪೋರೇಟರ್‌ಗಳಾದ ಡಿ.ನಾಗಭೂಷಣ್, ಪೈ. ಶ್ರೀನಿವಾಸ್ ಇತರರು ಉಪಸ್ಥಿತರಿದ್ದರು.

ಕುಂದು ಕೊರತೆ ನಿವಾರಣೆ ಬೈಕ್ ರ‍್ಯಾಲಿ

ಮೈಸೂರು,ಜ.14– MRC RECORD ವತಿಯಿಂದ MRC ಮಾಜಿ ಸೈನಿಕರು ಹಾಗೂ ಅವರ ಅವಲಂಬಿತರಿಗೆ ಪಿಂಚಣಿ ಸಂಬಂಧ ಕುಂದು ಕೊರತೆ ನಿವಾರಣೆಗಾಗಿ ಬೈಕ್ ರ‍್ಯಾಲಿಯನ್ನು ಏರ್ಪಡಿಸಲಾಗಿರುತ್ತದೆ. ಬೈಕ್ ರ‍್ಯಾಲಿಯು ಜ.20 ರಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಮೈಸೂರಿಗೆ ಆಗಮಿಸಲಿದ್ದು, ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗೆ ಒಳಪಡುವ ಎಂಆರ್‌ಸಿ ನ ಮಾಜಿ ಸೈನಿಕರು ಹಾಗೂ ಅವರ ಅವಲಂಬಿತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪಿಂಚಣಿ ಸಂಬಂಧಿತ ಕುಂದು ಕೊರತೆಗಳನ್ನು ನಿವಾರಿಸಿಕೊಳ್ಳಬಹುದಾಗಿದೆ.


ಹೆಚ್ಚಿನ ಮಾಹಿತಿಗಾಗಿ MRC RECORDನ ಅಧಿಕಾರಿ ಮೊ.ಸಂಖ್ಯೆ 948347 2553 ಮತ್ತು 9596766470 ಅನ್ನು ಸಂಪರ್ಕಿಸಬಹುದೆಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕೆ ಅರ್ಜಿ ವಿಸ್ತರಣೆ

ಮೈಸೂರು,ಜ.14– ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2025–26ನೇ ಸಾಲಿನ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಅರ್ಜಿಗಳನ್ನು ಸಲ್ಲಿಸಲು ಅವಧಿ ವಿಸ್ತರಿಸಿದ್ದು, ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ಮೈಸೂರು ತಾಲೂಕಿನ ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ವಿದ್ಯಾರ್ಥಿವೇತನಕ್ಕಾಗಿ ssp.postmatric.karnataka.gov.In ನಲ್ಲಿ ಫೆ.28ರೊಳಗೆ ಅರ್ಜಿ ಸಲ್ಲಿಸಬೇಕು.

ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ಆಧಾರ್ ಸೀಡಿಂಗ್ ಮಾಡಿಸುವುದು ಕಡ್ಡಾಯ. ಅರ್ಜಿ ಸಲ್ಲಿಸಿದ ನಂತರ Acknowledgement Print ಮತ್ತು ಆಧಾರ್ ಕಾರ್ಡ್ ಪ್ರತಿಯೊಂದಿಗೆ ಗ್ರಾಮ ಒನ್, ಕರ್ನಾಟಕ ಒನ್, ಮೈಸೂರು ಒನ್ ಹಾಗೂ ಇತರೆ ಸೇವಾ ಸಿಂಧು ಕೇಂದ್ರಗಳಿಗೆ ಭೇಟಿ ನೀಡಿ ಕಡ್ಡಾಯವಾಗಿ ಬಯೋಮೆಟ್ರಿಕ್ ಇ–ದೃಢೀಕರಣ ಮಾಡಬೇಕಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೈಸೂರು ತಾಲೂಕು ಸಮಾಜ ಕಲ್ಯಾಣ ಇಲಾಖೆ ಗ್ರೇಡ್–1 ಸಹಾಯಕ ನಿರ್ದೇಶಕರು, ಡಾ॥ ಬಾಬು ಜಗಜೀವನ ರಾಂ ಭವನಕಟ್ಟಡ, ಆದಿಪಂಪ ರಸ್ತೆ ಒಂಟಿಕೊಪ್ಪಲು ಪೂರ್ವ, ಬಡಾವಣೆ ಪಡುವಾರಹಳ್ಳಿ ಮೈಸೂರು–12, ಹಾಗೂ ದೂ.ಸಂ.0821–2520910 ಸಂಪರ್ಕಿಸಿ.

ಆರ್.ಪ್ರಣವ್‌ಗೆ ಪ್ರಥಮ ಬಹುಮಾನ



ಮೈಸೂರು,ಜ.14–ಮೈಸೂರಿನ ಕುವೆಂಪುನಗರದಲ್ಲಿರುವ ಐ.ಕ್ಯೂ ಪ್ಲಸ್ ಅಕಾಡೆಮಿ ವತಿಯಿಂದ ನಡೆದ ರಾಜ್ಯಮಟ್ಟದ ಅಬಕಾಸ್ ಸ್ಪರ್ಧೆಯಲ್ಲಿ ಲೆವೆಲ್–7 ಕ್ಯಾಟಗಿರಿ ಎರಡು ವಿಭಾಗದಲ್ಲಿ ವಿಜಯವಿಠಲ ಶಾಲೆಯ 3ನೇ ತರಗತಿಯ ವಿದ್ಯಾರ್ಥಿ ಪ್ರಣವ್ ಆರ್.ಪ್ರಥಮ ಸ್ಥಾನ ಗಳಿಸಿದ್ದಾರೆ.

ದೇಶ - ವಿದೇಶ

ಜನರ ಕೊಂದು ಮೃತದೇಹ ತಿನ್ನುತ್ತಿದ್ದ ನರಭಕ್ಷಕನ ಸೆರೆ

ಕೂಚ್ ಬೆಹಾರ್: ಪಶ್ಚಿಮ ಬಂಗಾಳದಲ್ಲಿ ನರಭಕ್ಷಕನೊಬ್ಬ ಪತ್ತೆಯಾಗಿದ್ದಾನೆ. ಈತ ಜನರನ್ನು ಕೊಂದು ಮೃತದೇಹವನ್ನು ಎಳೆದುಕೊಂಡು ಹೋಗಿ ತಿನ್ನುತ್ತಿದ್ದ ಎನ್ನುವ ಮಾಹಿತಿಯನ್ನು ಪೊಲೀಸರು ನೀಡಿದ್ದು ಇಡೀ ಬಂಗಾಳದ ಜನತೆಯೇ ಬೆಚ್ಚಿಬಿದ್ದಿದ್ದಾರೆ. ಆರೋಪಿ ಅಪರಿಚಿತ ವ್ಯಕ್ತಿ ಕೊಲೆ ಮಾಡಿ ನಂತರ ಅವನ ಮಾಂಸವನ್ನು ತಿನ್ನಲು ದೇಹವನ್ನು ಮನೆಗೆ ಎಳೆದುಕೊಂಡು ಹೋಗುತ್ತಿದ್ದ, ದಿನ್ಹಾಟಾ ಉಪಜಿಲ್ಲಾ ಪೊಲೀಸ್ ಅಧಿಕಾರಿ ಧಿಮಾನ್ ಮಿತ್ರ ಈ ಬಗ್ಗೆ ಮಾಹಿತಿ ನೀಡಿದ್ದಾರೆ.

ಜನವರಿ 10ರಂದು, ದಿನ್ಹಾಟಾ ಗಡಿಗೆ ಹೊಂದಿಕೊಂಡಿರುವ ಕುರ್ಷಾ ಹ್ಯಾಟ್‌ನಲ್ಲಿರುವ ದೂರದ ಸ್ಮಶಾನದಿಂದ ಪೊಲೀಸರು ಮಾನಸಿಕ ಅಸ್ವಸ್ಥ ವ್ಯಕ್ತಿ ಶವವನ್ನು ವಶಪಡಿಸಿಕೊಂಡಿದ್ದಾರೆ. ಮೃತದೇಹದ ಕುತ್ತಿಗೆ ಮತ್ತು ಭುಜಗಳ ಮೇಲೆ ಆಳವಾದ ಗಾಯಗಳಿದ್ದವು. ಅದರ ನಂತರ, ಪೊಲೀಸರು ಕೊಲೆ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ಆರಂಭಿಸಿದರು. ಅದರ ನಂತರ, ಆರೋಪಿ ಫಿರ್ದೌಸ್ ಆಲಂನನ್ನು ಬಂಧಿಸಲಾಯಿತು. ಅದಾದ ನಂತರ, ಆರೋಪಿಯನ್ನು ವಿಚಾರಣೆ ನಡೆಸಿದಾಗ, ಒಂದು ಸ್ಫೋಟಕ ಮಾಹಿತಿ ಬೆಳಕಿಗೆ ಬಂದಿತು. ಪೊಲೀಸರ ಪ್ರಕಾರ, ಆರೋಪಿ ಯುವಕ ಕೊಲೆಯ ನಂತರ ಆ ವ್ಯಕ್ತಿಯ ಶವವನ್ನು ತನ್ನ ಮನೆಗೆ ತಂದು ದೇಹವನ್ನು ಸ್ವಚ್ಛಗೊಳಿಸುತ್ತಿದ್ದ. ಆರೋಪಿಯು ಮೃತ ದೇಹದ ಮಾಂಸವನ್ನು ತಿನ್ನುವ ಉದ್ದೇಶ ಹೊಂದಿದ್ದ ಎಂಬುದನ್ನು ತಿಳಿದು ಪೊಲೀಸರಿಗೂ ಆಘಾತವಾಗಿತ್ತು

ಇರಾನ್ ಬಿಟ್ಟು ತೆರಳುವಂತೆ ಭಾರತೀಯರಿಗೆ ಸೂಚನೆ

ಟೆಹ್ರಾನ್: ಭಾರತೀಯ ನಾಗರಿಕರು ಮುಂಜಾಗ್ರತೆ ವಹಿಸುವಂತೆ ಸೂಚಿಸಲಾಗಿದೆ. ಪ್ರತಿಭಟನೆ ನಡೆಯುವ




ಸ್ಥಳಗಳಿಗೆ ಹೋಗಬಾರದು. ಸದಾ ಭಾರತೀಯ ರಾಯಭಾರ ಕಚೇರಿಯೊಂದಿಗೆ ಸಂಪರ್ಕದಲ್ಲಿರಬೇಕು. ಸ್ಥಳೀಯ ಮಾಧ್ಯಮಗಳ ಮೇಲೆ ನಿಗಾ ವಹಿಸಬೇಕು ಎಂದಿದೆ.

ಪಾಸ್‌ಪೋರ್ಟ್, ಗುರುತಿನ ಚೀಟಿ, ಪ್ರಯಾಣ ಹಾಗೂ ವಲಸೆ ದಾಖಲಾತಿಗಳನ್ನು ಸುಲಭವಾಗಿ ಲಭ್ಯವಿರುವಂತೆ ಎಲ್ಲ ನಾಗರಿಕರು ನೋಡಿಕೊಳ್ಳಬೇಕು. ಯಾವುದೇ ಸಹಾಯಕ್ಕಾಗಿ ರಾಯಭಾರ ಕಚೇರಿಯನ್ನು ಸಂಪರ್ಕಿಸುವಂತೆ ಸೂಚಿಸಲಾಗಿದೆ. ತುರ್ತು ಸಹಾಯವಾಣಿ ಸಂಖ್ಯೆ: +989128109115; +989128109109; +989128109102; +989932179359. ಇಮೇಲ್: cons.tehranomsa.gov.in.

ಇರಾನ್‌ನಲ್ಲಿರುವ ಭಾರತೀಯರಿಗೆ ಈ ಲಿಂಕ್‌ನಲ್ಲಿ (https://www. meaers.com/request/home) ತಮ್ಮ ಹೆಸರನ್ನು ನೋಂದಾಯಿಸಲು ಸೂಚಿಸಲಾಗಿದೆ. ಇರಾನ್‌ನಲ್ಲಿ ಇಂಟರ್‌ನೆಟ್ ಕಡಿದುಕೊಂಡಿರುವ ಹಿನ್ನೆಲೆಯಲ್ಲಿ ಹೆಸರು ನೋಂದಾಯಿಸಲು ಸಾಧ್ಯವಾಗದಿದ್ದರೆ ಅವರ ಪರವಾಗಿ ಭಾರತದಲ್ಲಿರುವ ಅವರ ಕುಟುಂಬದ ಸದಸ್ಯರು ಹೆಸರು ನೋಂದಾಯಿಸುವಂತೆಯೂ ವಿನಂತಿಸಲಾಗಿದೆ.

ಸುಕ್ಮಾದಲ್ಲಿ 29 ನಕ್ಸಲೀಯರು ಶರಣಾಗತಿ

ಸುಕ್ಮಾ: ಛತ್ತೀಸ್‌ಗಢದ ಸುಕ್ಮಾ ಜಿಲ್ಲೆಯಲ್ಲಿ ಬುಧವಾರ 29 ನಕ್ಸಲರು ಪೊಲೀಸರ ಮುಂದೆ ಶರಣಾಗಿದ್ದಾರೆ.



ನಿಷೇಧಿತ ಸಿಪಿಐ (ಮಾವೋವಾದಿ)ನ ಪ್ರಮುಖ ಸದಸ್ಯರಾಗಿ ಸಕ್ರಿಯರಾಗಿರುವ ಈ ಮಾವೋವಾದಿಗಳು, ಪೂನಾ ಮಾರ್ಗೆಮ್ ಉಪಕ್ರಮದಡಿ ಹಿರಿಯ ಪೊಲೀಸ್ ಮತ್ತು ಸಿಆರ್‌ಪಿಎಫ್ ಅಧಿಕಾರಿಗಳ ಮುಂದೆ ತಮ್ಮ ಶಸ್ತ್ರಾಸ್ತ್ರಗಳನ್ನು ಒಪ್ಪಿಸಿ ಶರಣಾಗಿದ್ದಾರೆ ಎಂದು ಸುಕ್ಮಾ ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಚವಾಣ್ ಹೇಳಿದ್ದಾರೆ. ರಾಜ್ಯ ಸರ್ಕಾರದ ಶರಣಾಗತಿ ಮತ್ತು ಪುನರ್ವಸತಿ ನೀತಿಯಿಂದ ಪ್ರಭಾವಿತರಾಗಿದ್ದಾರೆ ಎಂದು ತಿಳಿಸಿದ್ದಾರೆ. ಶರಣಾದವರಲ್ಲಿ, ಗೋಗುಂಡಾ ಪ್ರದೇಶದ ದಂಡಕಾರಣ್ಯ ಆದಿವಾಸಿ ಕಿಸಾನ್ ಮಜ್ದೂರ್ ಸಂಘಾನ್ (DAKMS–ಮಾವೋವಾದಿಗಳ ಪ್ರಮುಖ ಘಟಕ) ಮುಖ್ಯಸ್ಥ ಪೋಡಿಯಮ್ ಬುಧ್ರಾ ಅವರ ತಲೆಗೆ 2 ಲಕ್ಷ ರೂ. ಬಹುಮಾನವಿತ್ತು. ಇತರ ನಕ್ಸಲರು ಡಿಎಕೆಎಂಎಸ್, ಮಿಲಿಟಿಯಾ ಮತ್ತು ಮಾವೋವಾದಿಗಳ ಜನತಾನ ಸರ್ಕಾರ್ ಘಟಕಗಳ ಸದಸ್ಯರಾಗಿದ್ದರು. ಗೋಗುಂಡಾ ಪ್ರದೇಶದಲ್ಲಿ ಇತ್ತೀಚೆಗೆ ಭದ್ರತಾ ಶಿಬಿರದ ಸ್ಥಾಪನೆಯು ಶರಣಾಗತಿಯಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ. ಶಿಬಿರ ಸ್ಥಾಪನೆಯ ನಂತರ, ನಕ್ಸಲ್ ವಿರೋಧಿ ಕಾರ್ಯಾಚರಣೆಗಳು ತೀವ್ರಗೊಂಡವು. ನಿರಂತರ ಒತ್ತಡ ಹಾಗೂ ನಿರಂತರ ಶೋಧ ಕಾರ್ಯಾಚರಣೆ ಈ ಪ್ರದೇಶದಲ್ಲಿ ಮಾವೋವಾದಿ ಚಟುವಟಿಕೆಗಳನ್ನು ಗಮನಾರ್ಹವಾಗಿ ಕಡಿಮೆ ಮಾಡಿದೆ ಎಂದು ಹೇಳಿದ್ದಾರೆ.

ಥೈಲ್ಯಾಂಡ್‌ನಲ್ಲಿ ಚಲಿಸುತ್ತಿದ್ದ ರೈಲಿನ ಮೇಲೆ ಬಿತ್ತು ಕ್ರೇನ್: 22 ಸಾವು



ಬ್ಯಾಂಕಾಂಕ್: ಚಲಿಸುತ್ತಿದ್ದ ರೈಲಿನ ಮೇಲೆ ಕ್ರೇನ್ ಬಿದ್ದು ಕನಿಷ್ಠ 22 ಜನ ಮೃತಪಟ್ಟ ಘಟನೆ ಥೈಲ್ಯಾಂಡ್‌ನ ಈಶಾನ್ಯ ಪ್ರಾಂತ್ಯದಲ್ಲಿ ನಡೆದಿದೆ. ಬ್ಯಾಂಕಾಕ್‌ನಿಂದ ಈಶಾನ್ಯಕ್ಕೆ 230 ಕಿಮೀ (143 ಮೈಲುಗಳು) ದೂರದಲ್ಲಿರುವ ನಖೋನ್ ರಾಟ್ಚಸಿಮಾ ಪ್ರಾಂತ್ಯದ ಸಿಖಿಯೊ ಜಿಲ್ಲೆಯಲ್ಲಿ ಇಂದು ಬೆಳಗ್ಗೆ ಈ ದುರಂತ ಸಂಭವಿಸಿದೆ. ರೈಲು ಉಬೊನ್ ರಾಟ್ಚತಾನಿ ಪ್ರಾಂತ್ಯಕ್ಕೆ ಹೋಗುತ್ತಿತ್ತು. ಈ ವೇಳೆ ಹೈಸ್ಪೀಡ್ ರೈಲು ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದ ಕ್ರೇನ್ ಕುಸಿದು ಒಂದು ಬೋಗಿಯ ಮೇಲೆ ಬಿದ್ದಿದೆ. ಕ್ರೇನ್ ಬೋಗಿಯ ಮೇಲೆ ಬಿದ್ದ ಕೂಡಲೇ ರೈಲು ಹಳಿ ತಪ್ಪಿದೆ. ರೈಲಿನಲ್ಲಿ ಸುಮಾರು 195 ಜನ ಪ್ರಯಾಣಿಸುತ್ತಿದ್ದರು. ಅಪಘಾತದ ಬಗ್ಗೆ ತನಿಖೆಗೆ ಸರ್ಕಾರ ಆದೇಶಿಸಿದೆ.

ಉತ್ತರ ಭಾರತದ ಹೆಣ್ಣು ಮಕ್ಕಳು ಮನೆ ಕೆಲಸಕ್ಕೆ ಸೀಮಿತ: ಡಿಎಂಕೆ ಸಂಸದ ಮಾರನ್ ವಿವಾದ

ಚೆನ್ನೈ: ಉತ್ತರ ಭಾರತದ ಹೆಣ್ಣು ಮಕ್ಕಳು ಮನೆ ಕೆಲಸಕ್ಕೆ ಮಾತ್ರ ಸೀಮಿತವಾಗಿದ್ದಾರೆ ಎಂದು ಹೇಳುವ ಮೂಲಕ ಡಿಎಂಕೆ ಸಂಸದ ದಯಾನಿಧಿ ಮಾರನ್ ಮತ್ತೊಂದು ವಿವಾದದ ಸುಳಿಗೆ ಸಿಲುಕಿದ್ದಾರೆ.



ಈ ಹಿಂದೆ ಹಿಂದಿ ಭಾಷಿಗರು ತಮಿಳುನಾಡಿನಲ್ಲಿ ಶೌಚಾಲಯ ತೊಳೆಯುತ್ತಾರೆ ಎಂದು ಹೇಳಿ ಉತ್ತರ ಭಾರತದ ಜನರ ಕೋಪಕ್ಕೆ ಗುರಿಯಾಗಿದ್ದರು. ಇಲ್ಲಿನ ಕ್ವಾಯ್ದ್–ಇ–ಮಿಲ್ಲತ್ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಹೆಣ್ಣು ಮಕ್ಕಳನ್ನು ಶಿಕ್ಷಣ ಮತ್ತು ವೃತ್ತಿ ಬದುಕಿನಿಂದ ದೂರ ಮಾಡಿ ಮನೆಗೆಲಸ ಮಾಡುವಂತೆ ಪ್ರೋತ್ಸಾಹಿಸಲಾಗುತ್ತದೆ. ಆದರೆ, ತಮಿಳುನಾಡಿನಲ್ಲಿ ಮಹಿಳಾ ಶಿಕ್ಷಣ ಮತ್ತು ಸಬಲೀಕರಣವನ್ನು ಪ್ರೋತ್ಸಾಹಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಉತ್ತರ ಭಾರತದ ರಾಜ್ಯಗಳಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿ ಕೆಲಸಕ್ಕೆ ಕಳುಹಿಸದೇ ಮನೆಗೆಲಸ ಮಾಡುವಂತೆ ಹೇಳುತ್ತಾರೆ. ಆದರೆ, ನಮ್ಮಲ್ಲಿ ಹೆಣ್ಣು ಮಕ್ಕಳು ಶಿಕ್ಷಣ ಪಡೆಯುವುದನ್ನು ಪ್ರೋತ್ಸಾಹಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ಇಷ್ಟೇ ಅಲ್ಲ, ಉತ್ತರ ಭಾರತದ ರಾಜ್ಯಗಳು ಇಂಗ್ಲಿಷ್ ಕಲಿಯುವುದನ್ನು ಉತ್ತೇಜಿಸುವುದಿಲ್ಲ. ಹೆಣ್ಣು ಮಕ್ಕಳು ಇಂಗ್ಲಿಷ್ ಕಲಿಯದಂತೆ ಮಾಡಿ ಅವರನ್ನು ಗುಲಾಮರಂತೆ ನೋಡಿಕೊಳ್ಳಲಾಗುತ್ತಿದೆ ಎಂದಿದ್ದಾರೆ.


ಕಾರ್ತಿಕ್ (KK)
ರವರಿಗೆ ಜನ್ಮದಿನದ ಶುಭಾಶಯಗಳು
ಶುಭಕೋರುವವರು : ಕಾರ್ತಿಕ್ (KK) ಸ್ನೇಹ ಬಳಗ, ಮೈಸೂರು
ARAVINDA PRINTERS
GiRi
9343706416